ಕರ್ನಾಟಕ ವಿಧಾನಸಭೆ

ಮಂಗಳವಾರ 08ನೇ ಮಾರ್ಚ್ 2011ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10.25 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು

1. ವಿತ್ತೀಯ ಕಾರ್ಯಕಲಾಪಗಳು:

2011–12ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, 2011–12ರ ಬಿಜೆಪಿ ನೇತೃತ್ವದ ಮಾನ್ಯ ಯಡಿಯೂರಪ್ಪನವರು ಮಂಡಿಸಿದ ಆಯವ್ಯಯವನ್ನು ವಿರೋಧಿಸಿ ನಾನು ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಬಹುಶ: ಆಯವ್ಯಯ ಎಂದರೆ ಆಯವ್ಯಯ ಕೃಷಿ ಭಾಗ–1 ಎಂದು ಪುಸ್ತಕದಲ್ಲಿ ಮೊದಲನೆಯದಾಗಿ print ಆಗಿರುವಂಥದ್ದು. ಆಯ–ವ್ಯಯ ಎಂದರೆ receipts and expenditure ಇಲ್ಲದೆ ಇದ್ದರೆ ಅದು budget ಅನಿಸುವುದಿಲ್ಲ. ಇಲ್ಲಿ receipts ಇಲ್ಲ ಕೇವಲ expenditure ಮಾತ್ರ ಇರುವುದರಿಂದ ಇದು ಬಜೆಟ್ ಆಗುವುದಕ್ಕೆ ಹೇಗೆ ಸಾಧ್ಯ? ಇದನ್ನು ಬಜೆಟ್ ಎಂದು ಕರೆಯುವುದಕ್ಕೆ ಸಾಧ್ಯವಿಲ್ಲ. ಇಡೀ ಪ್ರಪಂಚದಲ್ಲಿಯೇ ಬಜೆಟ್ ಎಂದರೆ ಅದಕ್ಕೆ ಅದರದೇ ಆದ ಒಂದು ಮಹತ್ವವಿದೆ. ಇಡೀ ಪ್ರಪಂಚದಲ್ಲಿ ಎಲ್ಲಿಯೇ ಹೋದರೂ ಬಜೆಟ್ ಎನ್ನುವ ಪದವನ್ನೇ ಉಪಯೋಗಿಸುತ್ತಾರೆ. ರಾಜ್ಯದಲ್ಲಿ ನಡೆಯುವ ವಿಧಾನಸಭೆ ಆಗಬಹುದು ಅಥವಾ Parliament ಆಗಬಹುದು ಅಥವಾ ಯಾವುದೇ ದೇಶವಾದರೂ ಕೂಡ ಬಜೆಟ್ ಮಂಡನೆಗೆ ಅತ್ಯಂತ ವಿಶೇಷ ಮಹತ್ವ ಇರುವಂಥದ್ದನ್ನು ನಾವು ನೋಡಿದ್ದೇವೆ. ನನಗೆ ಜ್ಞಾಪಕ ಬರುವ ಒಂದು ವಿಷಯವೇನೆಂದರೆ, ಬಜೆಟ್ ಮಂಡನೆ ಮಾಡುವಾಗ ನಾವು ಸತ್ಸಂಪ್ರದಾಯಗಳನ್ನು ಅನುಸರಿಸಬೇಕಾಗುತ್ತದೆ. ನಾವು ಯಾರೇ ಶಾಸಕರಾಗಲಿ ಶಾಸನ ಸಭೆಯೊಳಗೆ ಬರಬೇಕಾದಾಗ ಪ್ರಮಾಣವಚನ ಸ್ವೀಕಾರ ಮಾಡುತ್ತೇವೆ. ನಾವು ಸಂವಿಧಾನಕ್ಕೆ loyal ಆಗಿರುತ್ತೇವೆ, ಸಂವಿಧಾನಬದ್ಧವಾಗಿ ಇರುವ

ರೀತಿಯಲ್ಲಿ ನಮ್ಮ ನಡವಳಿಕೆ ಇರುತ್ತದೆ ಎನ್ನುವ ಪ್ರಮಾಣವಚನವನ್ನು ಸ್ವೀಕಾರ ಮಾಡುತ್ತೇವೆ. ಆದರೆ, ಮಾನ್ಯ ಯಡಿಯೂರಪ್ಪನವರು ಮಂಡಿಸಿದ ಆಯವ್ಯಯ ಸಂವಿಧಾನ ಬದ್ಧವೇ ಎನ್ನುವ ಪ್ರಶ್ನೆ ಬರುತ್ತದೆ. ಕೃಷಿ ಬಜೆಟ್ ಅನ್ನು ತಾವು ಏಕೆ ವಿಶೇಷವಾಗಿ ಮಂಡಿಸುತ್ತೇವೆ ಎನ್ನುವುದನ್ನು ಹೇಳಿದ್ದಾರೆ ಮತ್ತು ಅದಕ್ಕೆ ತಮ್ಮದೇ ಆದ ಕಾರಣಗಳನ್ನು ಕೊಟ್ಟಿದ್ದಾರೆ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕೃಷಿಗೆ ಆಯವ್ಯಯ ಏಕೆ ಬೇಕು ಎನ್ನುವುದರ ಬಗ್ಗೆ ಒಂದು ಅಂಶ ಎಂದರೆ ಸರಾಸರಿ ಹಿಡುವಳಿ 1.63 ಹೆಕ್ಟೇರ್ಸ್‌ಗೆ ಬಂದು ನಿಂತಿದೆ. ಆ ಕಾರಣಕ್ಕೋಸ್ಕರ ನಾವು ಬಜೆಟ್ ಮಂಡನೆ ಮಾಡುತ್ತಿದ್ದೇವೆಂದು ಹೇಳಿದಿರಿ. ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ, ನಾವು ಸತ್ಸಂಪ್ರದಾಯಗಳನ್ನು ಮೆರೆಯಬೇಕಾಗುತ್ತದೆ, ಉಳಿಸಬೇಕಾಗುತ್ತದೆ. ಕರ್ನಾಟಕದ ವಿಧಾನಸಭೆಗೆ ತನ್ನದೇ ಆದ ಇತಿಹಾಸವಿದೆ, 100 ವರ್ಷಕ್ಕೂ ಹೆಚ್ಚಿನ ಇತಿಹಾಸ ಇರುವುದನ್ನು ಕಾಣಬಹುದು. History of Karnataka Legislature ಎನ್ನುವ ಪುಸ್ತಕವನ್ನು ಹಿಂದಿನ Speaker ರವರು ಬರೆಸಿ ಬಿಡುಗಡೆ ಮಾಡಿದ್ದಾರೆ. ಅದೆಲ್ಲಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯದಲ್ಲಿ ನಮ್ಮ ಸಂಪ್ರದಾಯ, Parliamentary system of democracy ಎನ್ನುವುದು ಯಾವಾಗ start ಆಗಿದ್ದು ಎಂದರೆ ಎಲ್ಲರೂ British ರನ್ನು quote ಮಾಡುತ್ತಾರೆ. House of Commons, House of Lords ಇರಬಹುದು, ಅದನ್ನು mention ಮಾಡಿ ಪ್ರಜಾಪ್ರಭುತ್ವ ಪ್ರಾರಂಭವಾಗಿದ್ದೇ ಅಲ್ಲಿ ಎಂದು ಹೇಳುತ್ತಾರೆ. ಆದರೆ, ನಾವು ಎಲ್ಲೋ ಒಂದು ಕಡೆಗೆ ನಿಜವಾಗಿಯೂ ಕೂಡ ಈ ರಾಜ್ಯದಲ್ಲಿ ಪ್ರಜಾಪ್ರಭುತ್ವ ಎನ್ನುವುದು, ಆ Parliamentary system of democracy ಪ್ರಾರಂಭವಾಗಿದ್ದು ಎಲ್ಲಿಂದ ಎಂದರೆ ಅದು ಕರ್ನಾಟಕ ನಾಡಿನಲ್ಲಿ, 12ನೇ ಶತಮಾನದಲ್ಲಿದ್ದಂಥ ಬಸವೇಶ್ವರರು ಪ್ರಾರಂಭ ಮಾಡಿದಂಥ system, ಇವತ್ತು ನಾವು ಅದರ ಹಿನ್ನೆಲೆಯಲ್ಲಿ ಅದರಿಂದ ಪರೋಕ್ಷವಾಗಿ ಪ್ರೇರಿತರಾಗಿ ಬಹುಶ: ರಾಜಮಹಾರಾಜರು ಪ್ರೇರಿತರಾಗಿ ಆ ಸಂವಿಧಾನವನ್ನು ನಮ್ಮಲ್ಲಿ 100 years of Legislature History ಬರಬೇಕಾದರೆ ಅವೆಲ್ಲ ಪೂರಕ ಎಂದು ನಾನು ಭಾವಿಸುತ್ತೇನೆ.

ಅನುಭವ ಮಂಟಪಕ್ಕೂ ನಮ್ಮ Parliament ಗೂ ಏನು ವ್ಯತ್ಯಾಸ? .ಯಾವ ವ್ಯತ್ಯಾಸವನ್ನೂ ನಾವು ಕಾಣುವುದಕ್ಕಾಗುವುದಿಲ್ಲ. ಹನ್ನೇರಡನೇ ಶತಮಾನದಲ್ಲಿ ಬಸವಣ್ಣನವರು ತಂದಂಥ ನೀತಿಗಳು ಏನೆಲ್ಲಾ ಇದ್ದವು. ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ವಿಚಾರಗಳು ಬಸವೇಶ್ವರರು ಹೇಳಿದಂಥ ಮಾತುಗಳು. ಸ್ತ್ರೀ ಸಮಾನತೆಯ ಬಗ್ಗೆ ಅವರು ಹಿಂದೆಯೇ ಸಾರಿ ಸಾರಿ ಹೇಳಿದರು. ಕಾಯಕವೇ ಕೈಲಾಸ ಎಂದು ಹೇಳಿದರು. Right to work. Socialism ಬಗ್ಗೆ ಮಾತನಾಡಿದರು. ದಾಸೋಹ ಮಾಡಬೇಕೆನ್ನುವ ಮಾತನ್ನು ಹೇಳಿದರು. And equality ಸಾಮಾನತೆ, ಸಾಮಾಜಿಕ ಚಿಂತನೆ, that is Freedom of Expression ಇವೆಲ್ಲವು ಯಾವುದರ ಮುಖೇನ ಎಂದರೆ ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ fundamental rights ನಲ್ಲಿ ಅವರ ಎಲ್ಲಾ ವಿಚಾರಗಳು ಅಡಕವಾಗಿವೆ. ಅವರ ವಚನಗಳಲ್ಲಿರುವ ಸಾರವನ್ನು ನೀವು ತೆಗೆದುಕೊಂಡು ನೋಡಿದರೆ.

ಶ್ರೀ ಗೋವಿಂದ ಎಂ.ಕಾರಜೋಳ : ಮಾನ್ಯ ಜಯಚಂದ್ರವರೆ ತಾವು ಒಂದು ನಿಮಿಷ ಯೀಲ್ಡ್ ಆಗಿ. ತಾವು ಬಸವಣ್ಣನವರ ವಿಚಾರ ಹೇಳಿದ್ದರಿಂದ ನಾನು ಏಳಬೇಕಾಯಿತು, ಇಲ್ಲದಿದ್ದರೆ ನಾನು ಏಳುತ್ತಿರಲಿಲ್ಲ. ಮಾನ್ಯ ಜಯಚಂದ್ರರವರು ಪ್ರಸ್ತಾಪಿಸಿರತಕ್ಕಂಥ ಹನ್ನೆರಡನೆ ಶತಮಾನದ ಅನುಭವ ಮಂಟಪದ ಬಗ್ಗೆ ಮತ್ತು ಸಾಮಾಜಿಕ ಸಮಾನತೆ ಬಗ್ಗೆ ಬಹಳ ವಿಶೇಷವಾದ ವಿಷಯವನ್ನು ಪ್ರಸ್ತಾಪಿಸಿದರು. ಬಸವಣ್ಣನವರಿಗೆ ಇದ್ದಂಥ ಕಳಕಳಿ, ಕಾಳಜಿ ಇವತ್ತು ನಮಗೆ ಇದ್ದಿದ್ದರೆ ಈ ಅಸಮಾನತೆ ಅಳಿಸಿ ಸಮಾನತೆ ಬರಲಿಕ್ಕೆ ಆರವತ್ತು ವರ್ಷ ಬೇಕಾಗಿರಲಿಲ್ಲ. ಅದಕ್ಕೆ ಮಾನ್ಯ ಬಸವಣ್ಣನವರು ತಮ್ಮ ವಚನದಲ್ಲಿ ಹೇಳುತ್ತಾರೆ.

"ಭಕ್ತಿಯಿಲ್ಲದ ಬಡವನಾನಯ್ಯ, ಕಕ್ಕಯ್ಯನ ಮನೆಯಲ್ಲೂ ಬೇಡಿದೆ, ಚೆನ್ನಯ್ಯನ ಮನೆಯಲ್ಲೂ ಬೇಡಿದೆ, ದಾಸಯ್ಯನ ಮನೆಯಲ್ಲೂ ಬೇಡಿದೆ, ಎಲ್ಲಾ ಪುರಾತಕರು ನೆರೆದು ಭಕ್ತಿಯ ಭಿಕ್ಷೆಯನ್ನಿಕ್ಕಿದಡೆ ನನ್ನ ಪಾತ್ರೆ ತುಂಬಿತ್ತಾ ನೋಡಾ ಕೂಡಲ ಸಂಗಮದೇವಾ" ಎಂದು ಹೇಳುತ್ತಾರೆ. ತಾವು ದಯಮಾಡಿ ಮುಂದುವರಿಸಿ.

ಶ್ರೀ ಅಭಯಚಂದ್ರ.ಕೆ. : ಆರವತ್ತು ವರ್ಷದ ಮಾತು ಮಾತನಾಡುತ್ತೇವೆ. ಈ ಐದು ವರ್ಷದಲ್ಲಿ ನಾವೇನು ಮಾಡಿದ್ದೇವೆ? ಅದು ಬಹಳ ಪ್ರಾಮುಖ್ಯ. ಅದನ್ನೂ ಕೂಡ ಜನ ನೋಡುತ್ತಾರೆ.

ಅಧ್ಯಕ್ಷರು : ಅದರ ಬಗ್ಗೆ ಚರ್ಚೆ ಬೇಡ. ಅವರು ಮಾತನಾಡಲಿ.

ಶ್ರೀ ಗೋವಿಂದ ಎಂ.ಕಾರಜೋಳ: ತಾವು ಹಿರಿಯ ಸದಸ್ಯರು. ನಾನು ಯಾವುದೇ ಪಾರ್ಟಿ, ವ್ಯಕ್ತಿಯನ್ನು ಉದ್ದೇಶಿಸಿ ಮಾತನಾಡಿಲ್ಲ. ನಾನು ಅವರಿಗೆ ಪೂರಕವಾಗಿ ಮಾತನಾಡಿದೆ ಅಷ್ಟೆ.

ಶ್ರೀ ಟಿ.ಬಿ.ಜಯಚಂದ್ರ: Directive Principles ನಲ್ಲಿ ಇರುವ ತತ್ವವೇ ವಚನದ ಸಾರ. ಇಂತಹ ಹಿನ್ನೆಲೆಯುಳ್ಳ ಬಸವಣ್ಣನವರ ಬಗ್ಗೆ ನಾವೂ ಯಾವತ್ತು ಜ್ಞಾಪಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. England ನ House of Commons ನ ಬಗ್ಗೆ ನಾವು ನೆನೆಸಿಕೊಳ್ಳುವುದಕ್ಕೆ ಹೋಗುತ್ತೇವೆ. ಆ ಸಂಪ್ರದಾಯದ ಹಿನ್ನೆಲೆಯಲ್ಲಿ ಬಂದಂಥ ನಾವು ಕೃಷಿ ಬಜೆಟ್ ಎಂದು ಹೇಗೆ ಕರೆಯಬೇಕು? ನಿಜ ನಾವು ಒಪ್ಪುತ್ತೇನೆ. ಈ ಮನೆಯಲ್ಲಿ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಂಗಲ್ ಹನುಮಂತಯ್ಯನವರು, ನಿಜಲಿಂಗಪ್ಪನವರು, ಮುಂತಾದವರು ಬಹಳಷ್ಟು ಜನ ಆಡಳಿತ ನಡೆಸಿಕೊಟ್ಟಿದ್ದಾರೆ. ನಿಜಲಿಂಗಪ್ಪನವರ ಒಂದು ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. ನಿಜಲಿಂಗಪ್ಪನವರು ಅವರು ಸಾಯುವವರೆವಿಗೂ ಕೂಡ ಅವರ ಜೊತೆಯಲ್ಲಿ ನಾವು ಬಹಳ ಹತ್ತಿರದಿಂದ ಇದ್ದೇವು. ನಾನು ಆಗಾಗ್ಗೆ ಭೇಟಿ ಮಾಡುತ್ತಿದ್ದಾಗ ಅವರು ಒಂದು ಮಾತು ಹೇಳುತ್ತಿದ್ದರು. ಅಂಬೇಡ್ಕರ್‌ರವರು ನಿಜಲಿಂಗಪ್ಪನವರಿಗೆ ಒಂದು ಮಾತು ಹೇಳಿದ್ದರಂತೆ. ಏನೆಂದರೆ, "ಬಸವ ತತ್ವವನ್ನು ನೀವು ಅರ್ಥ ಮಾಡಿಕೊಂಡರೆ ಈ ದೇಶಕ್ಕೆ ಎಂತದ್ದೋ ಒಂದು ದೊಡ್ಡ ಕೊಡುಗೆಯಾಗುತ್ತಿತ್ತು, ಅದನ್ನು ನೀವು ತೆಗೆದುಕೊಂಡು ಹೋಗಿ ನೀವು ನಿಮ್ಮ ಜೇಬಿನಲ್ಲಿಟ್ಟುಕೊಂಡಿರಿ "ಹೀಗೆಂದು ಅಂಬೇಡ್ಕರ್‌ರವರು ನಿಜಲಿಂಗಪ್ಪ ನವರಿಗೆ ಹೇಳಿದ್ದನ್ನು ನಿಜಲಿಂಗಪ್ಪನವರು ನನಗೆ ಹೇಳುತ್ತಿದ್ದರು. ಆ ಬಸವ ಧರ್ಮದ ಹಿನ್ನೆಲೆಯಲ್ಲಿ, ಶರಣ ಸಾಹಿತ್ಯದ ಹಿನ್ನೆಲೆಯಲ್ಲಿ ಬಂದಂಥ ಯಡಿಯೂರಪ್ಪನವರು ತನ್ನದೇ ಆದಂಥ ಸತ್ಸಂಪ್ರದಾಯಗಳನ್ನು ಎಷ್ಟರ ಮಟ್ಟಿಗೆ

ಪಾಲಿಸಿದ್ದಾರೆನ್ನುವುದು ಕೂಡ ಬಹಳ ಮುಖ್ಯ. ಕೃಷಿಗೆ ಆದ್ಯತೆ ಕೊಡಬೇಕೆನ್ನುವುದು ನಿಜ. ಕೃಷಿಗೆ ಹೆಚ್ಚು ಒತ್ತು ಕೊಡಬೇಕು. ನಮ್ಮೆಲ್ಲರನ್ನು ಕಾಡತಕ್ಕಂಥ ಪ್ರಶ್ನೆ ಕೃಷಿ ಮುಂದೆ ಏನಾಗುತ್ತದೆ? ಏನು ಬೇಕಾದರೂ ಆಗಬಹುದು. ಕೃಷಿ ಮಾತ್ರ ನಿಲ್ಲಕೂಡದು. ಆ ರೀತಿಯಾಗಿ ನಾವು ಯೋಚಿಸಿದಾಗ ವಸ್ತುಸ್ಥಿತಿ ಇವತ್ತೇನಾಗಿದೆ ಎಂದು ನೋಡೋಣ. ಯಡಿಯೂರಪ್ಪನವರು ಸದನದ ಹೊರಗೆ ಯಾವ ರೀತಿ ನಡೆದುಕೊಂಡರು? ಸದನದ ಹೊರಗೆ ಅವರು ಯಾವುದೇ ರೀತಿಯ ಪ್ರತಿಕ್ರಿಯೆ ಮಾಡಿದರೂ ಕೂಡ, ಅವರು ಒಂದು ಪಕ್ಷಕ್ಕೆ ಸೇರಿದಂಥವರಿರುತ್ತಾರೆ, ಆ ಪಕ್ಷದ ತೀರ್ಮಾನದ ಹಿನ್ನೆಲೆಯಲ್ಲಿ ಅವರು ಯಾವ ರೀತಿಯಾದರೂ ಮಾಡಲಿ. ರೈತರನ್ನು ಕರೆದುಕೊಂಡು ಬಂದರು ಅದು ಎಲ್ಲವೂ ಸರಿ, ನಾನೇನು ಅದರ ಬಗ್ಗೆ ಆಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಸದನದೊಳಗೆ ಬಂದಾಗ ತನ್ನದೇ ಆದಂಥ ನಿಯಮಗಳನ್ನು ಅನುಸರಿಸಬೇಕಾಗಿತ್ತು. ಆ ನಿಯಮಗಳನ್ನು ಅನುಸರಿಸಲಿಲ್ಲಾ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚಿಸುತ್ತೇನೆ. ನೀವು ಇಲ್ಲಿ ಸಂವಿಧಾನ ಎತ್ತಿ ಹಿಡಿಯುತ್ತೇವೆಂದು ಭಾಷಣ ಮಾಡುತ್ತೀರಿ. ಸಂವಿಧಾನದ ಪ್ರಕಾರ ಬಜೆಟ್‌ನ್ನು ಮಂಡನೆ ಮಾಡಿದ್ದಾರೆಯೇ ಎಂದು ಹೇಳಿದರೆ ಖಂಡಿತ ಇಲ್ಲ. Article 150 ರ ಅಡಿಯಲ್ಲಿ, ನೀವು ಯಾವುದೇ ಬಜೆಟ್‌ನ್ನು ಮಂಡನೆ ಮಾಡಬೇಕಾದಾಗ ನೀವು Accountant General, It is recognized Constitutional Authority ಅವರನ್ನು consult ಮಾಡದೇ head of the accounts ನ ಒಪ್ಪಿಗೆ ಪಡೆಯದೇ ಅದು ಮಾಡುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿ ಯಾರೂ ಮಾಡದಿರುವ ಕೆಲಸ ಯಡಿಯೂರಪ್ಪನವರು ಮಾಡಿದ್ದಾರೆನ್ನುವ ಮಾತನ್ನು ಹೇಳುತ್ತಾರೆ. ಯಾರೂ ಮಾಡದಿರುವ ಕೆಲಸ ಅದು ನಿಜ. ಯಾರೂ ಏಕೆ ಮಾಡಲಿಲ್ಲವೆಂದರೆ, ಇದು ಸಂವಿಧಾನ ಬದ್ಧವಾಗಿರುವ ರೀತಿಯಲ್ಲಿ ಆಯ ವ್ಯಯ, Income and expenditure, Annual Financial statement ಅದನ್ನು ಸರಿದೂಗಿಸಲಿಕ್ಕೆ ಸಾಧ್ಯವಿಲ್ಲ ಬಜೆಟ್‌ನ್ನು ಮಂಡನೆ ಮಾಡುವುದಕ್ಕಾಗುವುದಿಲ್ಲವೆನ್ನುವ ತೀರ್ಮಾನಕ್ಕೆ ಬಂದರು. ನಾವು ಇವತ್ತು ಕೃಷಿಯನ್ನು ನೆನಪಿಸಿಕೊಳ್ಳಬೇಕಾದಾಗ, ಶರದ್

ಪವಾರ್ ಅವರನ್ನು ನೆನಪಿಸಿಕೊಳ್ಳುತ್ತೇವೆ. ಅವರು ಕೂಡ ಮುಖ್ಯಮಂತ್ರಿಗಳಾಗಿ ಆ ಪ್ರಯತ್ನವನ್ನು ಮಾಡಿದ್ದರು ಎಂದು ಕೇಳಿದ್ದೆ. ಅವರು ಏಕೆ ಮಾಡಲಿಲ್ಲ ಎಂದು ನಾನು ತಿಳಿಯುವುದಕ್ಕೆ ಪ್ರಯತ್ನಿಸಿದೆ. ಈಗ ಅವರು ಕೇಂದ್ರದ ಕೃಷಿ ಸಚಿವರಾಗಿದ್ದಾರೆ. ಅದೇ ರೀತಿಯಾಗಿ ನಿತೀಶ್ ಕುಮಾರ್‌ರವರು ಕೃಷಿಗೆ ಬಹಳ ಆಸಕ್ತಿವಹಿಸಿದವರು, ಇವತ್ತು ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಮೊದಲು ಕೇಂದ್ರದಲ್ಲಿ ಕೃಷಿ ಮಂತ್ರಿಗಳಾಗಿದ್ದರು ಆ ಸಂದರ್ಭದಲ್ಲಿ ನಾನು ಕೂಡ ಸಚಿವನಾಗಿದ್ದೆ. ಅವರಿಗೆ ಕೃಷಿಯ ಬಗ್ಗೆ ಇರುವ ಕಳಕಳಿ ಏನೆಂದು ನಾನು ಅರ್ಥ ಮಾಡಿಕೊಂಡಿದ್ದೆ. ಆದರೆ, ಅವರ್ಯಾರು ಕೂಡ ಮಾಡದೇ ಇರುವ ಕೆಲಸ ಮಾಡಿದ್ದಾರೆಂದರೆ, ಅವರು ಏಕೆ ಮಾಡಲಿಲ್ಲವೆಂದರೆ ಇದೇ ಮೂಲ ಕಾರಣ. ಸಂವಿಧಾನ ಬದ್ಧವಾಗಿರುವ ನಿಯಾಮಾವಳಿ ಪ್ರಕಾರ ಮಾಡದೇ ಇದ್ದರೆ ಅದು ಬಜೆಟ್ ಆಗುವುದಿಲ್ಲವೆನ್ನತಕ್ಕಂಥದ್ದು. ಈ ದೇಶದಲ್ಲಿ ಚರಿತ್ರೆಯಲ್ಲಿ ಆಯವ್ಯಯ ಎನ್ನುವುದರ ಜೊತೆಗೆ ರೈಲ್ವೆ ಬಜೆಟ್‌ನ್ನು ಮಂಡಿಸುವುದನ್ನು ನಾವು ನೋಡುತ್ತೇವೆ. ರೈಲ್ವೆ ಬಜೆಟ್‌ನ್ನು ಮಂಡಿಸಬೇಕಾದರೆ ಅದಕ್ಕೊಂದು ದೊಡ್ಡ ಇತಿಹಾಸ. ಸ್ವಾತಂತ್ರ್ಯದ ಪೂರ್ವದಲ್ಲಿ 1920 ರ ಹಿಂದೆಯೇ Central Legislative Assembly ಆ ಬಗ್ಗೆ ಕುಳಿತು ತೀರ್ಮಾನಿಸುತ್ತಾರೆ. ಆ ತೀರ್ಮಾನದಂತೆ ಇವತ್ತು ಸಪರೇಟಾಗಿ ಬಜೆಟ್ ಮಂಡನೆಯಾಗುವಂಥ ಕೆಲಸ ಆಗುತ್ತಿದೆ. ಅದರಲ್ಲಿ ವರಮಾನವೂ ಇದೆ, ಖರ್ಚು ಇದೆ, ಅಭಿವೃದ್ಧಿ ಮಾಡುವುದಕ್ಕೂ ಕೂಡ ಸಾಧನಗಳೂ ಕೂಡ ಬೇಕಾದಷ್ಟು ಇವೆ. ಆ ಕಾರಣಕೋಸ್ಕರ ಮಾಡಿದ್ದಾರೆ. ಆದರೆ, ಯಾರು ಮಾಡದಿರುವ ಪ್ರಯತ್ನವನ್ನು ನಾನು ಮಾಡಿದ್ದೇನೆಂದು ಹೇಳಿದ್ದಾರೆ. ಹೋಗಲಿ ಏನು ಮಾಡಿದ್ದಾರೆ? ಏಳೆಂಟು ಇಲಾಖೆಯಲ್ಲಿರುವುದನ್ನು ಎಲ್ಲವನ್ನೂ ಒಂದು ಕಡೆ ಕ್ರೋಢೀಕರಿಸಿ, ಅದರ core duties ಬೇರೆ ಇರುತ್ತದೆ. ಸುಮಾರು ಐನೂರು Heads of Accounts, Core net ನಲ್ಲಿ ಬರತಕ್ಕಂಥ ರೀತಿಯಲ್ಲಿ ಇನ್ನೂರು Heads of Accounts, ಅದರ ಜೊತೆಯಲ್ಲಿ Sub accounts ಬೇರೆ ಇರುತ್ತವೆ. ಎಲ್ಲಾ ಸೇರಿ ಸುಮಾರು ಐನೂರು Sub accounts ಎಂದು ಮಾಡಿ ಒಂದು ಕೃಷಿ ಬಜೆಟ್ ಮಾಡಿದ್ದಾರೆ. ನನಗೆ ಅನ್ನಿಸುತ್ತದೆ ಇದು

ಸಾಧ್ಯವೇ? ಇದರಿಂದ ನಿಮಗೆ ಏನು ಲಾಭವಾಗುತ್ತದೆ? ಜನರಿಗೆ ಆಶ್ವಾಸನೆಗಳನ್ನು ಕೊಟ್ಟಿದ್ದೀರಿ. ನಾವು ಏನೋ ದೊಡ್ಡ ರೀತಿಯಲ್ಲಿ ಕೃಷಿಕರಿಗೆ ಸಹಾಯ ಮಾಡಿ ಸಾಧನೆ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ಎಲ್ಲಿ ಸಹಾಯ ಮಾಡುವುದಕ್ಕೆ ಆಗುತ್ತದೆ? ನಾನು ಏನು ಹೇಳುತ್ತೇನೆಂದರೆ, ಇದರಿಂದ ತೊಂದರೆಯಾಗುತ್ತದೆ. ಅದೆಲ್ಲಕ್ಕಿಂತಲೂ ಹೆಚ್ಚಾಗಿ ನಿಮ್ಮ ಕಳಕಳಿಯನ್ನು ನಾನು ಮೆಚ್ಚುವುದರ ಜೊತೆಗೆ ನೀವು ಎಷ್ಟರ ಮಟ್ಟಿಗೆ ಕಳೆದ ಮೂರು ವರ್ಷಗಳಲ್ಲಿ ನೀವು ಯಾವ್ಯಾವ ಬಾಬುನಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಎನ್ನುವುದು ಕೂಡ ಬಹಳ ಮುಖ್ಯ. ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾರಣ ಏನೆಂದರೆ, ಈಗಾಗಲೇ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು, ಹೆಚ್ಚು ವಿಷಯವನ್ನು ಹೆಚ್ಚು ಬೆಳಕನ್ನು ಚೆಲ್ಲುವಂಥ ಪ್ರಯತ್ನ ಮಾಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ನೀವು ಖರ್ಚು ಮಾಡಿರುವ ಹಣ ಎಷ್ಟು? ನೀವು ಬಜೆಟ್‌ನಲ್ಲಿ ಹೇಳಿದಿರಿ. 2007–08, 2008–09, 2009–10, ಈ ಮೂರು ವರ್ಷಗಳಲ್ಲಿ ಒಟ್ಟಾರೆಯಾಗಿ ನಾನು ಹೇಳುತ್ತೇನೆ. ಸುಮ್ಮನೆ ಕಾಲ ವ್ಯಯ ಮಾಡುವುದು ಬೇಡ. ನೀವು Plan ನಲ್ಲಿ provision ಮಾಡಿದ್ದು 1,913 ಕೋಟಿ. ನೀವು expenditure ಮಾಡಿದ್ದು 1,646 ಕೋಟಿ.

ನಾನ್–ಪ್ಲಾನ್‌ನಲ್ಲಿದ್ದಂಥ 746 ಕೋಟಿ ರೂಪಾಯಿಗಳಲ್ಲಿ ನೀವು ಕೇವಲ 587 ಕೋಟಿ ಮಾತ್ರ ಖರ್ಚು ಮಾಡಿದ್ದೀರಿ. ಒಟ್ಟಾರೆ ಸೇವಿಂಗ್ಸ್ ಎಷ್ಟಾಗುತ್ತದೆಂದರೆ, ಪ್ಲಾನ್‌ನಲ್ಲಿ 267 ಕೋಟಿ ಮತ್ತು ನಾನ್‌ಪ್ಲಾನ್‌ನಲ್ಲಿ 159 ಕೋಟಿ ಸೇವಿಂಗ್ಸ್ ಆಗುತ್ತದೆ. ನಿಮ್ಮ 3 ವರ್ಷಗಳ ಬಜೆಟ್‌ನಲ್ಲಿ ಹಣವನ್ನೇ ಖರ್ಚು ಮಾಡದೆ ನೀವು ಇಷ್ಟೊಂದು ಸೇವಿಂಗ್ಸ್ ತೋರಿಸಿರುವಾಗ, ನಾನು ಕೃಷಿಕರಿಗೆ ಒಂದು ಬಜೆಟ್ ಅನ್ನು ಕೊಡುತ್ತೇನೆಂದು ಹೇಳತಕ್ಕಂಥ ಮಾತಿನಲ್ಲಿ ಏನಾದರು ಅರ್ಥವಿದೆಯೇ? ಯಾವ್ಯಾವ ಸೆಕ್ಟರ್ಸ್‌ನಲ್ಲಿ ನೀವು ಖರ್ಚು ಮಾಡಿಲ್ಲವೆಂದರೆ, ಕರ್ನಾಟಕ ಅಗ್ರಿಕಲ್ಚರ್ ಮಿಷನ್‌ಗೆ 94 ಕೋಟಿ ರೂಪಾಯಿ ಇಟ್ಟು ಅಲ್ಲಿ ಒಂದು ರೂಪಾಯಿ ಕೂಡ ಖರ್ಚು ಮಾಡುವುದಕ್ಕೆ ಆಗಿಲ್ಲ. Crop husbandry, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಮಣ್ಣು ಮತ್ತು ನೀರು

ಸಂರಕ್ಷಣೆ, ಎಸ್‌ಸಿಪಿ, ಬೆಳೆ ವಿಮೆ ಈ ಎಲ್ಲಾ ಯೋಜನೆಗಳಲ್ಲಿಯೂ ಕೂಡ ನೀವು ಹಣ ಖರ್ಚು ಮಾಡುವುದಕ್ಕೆ ಆಗಿಲ್ಲ. ಖರ್ಚು ಮಾಡದೆ ಸೇವಿಂಗ್ಸ್ ತೋರಿಸುತ್ತಿದ್ದೀರಿ. ಅನಾವಶ್ಯಕವಾಗಿ ನೀವು ಖರ್ಚು ಮಾಡುವುದಕ್ಕೆ ಆಗದೆ ಇದ್ದರೆ ಈ ಹಣವನ್ನು ಮರು ಹೊಂದಾಣಿಕೆಯಾದರೂ ಮಾಡಬೇಕಾಗಿತ್ತಲ್ಲವೆ? ಬಾಕಿ ಇರುವ ಹಣದಿಂದ ಬೇರೆ ಬೇರೆ ಯೋಜನೆಗಾದರೂ ಖರ್ಚು ಮಾಡುವುದಕ್ಕೆ ಪ್ರಯತ್ನವಾದರೂ ಮಾಡಬೇಕಾಗಿತ್ತಲ್ಲವೆ? ಈ ಪ್ರಯತ್ನ ಕೂಡ ನೀವು ಮಾಡಿಲ್ಲ. ಆದರೆ, ಕೆಲವು ಕಡೆ ಪ್ರಯತ್ನ ಮಾಡಿದರೂ ಸಹ ಇನ್ನೂ ಕೂಡ ಸೇವಿಂಗ್ಸ್ ತೋರಿಸುತ್ತೀರೆಂದರೆ ಇದು ನನಗೆ ಅರ್ಥವಾಗುತ್ತಿಲ್ಲ. ಈ ಬಜೆಟ್‌ನಲ್ಲಿ ಇಟ್ಟಂಥ ಹಣವನ್ನು ಸಹ ಖರ್ಚು ಮಾಡುತ್ತಿಲ್ಲ ಮತ್ತೆ ಇದನ್ನು re–appropriate ಮಾಡಿ ಬೇರೆ ಬಾಬ್ತುಗಳಿಗೂ ಸಹ ಖರ್ಚು ಮಾಡದೆ ಅದನ್ನು ಸೇವಿಂಗ್ಸ್ ಆಗಿ ತೋರಿಸುತ್ತಿದ್ದೀರೆಂದರೆ ಇದೇನರ್ಥ? ಬಜೆಟ್‌ನ ಮಹತ್ವ ಏನೆಂಬುದು ಇದರಲ್ಲಿ ಸಂಪೂರ್ಣವಾಗಿ ಹಾಳಾಗಿದೆ. ಬಜೆಟ್‌ನಲ್ಲಿ ನಾವು project ಮಾಡಿರುವುದೆಲ್ಲಾ inflated figures ಆಗಿದೆ. Inflated figures ಎಷ್ಟಿದೆ ಎಂಬ ಬಗ್ಗೆ ಮಾನ್ಯ ಸಿದ್ದರಾಮಯ್ಯರವರು ಈಗಾಗಲೇ ಹೇಳಿದ್ದಾರೆ. 2008–09ರಲ್ಲಿ 13,000 ಕೋಟಿ ಖರ್ಚು ಆಗಿಲ್ಲ. 2007–08ರಲ್ಲಿ 7,000 ಕೋಟಿ ಖರ್ಚಾಗಿಲ್ಲ. 2009–10ಕ್ಕೆ ಇದು ಖಂಡಿತವಾಗಿಯೂ ಕೂಡ 15,000 ಕೋಟಿಯಾಗಿರುತ್ತದೆ. ಈ ರೀತಿಯಾದ inflated ಇಟ್ಟುಕೊಂಡು ಬಜೆಟ್ ಮಂಡನೆ ಮಾಡುವುದರಲ್ಲಿ ಏನು ಪ್ರಯೋಜನ ಇದೆ? ಈ ರೀತಿ ಇರುವಾಗ ನಾವು 1 ಲಕ್ಷ ಕೋಟಿ ಬಜೆಟ್‌ನ್ನು ಮಂಡನೆ ಮಾಡುತ್ತೇವೆಂಬ ಮಾತನ್ನು ಹೊರಗಡೆ ಹೇಳುತ್ತಿದ್ದೀರಿ. ಯಾವ ಅರ್ಥದಲ್ಲಿ 1 ಲಕ್ಷ ಕೋಟಿ ಬಜೆಟ್ ಬಗ್ಗೆ ಹೇಳುತ್ತಿದ್ದೀರಿ? ಬಜೆಟ್ ಅಂದರೆ ಏನೆಂಬುದನ್ನು ನಾವು ಎಲ್ಲೊಂದು ಕಡೆ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾವು ಸಾಲ ತಂದು ಹಬ್ಬ ಮಾಡುವುದು ಬೇರೆ ಪ್ರಶ್ನೆ. ನಮ್ಮ ರಾಜ್ಯದ ವರಮಾನ ಎಷ್ಟೆಂಬುದರ ಬಗ್ಗೆ ನಾವು ಅಮೂಲಾಗ್ರವಾಗಿ ಅರ್ಥ ಮಾಡಿಕೊಂಡು ಅದರ ಬಗ್ಗೆ ಹೆಚ್ಚು ಪ್ರಚಾರ ಕೊಡಬೇಕು. ಮಾನ್ಯ ಸುರೇಶ್ ಕುಮಾರ್‌ರವರೇ ಇವತ್ತಿನದಿವಸ ಏನಾಗುತ್ತೆಂದರೆ, ಬಜೆಟ್ ಮಂಡನೆ ಮಾಡತಕ್ಕಂಥದ್ದನ್ನು ದೇಶ ವಿದೇಶದ

ಜನರೆಲ್ಲರೂ ಸಹ ನೋಡುತ್ತಿರುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ ಮಂಡನೆ ಮಾಡುವಾಗ ಏನು ಪ್ರಸ್ತಾಪ ಮಾಡುತ್ತಾರೆಂದು ಮತ್ತು ಏನು ಹಣಕಾಸನ್ನು ನಿಗದಿ ಮಾಡುತ್ತಾರೆಯೋ ಅದು ಪ್ರಚಾರಕ್ಕೆ ಹೋಗುತ್ತದೆ. ಆದರೆ, ಎಷ್ಟು ಖರ್ಚು ಮಾಡಿದ್ದಾರೆಂಬುದರ ಬಗ್ಗೆ ಒಂದು ವರ್ಷವಾದ ಮೇಲೆ ಇಂಥ ಸಂದರ್ಭದಲ್ಲಿ ನಾವು ಮಾತನಾಡುತ್ತೇವೆ. ಆದರೆ, ಇದನ್ನು ಯಾರು ಕೇಳುವುದಿಲ್ಲ ಮತ್ತು ಗೊತ್ತಾಗುವುದಿಲ್ಲ ಮತ್ತೆ ಪತ್ರಿಕೆಗೂ ಕೂಡ ಅದು ಹೋಗುವುದಿಲ್ಲ. The real performance budget ಎಂದರೆ ಎಷ್ಟು ಖರ್ಚು ಮಾಡಬೇಕಾಗಿದೆ ಎಂಬುದನ್ನು ಹೇಳಬೇಕಾಗುತ್ತದೆ. ಆದರೆ, ಆ ಬಜೆಟ್‌ನಲ್ಲಿ ಹೇಳುವುದಿಲ್ಲ. ಬಜೆಟ್ ಭಾಷಣ ಒಂದು ರೀತಿಯಲ್ಲಿ ಅರೆಬರೆ ಸತ್ಯ ರೀತಿಯಲ್ಲಿದೆ. ಅದರಲ್ಲಿ ಯಾವುದೂ ಕೂಡ ಸತ್ಯವಾಗಿರುವುದಿಲ್ಲ. ಅಂದರೆ, ಅರೆಬರೆ ಸತ್ಯ ಇರುವ ರೀತಿಯಲ್ಲಿ ಬಜೆಟ್ ಭಾಷಣ ಇರುತ್ತದೆ. ಇವರೊಬ್ಬರನ್ನು ನಾನು ಹೇಳುವುದಿಲ್ಲ, ಈ ರೀತಿಯಾಗಿ ಮಾಡಿರುವಂಥ ಎಲ್ಲರ ಬಗ್ಗೆ ಕೂಡ ನಾನು ಟೀಕೆ ಮಾಡಬೇಕಾಗುತ್ತದೆ. ಬಜೆಟ್‌ನ ಮಹತ್ವ ಏನೆಂಬುದನ್ನು ನಾವು ಇವತ್ತಿನದಿವಸ ತೆಗೆದು ಹಾಕಿದ್ದೇವೆ. 2011–12ನೇ ಸಾಲಿಗೆ ತೆರಿಗೆ ಮುಖೇನ ನಮಗೆ ಬರತಕ್ಕಂಥ ಒಟ್ಟು ಹಣ 83,729 ಕೋಟಿ ರೂಪಾಯಿ ಆಗಿದೆ. ಆದ್ದರಿಂದ, ನಿಮ್ಮ ಬಜೆಟ್ ಸಹ 83,729 ಕೋಟಿ ರೂಪಾಯಿ ಎಂದು ನಾವು ಹೇಳುತ್ತೇವೆ. ಆದರೆ, ಅದರಲ್ಲಿ ರಾಜ್ಯದ ವರಮಾನದಿಂದ ಬರತಕ್ಕಂಥದ್ದು ಕೇವಲ 66,313 ಕೋಟಿ ಮಾತ್ರ. Capital receipt ಅಂದರೆ, Government of India ಮುಖಾಂತರ ಸಾಲ ತರತಕ್ಕಂಥದ್ದು 17,416 ಕೋಟಿ ರೂಪಾಯಿ ಆಗಿದ್ದು, ಇದರಲ್ಲಿ ರಾಜ್ಯದ ವರಮಾನ ಕೇವಲ 43,813 ಕೋಟಿ ಮಾತ್ರ ಆಗಿದೆ. ಅದರಲ್ಲಿ 17,857 ಕೋಟಿ ರೂಪಾಯಿ ಕೃಷಿಗೆಂದು ಮೀಸಲಿಡುವ ಪ್ರಯತ್ನವನ್ನು ನೀವು ಮಾಡಿದ್ದೀರಿ. ಇದರಲ್ಲಿ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದೇನೆಂದರೆ, ಕೇಂದ್ರದಿಂದ ನಮಗೆ 10.418 ಕೋಟಿ ರೂಪಾಯಿ ತೆರಿಗೆ ಹಣ ಬರುತ್ತದೆ. Government of India ದಿಂದ 8,402 ಕೋಟಿ ರೂಪಾಯಿ ಗ್ರಾಂಟ್ಸ್ ಬರುತ್ತದೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರದಿಂದ ಬರುವ 18,820 ಕೋಟಿ

ಸೇರಿಸಿದರೂ ಕೂಡ 66,313 ಕೋಟಿ ರೂಪಾಯಿ ರಾಜ್ಯದ ಬಜೆಟ್ ಆಗಿದೆ. ಇದರಲ್ಲಿ ನಾವೊಂದು ಅರ್ಥ ಮಾಡಿಕೊಳ್ಳಬೇಕು. ಅದೇನೆಂದರೆ, ನಿಮಗೆ 29%ನಷ್ಟು ಕೇಂದ್ರದಿಂದ ಬರುವುದರ ಜೊತೆಗೆ, Plan and Non-Plan expenditure ಬಗ್ಗೆ ಹೇಳುವುದಾದರೆ, ಈ ವರ್ಷ Non-Plan expenditure ಎಷ್ಟಾಗಿದೆ ಎಂದರೆ, 75% over the budget, ಅಭಿವೃದ್ಧಿಗೆ ಉಳಿಯುವುದು ಕೇವಲ 10% ಮಾತ್ರ ಆಗಿದೆ. ಅಂದರೆ, ಅಭಿವೃದ್ಧಿಗೆ 10,000 ಕೋಟಿ ಮಾತ್ರ ಉಳಿಯುತ್ತದೆ. ಉಳಿದದ್ದೆಲ್ಲ ಸಂಬಳ, ಸಾರಿಗೆ, maintenance, ಇತರೇ ಬಾಬ್ತುಗಳಿಗೋಸ್ಕರ ಖರ್ಚು ಆಗುತ್ತಿದೆ. ಇದು capital investment ಆಗುವುದಿಲ್ಲ. ಅಂದರೆ, ಆಸ್ತಿಯನ್ನು ಸೃಷ್ಟಿ ಮಾಡದೆ ಇರತಕ್ಕಂಥ ರೀತಿಯಲ್ಲಿ ಆಗುತ್ತದೆ. ನಮ್ಮ ಬಜೆಟ್‌ನ ಪ್ರಮಾಣ ಇಷ್ಟಿರುವಾಗ, ಅದಕ್ಕೆ ಇಷ್ಟು ದೊಡ್ಡ ಪ್ರಚಾರ ಕೊಡತಕ್ಕಂಥ ಅವಶ್ಯಕತೆ ಇತ್ತೇ ಎನ್ನತಕ್ಕಂಥ ಪ್ರಶ್ನೆಯಾಗಿದೆ. ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ, ಮಾನ್ಯ ಯಡಿಯೂರಪ್ಪರವರು ಕೃಷಿ ಬಜೆಟ್ ಅನ್ನು ಮಂಡಿಸಿದ್ದಾರೆ. ಅವರು ಕೃಷಿ ಬಜೆಟ್ ಮಂಡನೆ ಮಾಡುವಾಗ ದಾವಣಗೆರೆಯಲ್ಲಿ ಒಬ್ಬ ರೈತ ಸತ್ತ. ಇದಾಗಿ ಎರಡು ದಿವಸ ಆದ ಮೇಲೆ ರೇಷ್ಮೆ ಗೂಡಿನ ಬೆಲೆ ಕುಸಿಯಿತ್ತೆಂಬ ಕಾರಣಕ್ಕೋಸ್ಕರ ಗಂಡ-ಹೆಂಡತಿ ಇಬ್ಬರೂ ಸಹ ಸತ್ತರು. ಅಡಿಕೆ ಬೆಲೆ ಕುಸಿಯಿತು. ಇದೆಲ್ಲಾ ಕೇವಲ ಒಂದು ವಾರದಲ್ಲಿ ಆಗಿರುವ ವ್ಯತ್ಯಾಸವಷ್ಟೆ. ಆದ್ದರಿಂದ, ಕೃಷಿಗೆ ನಾವು ನಿರ್ದಿಷ್ಟವಾಗಿ support ಮಾಡಬೇಕಾಗುತ್ತದೆ. ಆದರೆ, ನಾವು ತಿಳಿದುಕೊಂಡ ರೀತಿಯಲ್ಲಿ ಅದು ಆಗುವುದಕ್ಕೆ ಸಾಧ್ಯವಿಲ್ಲ. ಕೃಷಿಗೆ ಇವತ್ತಿನದಿವಸ ನಾನಾ ರೀತಿಯ ಒತ್ತಡಗಳಿರುತ್ತದೆ. ಮತ್ತೇ ನಾನಾ ರೀತಿಯ policy approach ಇರುತ್ತದೆ. ಇವೆಲ್ಲವನ್ನು ಅರ್ಥ ಮಾಡಿಕೊಂಡು ನಾವು ಮುಂದಾದಾಗ ಮಾತ್ರ ಇವತ್ತಿನದಿವಸ ಕೃಷಿಕನಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನದಿವಸ ನಾವು ಏನು ಅರ್ಥಮಾಡಿಕೊಳ್ಳಬಹುದೆಂದರೆ, ಒಂದು ಕಡೆ ಬಜೆಟ್ ಅನ್ನು ಮಂಡನೆ ಮಾಡುತ್ತೇವೆ, ಇನ್ನೊಂದು ಕಡೆ ರೈತ ಆತ್ಮಹತ್ಯೆಗೆ ಒಳಗಾಗುತ್ತಾನೆಂದರೆ, ಈ ವ್ಯತ್ಯಾಸಗಳನ್ನು ಕೃಷಿ ಬಜೆಟ್ ಮಂಡನೆ ಮಾಡುವಾಗ ರೈತನ ಆತ್ಮಹತ್ಯೆ ತಪ್ಪಿಸುವುದಕ್ಕೆ ಆಗಲಿಲ್ಲ. ರೇಷ್ಮೆ ಬೆಲೆ

ಕುಸಿತಗೊಂಡಿರುವುದರಿಂದ ರೈತರ ಆತ್ಮಹತ್ಯೆಯನ್ನು ತಪ್ಪಿಸಲಿಕ್ಕೆ ನಮ್ಮಿಂದ ಆಗಿಲ್ಲ. ಇದು ಖಂಡಿತ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ, ಕೃಷಿ ಎನ್ನತಕ್ಕಂಥದ್ದು sellers market ಅಲ್ಲ, ಇದು buyers market ಆಗಿದೆ. ಬೆಳೆ ಬೆಳದಂಥ ರೈತ ಬೆಲೆ ನಿಗದ ಮಾಡುವುದಕ್ಕೆ ಅವಕಾಶ ಇಲ್ಲ. ಇವತ್ತಿನದಿವಸ ಕೃಷಿಯ ಮೇಲೆ ಇರತಕ್ಕಂಥ ಸವಾಲುಗಳ ಬಗ್ಗೆ ಸಾಕಷ್ಟು ಜನ ಮಾತನಾಡಿದ್ದಾರೆ. ಕೃಷಿಯಲ್ಲಿರುವಂಥ ಮುಖ್ಯ ಸವಾಲುಗಳು ಏನೆಂಬುದುನ್ನು ನಾವು ಅರ್ಥಮಾಡಿಕೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೋಸ್ಕರ ಒಂದು ವಿಶೇಷವಾದ ಅಧಿವೇಶನವನ್ನು ಮಾನ್ಯ ಯಡಿಯೂರಪ್ಪನವರು ಕರೆದರು. ಅವತ್ತಿನ ದಿವಸ ನಾನು ಸುಮಾರು 3 ಗಂಟೆಗಳ ಕಾಲ ನಿಂತು ಅನೇಕ ಸಲಹೆಗಳನ್ನು ಕೊಟ್ಟೆ. ಅದರಲ್ಲಿ ಕೆಲವು ಸಲಹೆಗಳನ್ನು ಅನುಷ್ಠಾನ ಮಾಡಿದ್ದಾರೆ, ಇದನ್ನು ನಾನು ಒಪ್ಪುತ್ತೇನೆ. ಇಲ್ಲವೆಂದು ನಾನು ಹೇಳುವುದಿಲ್ಲ. Diploma Collegeಗಳನ್ನು ಮಾಡಬೇಕೆಂದು ಹೇಳಿದ್ದೆ. ರೈತರ ಜೊತೆ technologyಯನ್ನು spread ಮಾಡತಕ್ಕಂಥ ಜನ ಇಲ್ಲವೆಂಬ ಮಾತನ್ನು ಸಹ ಹೇಳಿದ್ದೆ. ಆದರೆ, ಈ ಕೆಲಸದ ಒಂದು ಪ್ರಯತ್ನವನ್ನು ತಾವು ಮಾಡಿದ್ದೀರಿ. ಆದರೆ, ಕಳೆದ ಮೂರು ವರ್ಷಗಳಲ್ಲಿ ಏನು infrastructure ಅನ್ನು ಕ್ರಿಯೇಟ್ ಮಾಡಬೇಕೆಂದು ತಾವು ಪ್ರಯತ್ನ ಪಟ್ಟಿರುವುದು ಯಶಸ್ವಿಯಾಗಿಲ್ಲ. Agriculture production ಇವತ್ತಿನ ದಿವಸ 125 ಲಕ್ಷ ಟನ್‌ಗಳಾಗಿದೆ. ಇದೊಂದು ನಮಗೆ ಸ್ವಲ್ಪ ಸಮಾಧಾನವಾಗಿದೆ. ಏಕೆಂದರೆ ನಾವು ಏನೆಲ್ಲ ಪ್ರಯತ್ನ ಮಾಡಿದರೂ ಕೂಡ ದೈವ ಕೃಪೆ ಕೂಡ ಬೇಕಾಗುತ್ತದೆ. ಪ್ರಕೃತಿಯಲ್ಲಿ ಆಗತಕ್ಕಂಥ ಹವಮಾನದ ವೈಪರಿತ್ಯ ಕೂಡ ಇವತ್ತು ಕೃಷಿ ಮೇಲೂ ಸಹ ಅವಲಂಭಿತವಾಗುತ್ತದೆ ಎಂಬುದರ ಬಗ್ಗೆ ಹೇಳುವುದಾದರೆ, ಈ ಬಾರಿ ಮಳೆ ಚನ್ನಾಗಿ ಆಗಿದ್ದರಿಂದ ಬಹುಶ: ಹಳ್ಳಿಗಳಲ್ಲಿ ಬೆಳೆ ಇಷ್ಟೊಂದು ಚೆನ್ನಾಗಿ ಬಂದಿರತಕ್ಕಂಥದ್ದನ್ನು ನಾನೆಂದು ಕೂಡ ನೋಡಿರಲಿಲ್ಲ. ಆದರೆ, ಡಿಸೆಂಬರ್ ತಿಂಗಳಲ್ಲಿ ಮೂರು ದಿವಸ ಬಂದಂಥ ಮಳೆಯಿಂದಾಗಿ ಎಲ್ಲಾ ಬೆಳೆ ಸರ್ವನಾಶವಾಯಿತು. ಆದರೆ, ಇದು ಏನೇ ಇದ್ದರೂ ಕೂಡ ಮಾನ್ಯ ಯಡಿಯೂರಪ್ಪರವರು ಮಾತ್ರ ಅದೃಷ್ಟವಂತರು. ಅವರು ಅಧಿಕಾರ ಸ್ವೀಕಾರ

ಮಾಡಿದ 3 ವರ್ಷಗಳಿಂದ ಸತತವಾಗಿ ಮಳೆ ಬರುತ್ತದೆ. ಸರ್ಕಾರಕ್ಕೆ ಸವಾಲಾಗಿ ನಿಲ್ಲತಕ್ಕಂಥ ಅನೇಕ ಸಮಸ್ಯೆಗಳು ಅವರಿಗೆ ಎದುರಾಗುತ್ತಿಲ್ಲ. ಸಮಸ್ಯೆಗಳು ತನ್ನಷ್ಟಕ್ಕೆ ತಾನೇ ಬಗೆಹರಿಯುತ್ತಿವೆ. ಆದರೂ ಕೂಡ ಕೃಷಿ ಉತ್ಪಾದನೆಯಲ್ಲಿ ಜಾಸ್ತಿಯಾಗಲಿಲ್ಲ. ನಾವು ಎಲ್ಲೊ ಒಂದು ಕಡೆ ಆಹಾರ ಉತ್ಪಾದನೆಯಲ್ಲಿ ಕೊರತೆಯನ್ನು ಅನುಭವಿಸುತ್ತಿದ್ದೇವೆ. ಬೆಳೆಯತಕ್ಕಂಥ ಎಣ್ಣೆ ಬೀಜ, ಹತ್ತಿ ಮತ್ತು ಇತರೇ ಎಲ್ಲಾ ಉತ್ಪಾದನೆಗಳಲ್ಲಿ ಕೊರತೆ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಪ್ರಕೃತಿ ನಿಮಗೆ ಸಹಾಯ ಮಾಡಿದ ಸಂದರ್ಭದಲ್ಲಿಯೂ ಕೂಡ ಕೊರತೆ ಆಗಿದೆ. ನಾವು ಸರ್ಕಾರದಲ್ಲಿದ್ದಂಥ ಸಂದರ್ಭದಲ್ಲಿ ಸತತವಾಗಿ ನಾಲ್ಕು ವರ್ಷ ಕೂಡ ಬರ ಇತ್ತು.

ಮಾನ್ಯ ಯಡಿಯೂರಪ್ಪನವರಿಗೆ ಬರ ಅಂದರೆ ಏನು ಗೊತ್ತಿಲ್ಲ, ಅತಿವೃಷ್ಟಿಯ ಬಗ್ಗೆ ಗೊತ್ತಿದೆ. ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿರುವ ಬಗ್ಗೆ ಅವರ ಕೈಯಲ್ಲಿ ತಡೆದುಕೊಳ್ಳುವುದಕ್ಕಾಗಲಿಲ್ಲ. ಬರ ಏನಾದರೂ ಬಂದು ಬಿಟ್ಟಿದ್ದರೆ ಖಂಡಿತವಾಗಿಯೂ ಅವರ ಕೈಯಿಂದ ತಡೆದು ಕೊಳ್ಳುವುದಕ್ಕಾಗುತ್ತಿರಲಿಲ್ಲ. ಆದರೆ ಪ್ರಕೃತಿಯ ಸಹಾಯ, ದೇವರ ಸಹಾಯ ಇದ್ದಾಗಿಯೂ ಕೂಡ ಇವತ್ತು ಎಲ್ಲೋ ಒಂದು ಕಡೆಯಲ್ಲಿ ಕೃಷಿ ರೈತರ ಆತ್ಮಹತ್ಯೆಗೆ ಒಳಗಾಗುವಂತಹದ್ದು, ಕೃಷಿಗೆ ಹೆಚ್ಚು ಉತ್ತೇಜನವನ್ನು ಕೊಡುವಂತಹದ್ದು ಅದು ಆಗುತ್ತಿಲ್ಲ. ಇದಕ್ಕೆ ನಾನಾ ಕಾರಣಗಳು ಇದೆ ಎಂದು ಅದಕ್ಕೆ ಸರ್ಕಾರವು ಪ್ರಯತ್ನ ಮಾಡಬಾರದು ಎಂದು ಅಲ್ಲ, ಈ ಬಗ್ಗೆ ಸರ್ಕಾರವು ಸಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಸರ್ಕಾರವು ಯಾವ ರೀತಿಯಾಗಿ ಪ್ರಯತ್ನವನ್ನು ಮಾಡಬೇಕೆಂದರೆ, ಇಲ್ಲಿ ನಾನು ಹೇಳುವಂತಹದ್ದು, ಕೃಷಿಕನ ಸಮಸ್ಯೆ ಏನು? ನಮ್ಮ ಆಹಾರದ ಉತ್ಪಾದನೆ ಯಾವ ರೀತಿಯಾಗಿರ ಬೇಕೆಂಬುದರ ಬಗ್ಗೆ ನಾವು ಚಿಂತನೆಯನ್ನು ಮಾಡಬೇಕು. ಆ ಚಿಂತನೆಯನ್ನು ಮಾಡಿ ಆ ಚಿಂತನೆಗೆ ತಕ್ಕನಾಗಿರುವಂತಹ, ಅದಕ್ಕೆ ಅನುಗುಣವಾಗಿರುವಂತಹ ಯೋಜನೆಗಳನ್ನು ಸಹ ನಾವು ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಒಬ್ಬ ಮಾಜಿ ಕೃಷಿ ಸಚಿವರಾಗಿ ಬಹಳಷ್ಟು ಉತ್ತಮವಾದಂತಹ

ಕೃಷಿ ಸಮಸ್ಯೆಯ ಬಗ್ಗೆ ಬೆಳಕನ್ನು ಚೆಲ್ಲುತ್ತಿದ್ದಾರೆ. ಕೃಷಿ ಅಂದರೆ ಬಯಲು ಬದುಕು, ಇದಕ್ಕೆ ನಾನಾ ಆಯಾಮಗಳು ಇವೆ. ಅದರ ಸಮಸ್ಯೆ ಒಂದು ರೀತಿಯ dynamic ಸಮಸ್ಯೆ. ಅದಕ್ಕೆ ತಕ್ಕ ಹಾಗೆ ಒಂದಷ್ಟು fixed solutions ಅನ್ನುವುದು ಇಲ್ಲ. ಆದ್ದರಿಂದ ಒಂದು automatic mechanism ಅನ್ನು ನಾವು ಅಳವಡಿಸಿಕೊಂಡಾಗ ಮಾತ್ರ ಆ ಕೃಷಿಕನ ಬವಣೆಯನ್ನು ನಾವು ಕಡಿಮೆ ಮಾಡಬಹುದು. ಉದಾಹರಣೆಗೆ ಹೇಳುವುದಾದರೆ, ಇವತ್ತು ತಾವು ಹೇಳಿದ್ದೀರಿ, ಒಳ್ಳೆಯ ಮಳೆಯಾಗಿದೆ, ಬೆಳೆ ಬರಬಹುದು ಸಾಮಾನ್ಯವಾಗಿ ರೈತರು ಒಳ್ಳೆಯ ಬೆಳೆಯನ್ನು ಬೆಳೆದಾಗ ಅವರಿಗೆ ಒಳ್ಳೆಯ ಬೆಲೆ ಸಿಗುವುದಿಲ್ಲ. ಇದನ್ನು ನಾವು ನೋಡಿಕೊಂಡು ಬಂದಿರುತ್ತೇವೆ. ಈ price fixation mechanism ಏನಿದೆ, ಇವತ್ತು MSP ಮಾಡುವಂತಹದ್ದು ಕೇಂದ್ರ ಸರ್ಕಾರವಾಗಿದೆ. ಇವತ್ತು ಕೃಷಿ state subject ಇದ್ದರೂ ಕೂಡ ಕೇಂದ್ರ ಸರ್ಕಾರವು MSPಯನ್ನು ಮಾಡುತ್ತದೆ ಏಕೆಂದರೆ, imports, exports, international market, ಇವೆಲ್ಲವನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಇವತ್ತು ಬೇರೆ ದೇಶದಲ್ಲಿ ಏನಿದೆ ಅಂದರೆ ವಿಶೇಷವಾಗಿ ಅಮೇರಿಕಾ ದೇಶದಲ್ಲಿ ಪ್ರತಿ ಸೀಸನ್‌ಗಿಂತ ಮುಂಚೆ outlook report ಎಂದು ಮಾಡುತ್ತಾರೆ. 10 ವರ್ಷದ ಹಿಂದೆ ಇರುವಂತಹ ಮಳೆ production, productivity, domestic market, international market ಈ ಎಲ್ಲಾ data ಗಳನ್ನು ತೆಗೆದುಕೊಂಡು indicative price ಅನ್ನು fix ಮಾಡುತ್ತಾರೆ. 15% ಕಡಿಮೆ ಬಂದರೆ automatic ಆಗಿ ಅಷ್ಟು subsidies ಅನ್ನು ಆ ಬೆಳೆಗಾರನಿಗೆ ಕೊಡುತ್ತಾರೆ. ಅಲ್ಲಿ consumer market ಬಹಳ ಪ್ರಭಾವಿ ಇರುವುದರಿಂದ 15% ಮೇಲೆ ಹೋದರೂ ಕೂಡ automatically ಅದಕ್ಕೆ ಸಬ್ಸಿಡಿಯನ್ನು ಕೊಡುತ್ತಾರೆ. ಹೀಗೆ ನಮಗೆ atleast one way ಆ ಒಂದು MSPಯನ್ನು ನಾವು ಏನು fix ಮಾಡುತ್ತೇವೆ. ವೈಜ್ಞಾನಿಕವಾಗಿ fix ಮಾಡಿದರೆ ರೈತರಿಗೆ ಇದಕ್ಕಿಂತ ಕಡಿಮೆ ಸಿಗುವುದಿಲ್ಲ. ಕಡಿಮೆ ಸಿಕ್ಕಿದರೆ ಸರ್ಕಾರ ನನ್ನ ಜೊತೆಗೆ ಇದೆ ಎನ್ನುವ ಆತ್ಮವಿಶ್ವಾಸ ಬಂದರೆ ಬಹಳಷ್ಟು ಆತ್ಮಹತ್ಯೆಗಳು ಇತರ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಒಂದು ವಿಚಾರವನ್ನು ನಾನು ಮೊದಲ

ಬಾರಿ ಹೇಳುತ್ತೇನೆಂದಲ್ಲ, ಹತ್ತು ಹಲವಾರು ವೇದಿಕೆಗಳಲ್ಲಿ ಹಲವಾರು ಸಂಘಟನೆಗಳು ಕೂಡ ಕೇಂದ್ರ ಸರ್ಕಾರಕ್ಕೆ ವಿವಿಧ ರಾಜ್ಯ ಸರ್ಕಾರಗಳು ಮನವರಿಕೆಯನ್ನು ಮಾಡಿಕೊಟ್ಟಿದೆ. ! think ಇದೊಂದನ್ನು ನಾವು ಬಹಳ ಗಂಭೀರವಾಗಿ ತೆಗೆದುಕೊಂಡರೆ ಎಲ್ಲಾ ರಾಜ್ಯ ಸರ್ಕಾರಗಳು ಸೇರಿ NDC meetingನಲ್ಲಿ ಅಲ್ಲೆಲ್ಲಾ ಗಂಭೀರವಾಗಿ ತೆಗೆದುಕೊಂಡರೆ ಬಹುತೇಕವಾಗಿ ಮುಂದಿನ ದಿನಗಳಲ್ಲಿ ರೈತನಿಗೆ ಒಂದು ಆತ್ಮವಿಶ್ವಾಸ ಇರುತ್ತದೆ. ಅವನ ದುಡಿಮೆಗೆ ಅವನ ಬೆವರಿಗೆ ಬೆಲೆಯನ್ನು ಕೊಟ್ಟು ಆ ಒಂದು ಆತ್ಮವಿಶ್ವಾಸವನ್ನು ತುಂಬುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಪ್ರಯತ್ನ ಮಾಡುವ ಅವಶ್ಯಕತೆ ಇದೆ. ತಾವು ಕೂಡ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬೆಳಕನ್ನು ಚೆಲ್ಲಬೇಕೆಂಬ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನೇರವಾಗಿ ಆ subject ಗೆ ಬರುವುದಕ್ಕೆ ಪ್ರಯತ್ನ ಪಡುತ್ತೇನೆ. ಅಮೇರಿಕಾ ಮತ್ತು ಭಾರತ ದೇಶವನ್ನು ಒಂದೇ ತಟ್ಟೆಯಲ್ಲಿಟ್ಟು ತೂಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿ agriculture ಮಾಡುವಂತಹ ಜನರು ಕೇವಲ 7 ರಿಂದ 8%. ಈಗ ಅಲ್ಲಿಯೂ ಕೂಡ unemployment ಆಗಿ ಅವರು ಕೂಡ ವ್ಯವಸಾಯವನ್ನು ಮಾಡುವುದಕ್ಕೆ ಶುರು ಮಾಡಿದ್ದಾರೆ. ಇಲ್ಲಿ 60% ಕೃಷಿ. ನಾನು ಅಮೇರಿಕಾಕ್ಕೆ ಹೋಗಿದ್ದಾಗ ಈ ಕೃಷಿಕರ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಎಲ್ಲರ fieldsಗೂ ಸಹ ಹೋಗಿದ್ದೆ. ಕೆಲವು Indian fields ಗೂ ಕೂಡ ಹೋಗಿದ್ದೆ. ಭಾರತೀಯರು ಸುಮಾರು 500 ರಿಂದ 1000 ಎಕರೆ ಮಾಡಿದ್ದಾರೆ. ಆ ವ್ಯತ್ಯಾಸವನ್ನು ನೀವು ಮಾತನಾಡಿರುವುದು ಒಳ್ಳೆಯದಾಯಿತು. ಅಮೇರಿಕಾ ಮತ್ತು ಭಾರತದ ಕೃಷಿಗೆ ಇರುವಂತಹ ವ್ಯತ್ಯಾಸ ಅದನ್ನು ನಾವು ಯಾವ ದೃಷ್ಟಿಯಿಂದ ನಾವು plug ಮಾಡುವುದಕ್ಕೆ ಸಾಧ್ಯವೆನ್ನುವಂತದ್ದರ ಬಗ್ಗೆ ಚಿಂತನೆಯನ್ನು ಮಾಡುವುದು ಬಹಳ ಮುಖ್ಯ. ಅದೇ ವಿಚಾರದ ಬಗ್ಗೆ ನಾನು ಹೇಳುವುದಕ್ಕೆ ಹೊರಟ್ಟಿದ್ದೆ. ನಮ್ಮ ಕೃಷಿ ಯಾವ ರೀತಿ ಇದೆಯೆಂದರೆ, ಈಗಾಗಲೇ ನೀವೆ ಹೇಳಿದ್ದೀರಿ, ನಮ್ಮ holding ಎಷ್ಟಾಗಿದೆ ಎಂದರೆ 1.76

ಹೆಕ್ಟೇರ್ per family. ನಾವು ಈ ಬಗ್ಗೆ ಲೆಕ್ಕವನ್ನು ಹಾಕಿಕೊಳ್ಳೋಣ. ಯಾವ ರೀತಿಯಾಗಿ ಅಷ್ಟು ಭೂಒಡೆತನದಲ್ಲಿ ಅವನು ಕೃಷಿಯನ್ನು ಮಾಡುವುದಕ್ಕೆ ಸಾಧ್ಯ. ನಮ್ಮ agriculture production ಏಕೆ ಕಡಿಮೆಯಾಗುತ್ತಿದೆ ಎನ್ನುವುದಕ್ಕೆ ಇವೆಲ್ಲವೂ ಮೂಲ ಕಾರಣವಾಗಿದೆ. Land holding ಕಡಿಮೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಜಾಸ್ತಿಯಾಗಿರುವಂತಹ ಸಂದರ್ಭದಲ್ಲಿ ಇವತ್ತು ಕೆಲಸವನ್ನು ಮಾಡುವುದಕ್ಕೆ ಯಾರು ಬರದೆ ಇರುವಂತಹದ್ದು ವಾಸ್ತವವಾದ ಸಂಗತಿ. ಇವತ್ತು ಯಾರು ಕೂಡ ಕೃಷಿಯನ್ನು ಸಾಮಾನ್ಯವಾಗಿ ಸಣ್ಣ ಹಿಡುವಳಿದಾರನು ಬೆಳೆದಿರುವಂತಹ ಬೆಳೆಯನ್ನು ಇವತ್ತು ಅವನು ಯಾವುದೇ ರೀತಿಯಲ್ಲಿಯೂ ಕೂಡ ಇವತ್ತು ಬೆಳೆಯನ್ನು ಮನೆಗೆ ತರುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಕೂಲಿಯನ್ನು ಕೊಡುವುದಕ್ಕೆ ಆಗುತ್ತಿಲ್ಲ. ಏನೋ ಕಷ್ಟಪಟ್ಟು ಅವನು ಬೆಳೆಯನ್ನು ಬೆಳೆದ ಅಂದರೆ ಅದಕ್ಕೆ ಸರಿಯಾದ ಬೆಲೆ ಸಿಗುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕಾಗಿ ನಾವು ಇಂತಹ ಪರಿಸ್ಥಿತಿಯಲ್ಲಿ ಅಮೇರಿಕಾಕ್ಕೆ ನಾವು ಹೋಲಿಸಿಕೊಂಡಾಗ ಯಾವ ಯಾವ sectorನಲ್ಲಿ ಇವತ್ತು ರಾಜ್ಯ ಸರ್ಕಾರ ಮುಂಚೋಣಿಯಲ್ಲಿ ಹೋಗಬೇಕೆಂಬ ಬಗ್ಗೆಯೇ ನಾವು ಚಿಂತನೆಯನ್ನು ಮಾಡಬೇಕಾಗಿರುವುದು ಬಹಳ ಮುಖ್ಯ. ಇವತ್ತು ನಮಗೆಲ್ಲ ಇರುವಂತಹದ್ದು ಮಾರುಕಟ್ಟೆ ಎಂದು ನನಗನಿಸುತ್ತದೆ. Minimum support price ಎಂದು ನಾವು ಹೇಳುತ್ತೇವೆ. ಹೌದು, ಕೃಷಿ ಎನ್ನುವುದು agriculture subject ಆದರೂ ಕೂಡ ಅದಕ್ಕೆ ಇವತ್ತು ಕೇಂದ್ರ ಸರ್ಕಾರದವರು MPಯನ್ನು fix ಮಾಡುತ್ತಾರೆ. ಕೇಂದ್ರ ಸರ್ಕಾರದವರು MSPಯನ್ನು fix ಮಾಡಬೇಕಾದಾಗ ಅವರದೆ ಆದಂತಹ calculation ಮಾಡುತ್ತಾರೆ. ಆದರೆ ನಿಜ ಸ್ಥಿತಿಯಲ್ಲಿ MSP ಇರುವುದು ಎಲ್ಲೂ ಕೂಡ workout ಆಗುವುದಿಲ್ಲ. ಅದನ್ನು ಅವರು scientific ಆಗಿ ಮಾಡುತ್ತಿಲ್ಲವೆನ್ನುವ ದೃಷ್ಟಿಯಿಂದಲೇ ನಾವು ಇಲ್ಲಿ ಒಂದು ಕೃಷಿ ಆಯೋಗವನ್ನು ಕೂಡ ಮಾಡಿದ್ದೇವೆ. ಇವತ್ತು ಶ್ರೀ ಬಿಸಲಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ ಯಾವ ಯಾವ ಬೆಳಗ್ಗೆ ಎಷ್ಟೆಷ್ಟು ಬೆಲೆಯನ್ನು ಕೊಡಬೇಕೆಂಬ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತಹ ಪ್ರಯತ್ನವನ್ನು ಪಟ್ಟೆವು. ಆದರೆ ಅದು ಕೂಡ

ಪ್ರಯೋಜನವಾಗಲಿಲ್ಲ. ಇದಕ್ಕೆ ಕಾರಣವೇನೆಂದರೆ, ನಮ್ಮ yield per acre ಇದೆಯಲ್ಲಾ ಅದನ್ನು ನಾವು specific ಆಗಿ ಕರ್ನಾಟಕಕ್ಕೆ ಸೀಮಿತವಾಗಿ ಕೆಲವೇ crop ಗಳನ್ನು ಬೆಳೆಯುವುದಕ್ಕೆ ಸಾಧ್ಯ. ಪಂಜಾಬ್ ಹಾಗೂ ಹರಿಯಾಣ ಹಾಗೂ ಆಂಧ್ರದಲ್ಲಿ ಬೆಳೆಯುವಂತಹ ಭತ್ತವನ್ನು ನಾವು ಕರ್ನಾಟಕಕ್ಕೆ ಅದನ್ನು ಹೋಲಿಸುವುದಕ್ಕಾಗುವುದಿಲ್ಲ. Yield per acre natural ಆಗಿ ಅವರದು ನಮಗಿಂತ ಡಬಲ್ ಇದೆ ಅಥವಾ wheet ತೆಗೆದುಕೊಳ್ಳಿ ನಮಗಿಂತ ಅದು ಡಬಲ್ ಇದೆ. ಹಾಗಾಗಿ ನಿಜವಾಗಿಯೂ ಹೇಳಬೇಕಾದರೆ ನಮ್ಮ ಭೂಮಿ ಯಾವುದಕ್ಕೆ ಎಂದರೆ ನಾವು ಹೆಚ್ಚು ಕಡಿಮೆ ಯಾವುದೇ ರೀತಿಯಾಗಿ ಭತ್ತ, ಗೋಧಿ, ಇವೆಲ್ಲಕ್ಕಿಂತ ಹೆಚ್ಚಾಗಿ ನಮಗೆ ಅವಕಾಶ ಇರುವುದು more for horticulture. ನಮ್ಮ ಕರ್ನಾಟಕದ ಒಂದು ವೈವಿಧ್ಯತೆ ಎಂದರೆ ಬಹುಶಃ ಈ ದೇಶದಲ್ಲಿರುವಂತಹದ್ದು 16 agro climatic zones ನಲ್ಲಿ ಕರ್ನಾಟಕವು ಒಂದೇ 11 agro climatic zones ಇರುವುದು. ಈ climatic zonesನಲ್ಲಿ ನಾವು ಹೆಚ್ಚು ತರಕಾರಿ ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ನಾವು ರೈತರಿಗೆ ಪೂರಕವಾಗಿ ಯಾವ ರೀತಿಯಾಗಿ support ಮಾಡಬೇಕು ಅವರ ಮನಸ್ಸನ್ನು ಹೇಗೆ ಗೆಲ್ಲಬೇಕೆಂಬ ಬಗ್ಗೆ ಇಲ್ಲಿ ಮುಖ್ಯವಾಗಿರುವುದು. ಇವೆಲ್ಲವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಮ್ಮಲ್ಲಿ ಇರುವಂತಹದ್ದು technology, ನಮ್ಮಲ್ಲಿ ಇರುವಂತಹದ್ದು extension ಇವೆಲ್ಲದಕ್ಕೂ ರೈತರಿಗೆ ಮಾಹಿತಿಯನ್ನು ಕೊಡುವುದಕ್ಕೋಸ್ಕರವಾಗಿಯೇ ಅದು ground levelನಲ್ಲಿ ಆಗಬೇಕೆಂಬ ಕಾರಣಕ್ಕೋಸ್ಕರವಾಗಿಯೇ ನಾನು ಕೃಷಿ ಸಚಿವನಾಗಿದ್ದಾಗ ಪ್ರಪ್ರಥಮವಾಗಿ ರೈತ ಸಂಪರ್ಕ ಕೇಂದ್ರವನ್ನು ಪ್ರಾರಂಭ ಮಾಡಿದೆ. ಆದರೆ ಇಲ್ಲಿ ನನ್ನ ಉದ್ದೇಶ ಬೇರೆ ಇತ್ತು. ಇವತ್ತು ರೈತರಿಗೆ ಬೇಕಾಗಿರುವಂತಹ ಕೃಷಿಗೆ ಸಂಬಂಧಪಟ್ಟಂತಹ ಅವಿಷ್ಕಾರಗಳು ಏನಿದೆ, ಅದಕ್ಕೆ ಯಾವ ಯಾವ ರೀತಿಯಾಗಿ ಬೆಳೆಯನ್ನು ಬೆಳೆಯುವುದಕ್ಕೆ ಪೂರಕವಾಗಿ ಏನು ಸಲಹೆಗಳು ಇವೆ ಅಂತ ಹೇಳಿ Agri Clinic ಎನ್ನುವ concept ಅನ್ನು ತರುವಂತಹ ಪ್ರಯತ್ನಪಟ್ಟೆ. ಆದರೆ ಇವತ್ತು ಏನಾಗಿದೆ ರೈತ ಸಂಪರ್ಕ ಕೇಂದ್ರಗಳು service centerಗಳಾಗಿವೆ. ಭತ್ತ ಬಂತು, ಬೀಜ ಬಂತು ಇವತ್ತು ಸಬ್ಸಿಡಿಯನ್ನು ಬಿಡುಗಡೆ

ಮಾಡುವುದಕ್ಕೋಸ್ಕರವೇ ಕೃಷಿ ಸಂಪರ್ಕ ಕೇಂದ್ರಗಳಾಗಿವೆ. ಅಲ್ಲಿ ಇನ್ಯಾವುದೇ ಚಟುವಟಿಕೆಗಳು ನಡೆಯುತ್ತಿಲ್ಲ. Technology transfor ಆಗುತ್ತಿಲ್ಲ. University ಯಲ್ಲಿ ಇರುವುದು University ಯಲ್ಲಿಯೇ ಇದೆ. ಯಾರು ಕೂಡ ಇವತ್ತು ವರ್ಗಾವಣೆ ಮಾಡುವಂತಹ ಕೆಲಸವನ್ನು ಮಾಡುತ್ತಿಲ್ಲ. ಬಹುಶಃ ರೈತ ಸಂಪರ್ಕ ಕೇದ್ರಗಳನ್ನು ನೀವು systematic ಆಗಿ strengthen ಮಾಡುವಂತಹ ಕೆಲಸವನ್ನು ಮಾಡಿದರೆ ಮಾತ್ರ ಇವತ್ತು technology transfer ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಯಾವ ರೈತನು ಕೂಡ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ವಿಶ್ವವಿದ್ಯಾಲಯದ ಮಟ್ಟದಲ್ಲಿ ನಮ್ಮಲ್ಲಿ ಸಾಕಷ್ಟು ರೀತಿಯಲ್ಲಿ ಸಂಶೋಧನೆಗಳು ಆಗಿವೆ. ನಮ್ಮ ರೈತರು ಕೂಡ ಇವತ್ತು ದಡ್ಡರು ಎಂದು ನಾನು ಹೇಳುವುದಿಲ್ಲ. ಇವತ್ತು ಅವರು ನಿಜವಾಗಿಯೂ ಕೂಡ ಜ್ಞಾನಿಗಳಾಗಿದ್ದಾರೆ ಅವರು ವಿಜ್ಞಾನಿಗಳು. ಅವರ ಹತ್ತಿರ ಎಲ್ಲಾ ರೀತಿಯಾದಂತಹ ಮಾಹಿತಿಗಳು ಇವೆ. ಆದರೆ ಅದು limited ರೈತರ ಹತ್ತಿರ ಮಾಹಿತಿ ಇದೆ. ಎಲ್ಲಾ ರೈತರಿಗೂ ಕೂಡ ಸಣ್ಣಸಣ್ಣ ಹಿಡುವಳಿದಾರರಿಗೆ ಇವತ್ತು ತಂತ್ರಜ್ಞಾನದ ಬಗ್ಗೆ ಅಷ್ಟೊಂದು ಅರಿವು ಇಲ್ಲ. ಅವರಿಗೆ ಅರಿವನ್ನು ಮೂಡಿಸುವುದಕ್ಕೋಸ್ಕರವಾಗಿಯೇ ಇವತ್ತು ರೈತ ಸಂಪರ್ಕ ಕೇಂದ್ರಗಳನ್ನು ಮಾಡಿದ್ದೇವೆ. ಆ ರೈತ ಸಂಪರ್ಕ ಕೇಂದ್ರಗಳು ಇವತ್ತು ಅದನ್ನು ಮಾಡಿದಂತಹ ಉದ್ದೇಶ ಸಾಧನೆಯಾಗಲಿಲ್ಲ ಮತ್ತು ಸಾರ್ಥಕವಾಗಲಿಲ್ಲ. ಹಾಗಾಗಿ ನಮಗೆ ಎಲ್ಲಿ gap ಆಗಿದೆ ನಾವು ಎಲ್ಲಿ ದಾರಿಯನ್ನು ತಪ್ಪಿದ್ದೇವೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. Technology transfor ಅನ್ನು ರೈತ ಸಂಪರ್ಕ ಕೇಂದ್ರಗಳಿಗೆ ಹೆಚ್ಚು ಯಶಸ್ವಿಯಾಗಿ ಮಾಡುವುದರ ಜೊತೆಗೆ ಇನ್ನೊಂದು ರೈತರ ಜೊತೆಗೆ interact ಮಾಡುವಂತಹ ರೀತಿಯಲ್ಲಿ Agri Clinicಗಳಲ್ಲಿ Agro Doctors ಅನ್ನುವಂತಹ ರೀತಿಯಲ್ಲಿ ಇವತ್ತು ಏನು Agriculture Officers ಇರಬೇಕಾಗಿತ್ತೋ ಆ ಎಲ್ಲಾ post ಗಳು ಖಾಲಿ ಇವೆ. ಸುಮಾರು 746 ಹೋಬಳಿ ಕೇಂದ್ರಕ್ಕೆ ಒಂದು ರೈತ ಸಂಪರ್ಕ ಕೇಂದ್ರ. ಎಲ್ಲಾ ಸಂಪರ್ಕ ಕೇಂದ್ರಗಳಲ್ಲೂ ಇವತ್ತು agiruculture officers ಗಳು ಇಲ್ಲ. ಅಂದರೆ ಇಲ್ಲಿಯವರೆಗೂ ಕೂಡ recruitment ಎನ್ನುವುದು ನಡೆಯಲ್ಲೇ ಇಲ್ಲ.

ನನ್ನ ಕಾಲದಲ್ಲಿ Assistant Directors, Agiruclture officers recruitment ಆಗಿರುವುದನ್ನು ಬಿಟ್ಟರೆ ಆಮೇಲೆ ಆಗಲೇ ಇಲ್ಲ. ದಯಮಾಡಿ ಈ ಸಮಸ್ಯೆಯನ್ನು ನೀಗಿಸಬೇಕಾದಾಗ immediate ಆಗಿ recruitment ಮಾಡುವಂತಹ ಕೆಲಸವನ್ನು ಮಾಡಬೇಕು. ಅಷ್ಟೇ ಪ್ರಮಾಣದಲ್ಲಿಯೂ ಕೂಡ ಏನು diploma, high-tech technologyಗೆ agricultureನಲ್ಲಿ high-tech technologyಯನ್ನು teach ಮಾಡುವಂತಹ ರೀತಿಯಲ್ಲಿ ಆ courses ಅನ್ನು ತೆಗೆದುಕೊಂಡು ಇವತ್ತು ಅವರನ್ನು appoint ಮಾಡುವಂತಹ ಕೆಲಸವನ್ನು ಮಾಡಿದರೆ ಮಾತ್ರ ಏನಾದರೂ ಸುಧಾರಣೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದೆ ಹೋದರೆ ಆದು ಆಗುವುದಿಲ್ಲ. ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಈ ದೇಶದಲ್ಲಿ ಒಂದು ಸಮೀಕ್ಷೆಯು ನಡೆದಿದೆ. ಏನೆಂದರೆ ನಾನು ಕಷ್ಟಪಟ್ಟು ಅವರಿಗೆ ಗೊಬ್ಬರವನ್ನು ಕೊಡುತ್ತೇವೆ. ಆ ಗೊಬ್ಬರವನ್ನು ಕೊಟ್ಟಿರುವುದು ಎಷ್ಟರಮಟ್ಟಿಗೆ ಆ ಗಿಡಕ್ಕೆ ಸಹಾಯವಾಗುತ್ತದೆ ಎನ್ನುವುದನ್ನು ನಾವು ನೋಡಿದಾಗ ಕರ್ನಾಟಕದಲ್ಲಿ ನಾವು apply ಮಾಡತಕ್ಕಂತಹದ್ದು ಕಷ್ಟಪಟ್ಟು ಸಾಲಸೋಲವನ್ನು ಮಾಡಿ ಎಲ್ಲೋ ತಂದು ಗೊಬ್ಬರವನ್ನು ಹಾಕಿದರೆ ಅದು plant ನಲ್ಲಿ absorb ಆಗುವಂತಹದ್ದು ಕೇವಲ 25% ಮಾತ್ರ. ಅಂದರೆ excesive fertilizer ಹಾಕುವುದರಿಂದ ಭೂಮಿಯು ಹಾಳಾಗುತ್ತಿದೆ. ರೈತನ ಆರ್ಥಿಕ ಪರಿಸ್ಥಿತಿಯು ಕೂಡ ಹಾಳಾಗುತ್ತಿದೆ. ಅಂದರೆ ಅವನಿಗೆ ಅಷ್ಟು ಕೂಡ ಜ್ಞಾನ ಇಲ್ಲ. ಆ ಜ್ಞಾನವನ್ನು ತುಂಬಬೇಕಾದಾಗ ನಾನು ಒಂದು ಕೃಷಿ ಬುಕ್ ಎಂದು ಮಾಡುವುದಕ್ಕೆ ಪ್ರಯತ್ನ ಪಟ್ಟೆ. ಆ ಕೃಷಿ ಬುಕ್ ಎಂದರೆ ಅವನಿಗೆ 5 ಎಕರೆ ಜಮೀನು ಇದ್ದರೆ ಯಾವುದೇ ಭೂಮಿಯಲ್ಲಿ ಸರ್ವೆ ನಂಬರಿನಲ್ಲಿ ಇವತ್ತು nutrients ಎಷ್ಟು ಇದೆ ಎಂಬುದನ್ನು ಇಡಬೇಕಾಗಿದೆ. ಇವತ್ತು nitrogen ಕೊರತೆ ಇದೆಯೋ phosphorous ಕಡಿಮೆ ಇದೆಯೋ ಯಾವ item ಕಡಿಮೆ ಇದೆಯೋ ಎನ್ನುವುದನ್ನು potash ಕಡಿಮೆ ಇದೆಯೋ ಅದನ್ನು ಯಾವ ರೀತಿಯಾಗಿ ಗೊಬ್ಬರದ ಮುಖೇನ ಮಾಡಬೇಕು ಇವೆಲ್ಲವನ್ನು ತಿಳಿಸುವುದಕ್ಕೋಸ್ಕರ ಕೃಷಿ ಬುಕ್ ಅನ್ನು ಮಾಡಬೇಕೆಂಬ ಪ್ರಯತ್ನವನ್ನು

ಮಾಡಿದೆ ಆದರೆ ಅದು ಆಗದೇ ಹೋಯಿತು. ಇವತ್ತು ನಾವು ಎಲ್ಲಿಯವರೆಗೂ ಕೂಡ ಆ ಕೃಷಿ ಬುಕ್ ಎಂದರೆ ನಮಗೆ revenud departmentನಲ್ಲಿ ಕೃಷಿ ಬುಕ್ ಅನ್ನು ಕೊಡುವುದು ಬೇರೆ. ಇವತ್ತು ಕೃಷಿ ಇಲಾಖೆಯಿಂದ ಆ ಬುಕ್ ಅನ್ನು ಕೊಟ್ಟು ಇದನ್ನು ರೈತನಾಗಿರುವವನು ಅರ್ಥ ಮಾಡಿಕೊಳ್ಳಬೇಕು. ಇವತ್ತು ನನ್ನ ಭೂಮಿಯಲ್ಲಿ ಯಾವ ರೀತಿಯಾದಂತಹ ಕೊರತೆ ಇದೆ ಎನ್ನುವುದನ್ನು ಅವನು ಅರ್ಥ ಮಾಡಿಕೊಂಡಾಗ ಅದನ್ನು ಯಾವ ರೀತಿಯಾಗಿ ನೀಗಿಸಬಹುದು ಎಂಬುದರ ಬಗ್ಗೆ ಅವನಿಗೆ ಸಲಹೆಯನ್ನು ಕೊಡಬೇಕಾಗುತ್ತದೆ. ಅವನು Agri-Clinic ಗೆ ಹೋಗಿ ಕೃಷಿ ಬುಕ್ ಅನ್ನು ತೆಗೆದುಕೊಂಡು ಹೋದರೆ ನೀವು ಇಂತಹ ಭೂಮಿಗೆ ಇಂತಹ ಗೊಬ್ಬರವನ್ನು ಹಾಕಿ, ಈ ರೀತಿಯಾಗಿ ಹಾಕಿ ಎಂದು ಸಲಹೆಯನ್ನು ಕೊಡುವಂತಹ ರೀತಿಯಲ್ಲಿರಬೇಕು. ಆದರೆ ಅದು ಆಗುತ್ತಿಲ್ಲ, ಅದನ್ನು ಮಾಡಬೇಕೆಂದು ನನ್ನ ಒತ್ತಾಯವಿದೆ. ಇವತ್ತು fertilizer ಎನ್ನುವುದರ ಬಗ್ಗೆ ಮಾತನಾಡಬೇಕಾದಾಗ ಅದು ಎರಡು ಬಹಳ ಮುಖ್ಯವಾಗಿದೆ. ಇವತ್ತು bio fertilizers ಮತ್ತು chemical fertilizers. Bio-fertilizers ಅದರ ವೈಶಿಷ್ಟ್ಯತೆಯ ಬಗ್ಗೆ ನಾನು ಎಲ್ಲವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. Bio fertilizers ಇವತ್ತು ಅದರ ಕೊರತೆಯಿಂದಾಗಿ ನಮ್ಮ application ಕಡಿಮೆಯಾಗಿ ಇವತ್ತು chemical fertilizers ಜಾಸ್ತಿಯಾಗಿ ಇವತ್ತು ಭೂಮಿ ಹಾಳಾಗಿದೆ production ಹಾಳಾಗಿದೆ. ನಮ್ಮ production ಅನ್ನು ನಾವು step up ಮಾಡಬೇಕಾದಾಗ ನಾವು ಎಲ್ಲೋ ಒಂದು ಕಡೆಗೆ Bio fertilizersಗಳಿಗೆ ನಮ್ಮ ಗಮನವು ಇರಬೇಕಾಗುತ್ತದೆ. Bio fertilizersನ ಮುಖೇನ ಇವತ್ತು ನೈಸರ್ಗಿಕವಾಗಿರುವಂತಹ ಆ ಶಕ್ತಿಯನ್ನು ನಾವು ಭೂಮಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. Bio fertilizersಗೆ ಆಗುವಂತಹ ಖರ್ಚು ಬಹಳ ಕಡಿಮೆ ಇರುತ್ತದೆ. ಅದನ್ನು ಹೆಚ್ಚು ಪ್ರಚಾರ ಮಾಡುವುದರಿಂದ ಹೆಚ್ಚು ಬಳಸುವುದರಿಂದ ನಮ್ಮಲ್ಲಿ chemical fertilizers ನಿಂದ ಆಗುವಂತಹ ಬಳಕೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾವು nitrogen fixing agents ಎನ್ನುವಂತಹದ್ದು ನಮ್ಮಲ್ಲಿ ಇರುವಂತಹದ್ದು ಅಂದರೆ ಅದು *it is a cost*

effective, eco friendly and sustainable for the agriculture. ಇದು rhizobomes, azcobactor, azospirulam, azola, ಇವೆಲ್ಲವೂ ಕೂಡ ಇದನ್ನು ಹೆಚ್ಚು ಪ್ರಚಾರವನ್ನು ಮಾಡಬೇಕಾಗುತ್ತದೆ. ಹೆಚ್ಚು application ಮಾಡುವಂತಹ ರೀತಿಯಲ್ಲಿ ಹೋಗಬೇಕಾಗುತ್ತದೆ. ಇದರ ಬಗ್ಗೆ ಹೆಚ್ಚು ಪರಿಚಯವೇ ಇಲ್ಲ. ನಮಗೆ ಗೊತ್ತಿರುವುದು ಏನು? ನಮಗೆ chemical fertilizers ಬಿಟ್ಟರೆ ಬೇರೆ ಇನ್ನೇನು ಇಲ್ಲ. ಅದರಲ್ಲಿಯೂ ಕೂಡ chemical fertilizers ಏನಾಗಿದೆ ಎಂದರೆ ನಮಗೆ MPK ಒಂದೇ ಗೊತ್ತಿರುವುದು, MPK ಅಂದರೆ ಯಾವುದೋ ಕಂಪನಿಯಲ್ಲಿ MPK ಅನ್ನು ತರಿಸಿಕೊಂಡು ಚೆಲ್ಲುವುದು. ಅದರ ಜೊತೆಗೆ ಯೂರಿಯಾವನ್ನು ಸ್ವಲ್ಪ ಹೆಚ್ಚು ಹಾಕುವುದು. ನಮಗೆ balanced ಆಗಿ region specific, crop specific, ಆಗಿ ಇವತ್ತು granulated fertilizers ಎನ್ನತಕ್ಕಂಥ concept ಇವತ್ತು ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿದೆ. ತಮಿಳುನಾಡಿನಲ್ಲಿದೆ, ಆದರೆ ಇದು ಕರ್ನಾಟಕದಲ್ಲಿ ಪ್ರಚಾರಕ್ಕೆ ಬರಲಿಲ್ಲ. ನಾನು MCFನವರು ಈಗ ಮಾಡುತ್ತಿದ್ದಾರೆ, granulated fertilizers ಎಂದು ಅವರು ಮಾಡುತ್ತಿದ್ದಾರೆ. ಅದನ್ನು ಹೆಚ್ಚು ಪ್ರಚಾರ ಮಾಡಬೇಕು, ಹೆಚ್ಚು ಬಳಕೆಯನ್ನು ಮಾಡುವಂತಹ ಕೆಲಸವನ್ನು ಮಾಡಿದರೆ ನಾವು minimum application ಮಾಡುವುದಕ್ಕೆ ಸಾಧ್ಯ. ಮತ್ತು ಮಣ್ಣಿನಲ್ಲಿ ಆಗುವಂತಹ ಅನಾಹುತವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಕೃಷಿ ಉತ್ಪಾದನೆಯು ಕೂಡ ಸ್ವಲ್ಪ ಮಟ್ಟಿಗೆ ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೃಷಿ ಉತ್ಪಾದನೆಯನ್ನು ಮಾಡಬೇಕೆಂದಾಗ ಹೊಸ ಹೊಸ ವಿಚಾರಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ನಮಗೆ ಈ ಹೈ ಬ್ರಿಡ್ ಎಂದು hybrid is a technology ಏಕೆಂದರೆ ನಾವೆಲ್ಲವನ್ನು 3 ವರ್ಷದ ಪುಸ್ತಕದಲ್ಲಿ ನೋಡುತ್ತಿದ್ದೇವೆ. ಹೈಬ್ರಿಡ್ ರೈಸ್ ಬಗ್ಗೆ ಹೈಬ್ರಿಡ್ ಕ್ರಾಪ್ಸ್ ಬಗ್ಗೆ ಎಲ್ಲೂ ಕೂಡ ಪ್ರಸ್ತಾಪವನ್ನು ಮಾಡಿರುವುದಿಲ್ಲ. ಅದರ ಬಗ್ಗೆ ನಿಜವಾಗಿಯೂ ಕೂಡ ಈ ಸಂದರ್ಭದಲ್ಲಿ ಹೈಬ್ರಿಡ್‌ಗೆ ನಾವು ಇವತ್ತು ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ಈ ದೇಶದಲ್ಲಿ ಪ್ರಚಲಿತವಾಗಿರುವಂತಹ ಸುಮಾರು 27-28 ಹೈಬ್ರಿಡ್ಸ್‌ಗಳು ಇವತ್ತು ಪ್ರಚಾರದಲ್ಲಿದೆ. ಇದು ಹೆಚ್ಚು ಪ್ರಚಾರದಲ್ಲಿರುವುದು ಕರ್ನಾಟಕದಲ್ಲಿ.

ಆದರೆ ಹೆಚ್ಚು ಬಳಕೆಯಾಗುತ್ತಿಲ್ಲ. ರೈತರಿಗೆ ಅರಿವು ಮೂಡಿಸುವಂತಹ ಕೆಲಸಗಳು ಆಗುತ್ತಿಲ್ಲ. ರೈತ ಸಂಪರ್ಕ ಕೇಂದ್ರಗಳು ಇವತ್ತು ಕೆಲಸವನ್ನು ಮಾಡುತ್ತಿಲ್ಲ. ಅದರ ಮುಖೇನ ಇವತ್ತು ಪ್ರಚಾರವಾಗಬೇಕಾಗುತ್ತದೆ. Hybrid rice ಅನ್ನು hybrid crops ಅನ್ನು ಇವತ್ತು popularize ಮಾಡುವುದರಿಂದ ನಮ್ಮ ಕೃಷಿ ಉತ್ಪನ್ನವನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಪ್ರಯತ್ನವು ಆಗುತ್ತಿಲ್ಲ. ನಮಗೆ ಇವೆಲ್ಲಕ್ಕಿಂತ ಹೆಚ್ಚಾಗಿ ಇವತ್ತು ಕೃಷಿಕನಿಗೆ ಏಕೆ, ಬೆಲೆ ಸಿಗುವುದಿಲ್ಲ. ಏಕೆ ಇವತ್ತು market ಗೆ ಹೋದಂತಹ ಸಂದರ್ಭದಲ್ಲಿ ಅತ್ಯಂತ ನಷ್ಟಕ್ಕೆ ಒಳಗಾಗಿ ಬರುತ್ತಾನೆಂದರೆ ನಮ್ಮಲ್ಲಿ ಮೂಲವಾಗಿ ಬೇಕಾಗಿರುವುದು, ರೈತ ಉತ್ಪಾದನೆ ಮಾಡಿರುವಂತಹ ವಸ್ತುವನ್ನು ಎಲ್ಲೋ ಒಂದು ಕಡೆಗೆ ಮಾಡುವಂತಹ ರೀತಿಯಲ್ಲಿ ಇವತ್ತು APMC godownನಲ್ಲಿ ಇಡುವಂತಹ ಅವಕಾಶವಾಗಬೇಕು. Cold chain ಗಳನ್ನು ಇವತ್ತು ಜಾಸ್ತಿ ಮಾಡುವಂತಹ ಕೆಲಸವನ್ನು ಮಾಡಬೇಕು. Cold chain system ಇದ್ದರೆ ಬಹುಶಃ ಅದಕ್ಕೆ ಹೆಚ್ಚು ಮಹತ್ವ ಬರುತ್ತದೆ. ರೈತನು ಬೆಳೆದಿರುವ ಬೆಳೆಗೆ ಬೆಲೆ ಇಲ್ಲದೇ ಇರುವಂತಹ ಸಂದರ್ಭದಲ್ಲಿ ಬೆಳೆಯನ್ನು ಬೆಳೆದು ಇವತ್ತು store ಮಾಡುವಂತಹ facilitiesನ್ನು ನಾವು ಮಾಡಬೇಕಾಗಿದೆ. ಆದರೆ ಇವತ್ತು ಅದು ಅಗಲಿಲ್ಲ. ಇವತ್ತು ನೀವು ಮಾತನಾಡಿದ್ದೀರಿ, ಇವತ್ತು ಸಾಕಷ್ಟು ರೀತಿಯಲ್ಲಿ ಬಂಡವಾಳವನ್ನು ಆಕರ್ಷಿಸುವುದಕ್ಕೋಸ್ಕರ PPP modelsನಲ್ಲಿ ಸುಮಾರು 500 ಕೋಟಿ ರೂಪಾಯಿಗಳಷ್ಟು infrastucture ಅನ್ನು create ಮಾಡುತ್ತೇವೆ. ಇಲ್ಲಿಗೆ ಯಾರು ಬರುತ್ತಾರೆ? ನೀವು ಅವರಿಗೆ ಏನು concession ಕೊಡುತ್ತೀರಿ. ನೀವು ಅವರನ್ನು ಯಾವ ರೀತಿಯಾಗಿ attract ಮಾಡುತ್ತೀರಿ, ಇವತ್ತು ಕೃಷಿಯಲ್ಲಿ invest ಮಾಡುವುದಕ್ಕೆ ಯಾರು ಬರುವುದಿಲ್ಲ. ಇವತ್ತು ಯಾರು ಬರೆದೆ ಇರುವಂತಹ ಸಂದರ್ಭದಲ್ಲಿ ಕೃಷಿಗೆ ಯಾವ ರೀತಿಯಾಗಿ investment ಬರುವುದಕ್ಕೆ ಸಾಧ್ಯವೆನ್ನುವುದನ್ನು ನೀವು ಯೋಚನೆ ಮಾಡಬೇಕಾಗುತ್ತದೆ. ಕೃಷಿ ಹೆಸರಿನಲ್ಲಿ ಅವರುಗಳು ಜಮೀನು ಹೊಡೆದುಕೊಳ್ಳುವುದಕ್ಕೆ ಬರಬಹುದೇ ವಿನಃ ಕೃಷಿಗೆ ಪೂರಕವಾಗಿ ಶಕ್ತಿಯನ್ನು ಕೊಡುವುದಕ್ಕೆ ಯಾವ ಜನರು ಬರುವುದಕ್ಕೆ ತಯಾರಿಲ್ಲ ಎನ್ನುವಂತಹ ಮಾತನ್ನು ನೀವು ಅರ್ಥಮಾಡಿಕೊಳ್ಳಬೇಕು.

Investment ಅನ್ನು ನಾವು ಜಾಸ್ತಿ ಮಾಡಬೇಕು, ಅದನ್ನು ಜಾಸ್ತಿ ಮಾಡಬೇಕಾದಾಗ ಇವತ್ತು ಕೃಷಿಯ ಮೇಲೆ ಹೆಚ್ಚು invest ಮಾಡುತ್ತಿರುವವರು ಯಾರು ಅಂದರೆ ರೈತನಾಗಿದ್ದಾನೆ. ಭೂಮಿ ಅವನದು, ನೀರಾವರಿಗೆ ಬೇಕಾಗಿರುವಂತಹ ಪಂಪ್‌ಸೆಟ್ಟಿನ ಮೇಲೆ 2 ರಿಂದ 4 ಲಕ್ಷ ರೂಪಾಯಿಗಳವರೆಗೆ ಪಂಪ್‌ಸೆಟ್ ಮೇಲೆ ಹಾಕುತ್ತಾನೆ. ಮನೆಯವರೆಲ್ಲರೂ ಸೇರಿ ಕೂಲಿ ಕೆಲಸದ ಹಾಗೆ ಮಾಡುತ್ತಾರೆ. ಇವತ್ತು investment ರೈತನದ್ದೇ ಆಗಿದೆಯೇ ವಿನಃ external, ಹೊರಗಡೆಯಿಂದ ಇಲ್ಲಿಗೆ ಏನು investment ಬರುತ್ತಿಲ್ಲ. ಅದಕ್ಕಾಗಿ investment ಬರಬೇಕಾದಾಗ ವ್ಯವಸಾಯ ಮಾಡುವುದಕ್ಕೆ ಯಾರು investment ತರುವುದಕ್ಕಾಗುವುದಿಲ್ಲ. ನಾವು ಸರ್ಕಾರದಿಂದ ಕಡಿಮೆ ಬಡ್ಡಿಗೆ ಸಾಲವನ್ನು ಕೊಡಿಸುವಂತಹದ್ದು, ಇವೆಲ್ಲವೂ ಕೂಡ ಒಂದು ವಿಧಾನವಾಗಿದೆ. ಆದರೆ ಮೂಲಭೂತವಾಗಿ ಈಗ ನಮಗೆ ವಿದ್ಯುಚ್ಛಕ್ತಿಯನ್ನು free ಆಗಿ ಕೊಡುತ್ತೇವೆಂದು ಹೇಳಿದ್ದೆವಲ್ಲಾ ಅದು ಒಂದು ಪ್ರೋತ್ಸಾಹವಾಗಿದೆ. ಬಹುಶಃ ನಾವು ಅದನ್ನು ಕೊಡದೆ ಇದ್ದರೆ ರೈತನು ಅತ್ಯಂತ ಕಷ್ಟಕ್ಕೆ ಒಳಗಾಗುತ್ತಿದ್ದನು. ಆದರೆ ಇವತ್ತು ಏನಾಗಿದೆ. ನಾವು ಕೊಡುವಂತಹ ವಿದ್ಯುತ್ ಯಾವ ಪ್ರಮಾಣದಲ್ಲಿ ಅದು ಬಳಕೆಯಾಗುತ್ತಿದೆ ಎಷ್ಟರ ಮಟಟಿಗೆ ಎಷ್ಟು ಗಂಟೆ ವಿದ್ಯುತ್ ಕೊಡುತ್ತಿದ್ದೇವೆ, ಸಿಂಗಲ್ ಫೇಸ್ ಎಷ್ಟು ಕೊಡುತ್ತಿದ್ದೇವೆ, 3 ಫೇಸ್ ಎಷ್ಟು ಕೊಡುತ್ತಿದ್ದೇವೆ ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಆ ವಿದ್ಯುತ್‌ಚ್ಛಕ್ತಿಯ ಕೊರತೆಯಿಂದಾಗಿ ರೈತನು ಇವತ್ತು ತೊಂದರೆಗೆ ಒಳಗಾಗುತ್ತಿದ್ದಾನೆ. ಅವನು ಮೂಲಭೂತವಾಗಿ ಹಾಕುವಂತಹ ಬಂಡವಾಳ ಏನು ಇದೆ ಆ ಬಂಡವಾಳ ಎಲ್ಲವೂ ಕೂಡ ಇವತ್ತು ಹಾಳಾಗುತ್ತಿರುವುದನ್ನು ನಾವು ನೋಡಬೇಕಾಗಿದೆ. ಇವತ್ತು higtech agriculture ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಇವತ್ತು ನಮ್ಮಲ್ಲಿ ಉತ್ಪಾದನೆಯನ್ನು ಜಾಸ್ತಿ ಮಾಡಬೇಕು. ಉತ್ಪಾದನೆಯಾಗುವಂತಹ ಪ್ರಮಾಣ ಜಾಸ್ತಿ ಇಲ್ಲ, ಜಾಸ್ತಿ ಬೇಕೆನ್ನುವಂತಹ ಸಂದರ್ಭದಲ್ಲಿ ಇವತ್ತು ಮಳೆಯನ್ನು ನಂಬಿ ವ್ಯವಸಾಯವನ್ನು ಮಾಡುವಂತಹ ರೈತನಿಂದ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲೋ ಒಂದು ಕಡೆಗೆ ಇವತ್ತು hightech agriculture concept ಅನ್ನು ಇವತ್ತು

ಸ್ಥಳೀಯವಾಗಿರುವಂತಹ ಕೃಷಿಕರು ಪ್ರಗತಿಪರವಾಗಿರುವಂತಹ ರೈತರು ಕೃಷಿಯಲ್ಲಿ ಆಸಕ್ತಿ ಇರುವಂತಹ ಜನರಿಗೆ ಒತ್ತನ್ನು ಕೊಟ್ಟು ಉತ್ಪಾದನೆಯನ್ನು ಜಾಸ್ತಿ ಮಾಡುವಂತಹ ಕೆಲಸ ಅನಿವಾರ್ಯತೆಯು ನಮ್ಮ ಮುಂದೆ ಇದೆ. ಆದರೆ ನಾವು ಏನಾದರೂ ಕೂಡ ಇವತ್ತು hightech agriculture ಮಾಡಬೇಕು ಅದಕ್ಕೆ ಸಾಲಬೇಕೆಂದು ಕೇಳಿದರೆ ಅವನು crop loanನಲ್ಲಿ ಅವಲಂಬಿಸುವುದಕ್ಕಾಗುವುದಿಲ್ಲ. ಮೂಲಭೂತವಾಗಿ ಬಂಡವಾಳ ಹಾಕುವುದಕ್ಕೆ ಬ್ಯಾಂಕ್‌ಗಳಲ್ಲಿ ಸಾಲ ಬೇಕಾಗುತ್ತದೆ. ಇವತ್ತು ಯಾವುದಾದರೂ ಬ್ಯಾಂಕ್‌ಗಳಲ್ಲಿ ಅವನು ಕೃಷಿ ಅಭಿವೃದ್ಧಿಗೆ ಒಂದು ರೂಪಾಯಿ ಸಾಲ ಯಾರಾದರೂ ಕೊಡುತ್ತಿದ್ದಾರೆಯೇ ಎಂದರೆ ಯಾರೂ ಕೊಡುತ್ತಿಲ್ಲ. ಅದಕ್ಕೆ ಆ ಬ್ಯಾಂಕ್‌ನವರು ಕೇಳುವುದೇನೆಂದರೆ ನಿಮಗೆ ಬೆಂಗಳೂರಿನಲ್ಲಿ ಯಾವುದಾದರೂ ಮನೆ, ಸೈಟ್ ಇದೆಯೇ, ಇದ್ದರೆ ದಾಖಲೆಗಳನ್ನು ಇಟ್ಟುಕೊಂಡು ಸಾಲ ಕೊಡುತ್ತಾರೆಯೇ ವಿನಃ ಇವತ್ತು ಕೃಷಿ ಮಾಡುತ್ತಾರೆ ಎನ್ನುವ ಕಾರಣಕ್ಕೋಸ್ಕರ ಅವನು B.A., B.Sc. (Ag.,) M.Sc. (Ag.,) ಇರಲಿ. ಇವತ್ತು B.S.c. (Ag.,) M.Sc. (Ag.,) ಮಾಡಿರುವವರು ಕೃಷಿಯನ್ನು ಮಾಡುತ್ತಿರುವುದನ್ನು ನೋಡುತ್ತೇವೆ. ಆದರೆ ಸಾಲದ ಪ್ರಶ್ನೆ ಬಂದಾಗ ಅವರು ಒದ್ದಾಡುತ್ತಿರುವುದನ್ನು ನೋಡಿದರೆ ನಾವು ಎಷ್ಟು ಪ್ರೋತ್ಸಾಹ ಮಾಡುತ್ತಿದ್ದೇವೆಂಬುದು ಅರ್ಥವಾಗುತ್ತದೆ. ರೈತರಾಗಿರುವಂಥವರಿಗೆ ನಿಜವಾಗಿಯೂ ಸಹ ಪ್ರೋತ್ಸಾಹ ಇವತ್ತು ಸಿಗುತ್ತಿಲ್ಲವೆನ್ನುವಂಥ ಮಾತನ್ನು ಹೇಳಬೇಕಾಗುತ್ತದೆ. ಅದರ ಬಗ್ಗೆ ನಾವು ಎಲ್ಲೋ ಒಂದು ಕಡೆ ಯೋಚನೆ ಮಾಡಿ Hi-tech Agriculture ಮಾಡುವಂಥ Educated, B.Sc. (Ag.,) M.Sc. (Ag.,) ಮಾಡಿರುವಂಥ ಹುಡುಗರು ಕೃಷಿ ಮಾಡುವುದಕ್ಕೆ ಹೆಚ್ಚು ಪ್ರೋತ್ಸಾಹ ಕೊಡತಕ್ಕಂಥ ರೀತಿಯಲ್ಲಿ ನಾವು ಹೋಗಬೇಕಾಗುತ್ತದೆ. ನಮ್ಮಲ್ಲಿ ಇವತ್ತು ಶಾಶ್ವತವಾದಂಥ ನೀರಾವರಿ ಯೋಜನೆ ಮೂಲಕ ಇವತ್ತು ಬೆಳೆಯನ್ನು ತೆಗೆಯುತ್ತಿರುವುದು ಕೇವಲ 34–35 ಲಕ್ಷ ಎಕರೆ. ಉಳಿದದ್ದಕ್ಕೆ ನಾವು ಮಳೆಯನ್ನು ನಂಬಿ ವ್ಯವಸಾಯ ಮಾಡುವಂಥದ್ದು. ಒಟ್ಟಾರೆ ವ್ಯವಸಾಯ ಮಾಡಲಿಕ್ಕೆ ಯೋಗ್ಯವಾಗಿರುವಂಥ ಭೂಮಿಯಲ್ಲಿ ಇವತ್ತು ಶೇಕಡ 75ರಷ್ಟು ಮಳೆಯನ್ನು ನಂಬಿರುವಂಥದ್ದು. ಬಹುಶಃ ರಾಜಸ್ತಾನ ಬಿಟ್ಟರೆ next

highest dry zone ಅಂದರೆ ಕರ್ನಾಟಕವೇ. ಅಂಥದ್ದರಲ್ಲಿ ನೀವು ಒಂದು ಭೂಚೇತನ ಎಂಬ ಕಾರ್ಯಕ್ರಮವನ್ನು ಘೋಷಿಸಿದಿರಿ. ICRISATನ ಸಹಯೋಗದೊಂದಿಗೆ ಭೂಚೇತನ ಎಂಬ ಕಾರ್ಯಕ್ರಮವನ್ನು ನೀವು ಮಾಡಿದ್ದೀರಿ. ಅದರಲ್ಲಿ feeding this micro nutrients in a dry belt, really it is a very good concept. ಇದನ್ನು ಇಡೀ ರಾಜ್ಯಕ್ಕೆ ವಿಸ್ತಾರ ಮಾಡುತ್ತೇವೆಂದು ನೀವು ಹೇಳಿದ್ದೀರಿ, ಆದರೆ ಅದಕ್ಕೆ ಇಟ್ಟಿರುವ ಹಣ ಕೇವಲ 40.00 ಕೋಟಿ ರೂಪಾಯಿಗಳು ಮಾತ್ರ. ಅದು ಹೇಗೆ ಸಾಧ್ಯವಾಗುತ್ತದೆ? ನಿಮಗೆ ಈಗ ಕೊರತೆಗಳೇನೇನು ಇವೆ? ಈಗಾಗಲೇ ನಮ್ಮ ಕರ್ನಾಟಕದಲ್ಲಿರತಕ್ಕಂಥ soild structure, soil nutrient value ಏನಿದೆ ಎಂಬುದನ್ನು ನಮ್ಮಲ್ಲಿ ಈಗಾಗಲೇ ಸಮೀಕ್ಷೆ ಆಗಿ ಅದಕ್ಕೆ ವರದಿ ಇದೆ. ಕೇಂದ್ರ ಸರ್ಕಾರದ ಸಹಯೋಗದಿಂದ ನಮ್ಮಲ್ಲಿರುವಂಥ ವರದಿಯ ಹಿನ್ನೆಲೆಯಲ್ಲಿ ನಮ್ಮ ಭೂಮಿಗೆ micro nutrient loss ಆಗಿದೆ. ಅದು Phosphorus, Sodium, Copper, Zinc ಇರಬಹುದು, ಅದನ್ನು ಯಾವ ಪ್ರಮಾಣದಲ್ಲಿ ಕೊಡಬೇಕು ಎನ್ನುವಂಥದ್ದನ್ನು ಪ್ರಚಾರ ಮಾಡುವಂಥ ಕೆಲಸವನ್ನು ಮಾಡಿದರೆ ಅದಕ್ಕೆ ನನಗೆ ಅನ್ನಿಸುತ್ತದೆ ಈ ಯೋಜನೆಗೆ 100–200 ಕೋಟಿ ರೂಪಾಯಿಗಳನ್ನು ಇಟ್ಟರೆ ಬಹಳ ಒಳ್ಳೆಯದಾಗುತ್ತದೆ. ಇದರ ಮುಖೇನ ಇವತ್ತು Chemical fertilizers ಅನ್ನು application ನಿಂದ ಕಡಿಮೆ ಮಾಡಲು ಸಾಧ್ಯ. ನಮ್ಮ crop ನ intensity, ನಮ್ಮ crop ನ yield ಅನ್ನು ಇವತ್ತು ಜಾಸ್ತಿ ಮಾಡಲಿಕ್ಕೆ ಸಾಧ್ಯವೆಂದು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ಕಾರ್ಯಕ್ರಮವೆಂದರೆ, ಇವತ್ತು ನಿಜವಾಗಿಯೂ ಮುಖ್ಯ ಮಂತ್ರಿಗಳನ್ನು ಮೆಚ್ಚಬೇಕು. ಸುರೇಶ್‌ಕುಮಾರ್‌ರವರೇ ನನಗೆ ಅರ್ಥವಾಗುವುದಿಲ್ಲ. ನಿನ್ನೆ ಬಜೆಟ್ ಭಾಷಣವನ್ನು ಮಾಡುತ್ತಾರೆ, ಮಾರ್ಚ್ ಒಳಗೆ ಸರಕಾರಿ ಆದೇಶಗಳನ್ನು ಹೊರಡಿಸುವಂಥ ಕೆಲಸವನ್ನು ಮಾಡಿದ್ದಾರೆ. ನಾನು ನೋಡಿರುವಂತೆ ಬಹುಶಃ ಇಂಥ positive steps ಅನ್ನು ತೆಗೆದುಕೊಂಡಿರುವುದು ಇದೇ ಪ್ರಥಮ. ನೀವು ವರ್ಷದ ಕೊನೆಯಾದರೂ ಸರ್ಕಾರಿ ಆದೇಶಗಳು issue ಆಗುತ್ತಿರಲಿಲ್ಲ. ಎಲ್ಲಿ promises ಇರುತ್ತವೆ, ಅಲ್ಲಿ

Head of Account ಗೊತ್ತಾಗುತ್ತಿರಲಿಲ್ಲ. ಆದರೆ ಈ ಸಾರಿ ಇವತ್ತು ಕೆರೆಗಳ ಪುನರುಜ್ಜೀವನಕ್ಕೋಸ್ಕರ ಕ್ಷೇತ್ರಕ್ಕೆ 5.00 ಕೋಟಿ ರೂಪಾಯಿಗಳು ಎಂದು ಹೇಳಿ ಈಗಾಗಲೇ ಪಟ್ಟಿಗಳನ್ನು final ಮಾಡುವಂಥ ಕೆಲಸವನ್ನು ಮಾಡಿದ್ದಾರೆ, ಬಹಳ ಸಂತೋಷ. ಅದರ ಜೊತೆಗೆ ನಿಮಗೆ ಸುವರ್ಣ ಭೂಮಿ ಯೋಜನೆ ಇದೆ. ನಿಮಗೆ ಅನುಭವವಾಗಿರಬೇಕು. ಕಳೆದ ಎರಡು ವರ್ಷಗಳ ಹಿಂದೆ 22 ಲಕ್ಷ ರೈತರಿಗೆ ಇವತ್ತು fertilizers ದುಬಾರಿ ಆಗಿರುವುದಕ್ಕೆ ಕಾರಣ ಇವತ್ತು pesticides ಜಾಸ್ತಿಯಾಗಿರುವುದಕ್ಕೆ ಕಾರಣ, ಒಂದೊಂದು ಸಾವಿರ ರೂಪಾಯಿಗಳನ್ನು ಒಂದೊಂದು ಮನೆಗೆ ಕೊಡುತ್ತೇವೆಂದು ಮಾಡಿದ್ದರಿಂದ. ಆದರೆ ನೀವು 14–15 ಲಕ್ಷ ಜನರ ಮೇಲೆ reach ಆಗಲಿಕ್ಕೆ ಆಗಲೇ ಇಲ್ಲ. ಇದೇನಾಗುತ್ತದೆಂದು ಹೇಳಿದರೆ ಆಗ ರೈತರು ಆಗ ಏನು ಮಾಡಿದರು ಎಂದರೆ ಅವರ records ಅನ್ನು up-to-date ಮಾಡಿಕೊಳ್ಳುವುದಕ್ಕೆ ಒಂದು ಸಾವಿರ ರೂಪಾಯಿಗಳು ಖರ್ಚಾಯಿತು, ಅದೇನಾದರು ಆಗಲಿ, atleast ಅಷ್ಟನ್ನಾದರೂ up-to-date ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟರು ಎಂದು ಸಮಾಧಾನ ಪಟ್ಟುಕೊಳ್ಳೋಣ. ಈಗ ನಿಮ್ಮ ಹೊಸ ಯೋಜನೆಯೆಂದರೆ ಒಂದು ಸಾವಿರ ಕೋಟಿಯಲ್ಲಿ ಹತ್ತು ಲಕ್ಷ ಜನ ರೈತರಿಗೆ ಪ್ರತಿಯೊಬ್ಬರಿಗೂ ಕೂಡ 10,000 ರೂಪಾಯಿಗಳನ್ನು ಕೊಡುವಂಥ ಯೋಜನೆ ಪ್ರಥಮವಾಗಿ 5,000 ರೂಪಾಯಿಗಳನ್ನು ಸಾರಾಸಗಟಾಗಿ ಕೊಡುವುದರ ಬದಲು, ಆ 5,000 ರೂಪಾಯಿಗಳನ್ನು ಕೊಟ್ಟ ಮೇಲೆ ನೀವು ಯಾವ ರೀತಿಯಾಗಿ ಕೊಡುತ್ತೀರಿ ಎನ್ನುವುದು ನಿಮಗೆ ಗೊತ್ತಿಲ್ಲ. ಏಕೆಂದರೆ ನಿಮಗೆ Government Order ಬರುವವರೆಗೆ ನಾವು ನಿಮ್ಮನ್ನು ಟೀಕೆ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ. ಬಹುಶಃ ನನಗೆ ಅನ್ನಿಸುತ್ತದೆ, ಇವೆಲ್ಲವನ್ನು ನೋಡುವುದಕ್ಕೆ ನಿಮ್ಮ ಹತ್ತಿರ ಯಾವ infrastructure ಇದೆ? ಯಾವ ರೀತಿಯಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ? ನಿಮ್ಮ ರೈತ ಸಂಪರ್ಕ ಕೇಂದ್ರಗಳಲ್ಲಿ ಬೀಜ, ಗೊಬ್ಬರವನ್ನು ಹಂಚಲಿಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ನೋಡುವುದಕ್ಕೆ staff ಇಲ್ಲ. ಎಷ್ಟರಮಟ್ಟಿಗೆ ಈ ಯೋಜನೆ success ಆಗುವಂಥದ್ದು ನೋಡಬೇಕು. ಒಂದು ಮಾತ್ರ ಅರ್ಥ ಮಾಡಿಕೊಳ್ಳಬೇಕು. ನಾವು ಆತುರದಲ್ಲಿ

ಏನಾದರೂ ಯೋಜನೆಗಳನ್ನು ಮಾಡಿದರೆ ಆಗ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ನಿಜವಾದಂಥ ಫಲಾನುಭವಿಗಳನ್ನು ಗುರುತಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮಲ್ಲಿ ಅಂಥ infrastructure ಖಂಡಿತವಾಗಿ ಇಲ್ಲ. ಬಹುಶಃ ನನಗೆ ಅನ್ನಿಸುತ್ತದೆ. ಹತ್ತು ಲಕ್ಷ ಕುಟುಂಬಗಳಿಗೆ ಕೊಡುವಂಥ ಕೆಲಸವನ್ನು ಮಾಡಿದರೆ ಅವರು ಕೃಷಿಯಲ್ಲಿ ಸಾಧನೆ ಮಾಡುತ್ತಾರೋ, ಬಿಡುತ್ತಾರೋ, ಆದರೆ ಒಂದಂತೂ ನಿಜ, ಹತ್ತು ಲಕ್ಷ ಜನ ಕುಟುಂಬಗಲನ್ನು ಬಿಜೆಪಿ ಕಾರ್ಯಕರ್ತರು ಎಂದು ಹುಟ್ಟುಹಾಕಿದಂತಾಗುತ್ತದೆ. ಅದು ಬಹುಶಃ ರಾಜಕಾರಣದ ಬಜೆಟ್ ಅನನು ಮಂಡನೆ ಮಾಡುವುದು ತಪ್ಪೆಂದು ನಾನು ಹೇಳುವುದಿಲ್ಲ. ಆದರೆ ಎಲ್ಲೋ ಒಂದು ಕಡೆಗೆ ಪರೋಕ್ಷವಾಗಿ ಕೃಷಿಕನಿಗೆ ನಿಜವಾಗಿಯೂ ಸಹಾಯ ಮಾಡುವಂಥದ್ದು ಆಗಬೇಕು. ಇದನ್ನು ನಾವು ಯಾವ ರೀತಿಯಾಗಿ ಮಾಡುತ್ತೀರಿ? ಬಿಡುತ್ತೀರಿ ಎಂಬುದು ನನಗೆ ಗೊತ್ತಿಲ್ಲದೇ ಇರುವುದರಿಂದ ನಾವು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಏಕೆ ನಾನು ಈ ಮಾತನ್ನು ಹೇಳುತ್ತೇನೆಂದರೆ ಈ ಸಾವಯವ ಕೃಷಿ ಮಿಷನ್ ಎಂಬ ಒಂದು ದೊಡ್ಡ ಸಂಸ್ಥೆಯನ್ನು ರಾಜ್ಯದಲ್ಲಿ ಹುಟ್ಟು ಹಾಕಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ಸಾವಯವ ಗೊಬ್ಬರಕ್ಕೆ ಪ್ರೋತ್ಸಾಹವನ್ನು ಮಾಡುವಂಥ ಕೆಲಸವನ್ನು ಮಾಡಿದಿರಿ. ನೀವು ಅದಕ್ಕೆ ಖರ್ಚು ಮಾಡುತ್ತಿರುವಂಥ ಹಣದ ಪ್ರಮಾಣ ಎಷ್ಟು ಎಂಬುದನ್ನು ನೋಡಿದರೆ ಅದು ಕೋಟಿ, ಕೋಟಿ. ಈ ಸಾರಿ ಬೇರೆ 200-300 ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದೀರಿ. ಅದೆಷ್ಟು ಖರ್ಚು ಮಾಡುತ್ತಿರೋ ಏನು ಕಥೆಯೂ ನನಗಂತೂ ಗೊತ್ತಿಲ್ಲ. ಆದರೆ ಖರ್ಚು ಮಾಡುತ್ತಿರುವಂಥ ವಿಧಿ ವಿಧಾನಗಳು ಯಾವ ರೀತಿ ಇವೆ ಎನ್ನುವುದನ್ನು ನೀವು ನೋಡಬೇಕಾಗುತ್ತದೆ. ಸಾವಯವ ಕೃಷಿಕ ಪರಿವಾರ ಎಂದು ಹೆಸರಿಟ್ಟರು. ಪ್ರತಿ ತಾಲ್ಲೂಕಿನಲ್ಲಿಯೂ ಯಾರಿಗಾದರೂ ಸರ್ಕಾರಿ ಅಧಿಕಾರಿಗಳಿಗೆ ಗೊತ್ತಿದೆಯೇ? ಯಾರು ಸಂಘ ಮಾಡಿದರು? ಯಾರು ಸೇರಿ ಕೊಂಡಿದ್ದಾರೆ? ಅವರ ಹಿನ್ನೆಲೆಯೇನು? ಯಾರಿಗೂ ಗೊತ್ತಿಲ್ಲ. ಅಧಿಕಾರಿಗಳಿಗಂತೂ ಏನು ಗೊತ್ತಿಲ್ಲ. ಸಾವಯವ ಕೃಷಿ ಮಿಷನ್‌ಗೆ ಒಬ್ಬರು ಅಧ್ಯಕ್ಷರನ್ನು ಮಾಡಿ ಕೂರಿಸಿದ್ದೀರಿ. ಎಲ್ಲಾ ತಾಲ್ಲೂಕುಗಳಲ್ಲಿಯೂ ಇವತ್ತು ನೀವು

ಮಾಡಿದ್ದೀರಿ. ಅದಕ್ಕೆ ಪ್ರೋತ್ಸಾಹ ಯಾವ ರೀತಿ ಬರುತ್ತದೆಂದರೆ ಅಲ್ಲಿ ಒಂದು ಗೌರವಧನ ಕೊಡುವ ಯೋಜನೆ ಇದೆ. ಗೌರವಧನ ಒಬ್ಬ ಸಂಚಾಲಕನಿಗೆ ಒಂದು ತಿಂಗಳಿಗೆ 7,000 ರೂಪಾಯಿಗಳು ಕೊಡುತ್ತಾರೆ. Facilitators ಎಂದು ಇರುತ್ತಾರೆ, ಅವರು 15 ಜನ, ಅವರಿಗೆ ತಿಂಗಳಿಗೆ 1,500–00 ರೂಪಾಯಿಗಳು. ಅದರಲ್ಲಿ ಒಟ್ಟು 500 ಜನ ಸದಸ್ಯರಿರಬೇಕು. ನಾನು ಸತ್ಯ ಹೇಳುತ್ತೇನೆ ಅಧ್ಯಕ್ಷರೆ, ಒಂದು ನೂರ ಜನರಿಗೆ ಸಾವಯವ ಗೊಬ್ಬರ ಎಂದರೆ ಏನೆಂದು ಗೊತ್ತಿಲ್ಲ. ನಾನು ಪ್ರಾರಂಭ ವರ್ಷದಲ್ಲಿ ಅದನ್ನು ನಡೆಯಲಿ ನೋಡೋಣ ಎಂದು ಸ್ವಾಗತಿಸಿದ್ದೇನೆ, ನಿಜ, ಎರಡು ವರ್ಷಗಳಾದ ಮೇಲೆ ನೋಡೋಣವೆಂದು ಮೂರು ತಾಲ್ಲೂಕುಗಳಲ್ಲಿ ನಾನೇ ಖುದ್ದಾಗಿ ಹೋಗಿ ವಿಚಾರ ಮಾಡುವಂಥ ಕೆಲಸ ಮಾಡಿದೆ, ಆದರೆ ನನ್ನ ದುರಾದೃಷ್ಟ ಅಲ್ಲಿ ಸಾವಯವ ಗೊಬ್ಬರ ಎಂದರೆ ಏನು ಎಂಬ ವಿಚಾರವೇ ಗೊತ್ತಿಲ್ಲದಂಥ ಜನರು ತುಂಬಿರುವಂಥದ್ದು ಮತ್ತು ಕೊಟ್ಟಂಥ ಹಣ ಇವತ್ತು ಸಂಪೂರ್ಣವಾಗಿ ದುರುಪಯೋಗವಾಗಿರುವಂಥದ್ದು. ಏನೂ ಕೊಡುತ್ತಾರೆಂದರೆ,

(ಈ ಹಂತದಲ್ಲಿ ಅಧ್ಯಕ್ಷ ಪೀಠವನ್ನು ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್. ಯೋಗೀಶ್ ಭಟ್‌ರವರು ಅಲಂಕರಿಸಿದರು).

ನಾಟಿ ಹಸುವನ್ನು ಸಾಕುವುದಕ್ಕೋಸ್ಕರ ಮೂರು ಸಾವಿರ ಸಹಾಯಧನವನ್ನು ಕೊಡುತ್ತಾರೆ. ತೀರ್ಮಾನ ಮಾಡುವಂಥವರು ಯಾರು? ಅವರೇ. ಸರ್ಕಾರದ ಅಧಿಕಾರಿಗಳಿಗೆ ಗೊತ್ತಿಲ್ಲ, ಇವರೇನಿದ್ದರೂ ಚೆಕ್‌ಗೆ ಸಹಿ ಹಾಕುವುದು ಅಷ್ಟೇ. ದನದ ಕೊಟ್ಟಿಗೆಯನ್ನು ಕಟ್ಟುವುದು ಏತಕ್ಕೆಂದರೆ ಗಂಜಲವನ್ನು ಶೇಖರಣೆ ಮಾಡುವುದು, ಅದು ಭೂಮಿಯಲ್ಲಿ ಹೀರಿ ಹೋಗಬಾರದು, ಅದರ ಬಳಕೆ ಆಗಬೇಕೆನ್ನುವ ಕಾರಣಕ್ಕೋಸ್ಕರ ಒಂದು ದನದ ಕೊಟ್ಟಿಗೆ ಎಂದರೆ ಸಾವಿರ ರೂಪಾಯಿಗಳು. 3,000–10,000 ರೂಪಾಯಿಗಳವರೆಗೆ ಕೊಡುತ್ತಾರೆ. ಅದನ್ನು ಯಾರು ತೆಗೆದುಕೊಂಡು ಯಾರು ಬಳಕೆ ಮಾಡಿಕೊಂಡಿದ್ದಾರೆಂಬುದನ್ನು ನೀವು ನೋಡಬೇಕು ಅಧ್ಯಕ್ಷರೇ, ಯಾರ ಮನೆಯಲ್ಲಿ ದನದ ಕೊಟ್ಟಿಗೆಯಿದೆಯೋ ಅವರೇ ಆ ಹಣವನ್ನು ಪಡೆದು ಕೊಂಡಿದ್ದಾರೆ. ನಾನು ಹೇಳುತ್ತೇನೆ, ಸರ್ಕಾರದ ಹಣ ಈಗ ಎಷ್ಟು ವರ್ಷ

ಅಂದರೆ ಒಂದೊಂದು ತಾಲ್ಲೂಕಿಗೆ ಬಿಡುಗಡೆ ಆಗಿರುವಂಥದ್ದು 2008-09ರಲ್ಲಿ 24.50 ಲಕ್ಷ ರೂಪಾಯಿಗಳು, 2009-10ರಲ್ಲಿ 16,63,000-00, 2010-11ರಲ್ಲಿ ಈಗಾಗಲೇ 18.00 ಲಕ್ಷ ರೂಪಾಯಿಗಳಷ್ಟು ಬಿಡುಗಡೆಯಾಗಿದೆ, ಇನ್ನು ಬಿಡುಗಡೆಯಾಗುತ್ತಿದೆ. ಈ ಬಗ್ಗೆ ನಮಗೆ ಸಂಪೂರ್ಣವಾಗಿ ಮಾಹಿತಿ ಸಿಕ್ಕಿಲ್ಲ. ಇಷ್ಟು ದೊಡ್ಡ ಪ್ರಮಾಣದ ಹಣ ಖರ್ಚಾಗಬೇಕಾದಾಗ ಇದಕ್ಕೆ ನೀವು 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಹೊರಟಿರುವಂಥ ಸಂದರ್ಭದಲ್ಲಿ ಅದರ accountabilityಗೆ ಯಾರು ಜವಾಬ್ದಾರರು? ಸಾರಾಸಗಟಾಗಿ ದುಡ್ಡು ಕೊಟ್ಟರೆ ದರ ಸದುಪಯೋಗ ಆಗಿದೆಯೇ ಇಲ್ಲವೇ ಎನ್ನತಕ್ಕಂಥದ್ದನ್ನು ಯಾರು ವಿಚಾರ ಮಾಡುವವರು? ಆಡಿಟ್ ಮಾಡಿರುವವರು ಯಾರು? ಅದರ intentions ಅನ್ನು ಪರೀಕ್ಷೆ ಮಾಡಿರುವವರು ಯಾರು? ಇದನ್ನು ಯೋಚನೆ ಮಾಡಬೇಕು. ಈಗಾಗಲೇ ಸಿದ್ಧರಾಮಯ್ಯನವರು ಹೇಳುತ್ತಿದ್ದರು, ಅವರು ಸಾಕಷ್ಟು ಹೊರಗಡೆಗೆ ಹೋದಾಗ ನೋಡಿದ್ದಾರೆ. R.S.S. ಕಾರ್ಯಕರ್ತರು ಬಿಟ್ಟರೆ ಇನ್ನಾರೂ ಬೇರೆಯವರು ಇಲ್ಲವೆಂಬ ಮಾತನ್ನು ಹೇಳಿದ್ದಾರೆ.

ಬಹುಶ: ನಮ್ಮ ಕಡೆ ಆರ್.ಎಸ್.ಎಸ್. ಕಾರ್ಯಕರ್ತರು ಎನ್ನುವುದಕ್ಕಿಂತ ಹೆಚ್ಚಾಗಿ ಬಿ.ಜೆ.ಪಿ. ಕಾರ್ಯಕರ್ತರುಗಳಂತೂ ಅದರಲ್ಲಿ ಇದ್ದಾರೆ ಎನ್ನುತ್ತಾರೆ. ನಾನು ಕೂಡ ಎರಡು-ಮೂರು ಸಭೆಗಳಿಗೆ ಹೋಗಿದ್ದೇನೆ, ನೋಡಿದಾಗ ನನಗೆ ಅರ್ಥವಾಯಿತು. ಆದರೆ ಈ ರೀತಿಯಾದ ಕಾರ್ಯಕ್ರಮ accountability ಇಲ್ಲದೇ, ಹಣಕಾಸು ಇಲಾಖೆಯವರು ಇಂತಹ ಯೋಜನೆಗಳನ್ನು ಹೇಗೆ ಮಂಜೂರು ಮಾಡುತ್ತಾರೆ? ಅವರಿಗೆ ದುಡ್ಡು ಕೊಟ್ಟಿದ್ದು ಆಯಿತು. ಖರ್ಚು ಆಯಿತಾ ಅಥವಾ ಇಲ್ಲವೇ? ಅದನ್ನು ಆಡಿಟ್ ಮಾಡುವವರು ಯಾರು, ಇನ್ನೊಂದು, ಅದರ ಉದ್ದೇಶವೇನು? ಯಾರಿಗೂ ಅರ್ಥವಾಗಿಲ್ಲ. ಮಾನ್ಯ ಛೇರ್ಮನ್‌ರವರೆ, it is a high time, you have to institute an enquiry against them. Enquiry ಎಂದರೆ ಅವರು ಏನು ಮಾಡುತ್ತಿದ್ದಾರೆ ಎಂದು ನೋಡುವುದಕ್ಕಾಗಿ ಒಂದು independent agency ಯಿಂದ ಮಾಡಿಸಿದರೆ ಅದು ಒಳ್ಳೆಯದಾಗುತ್ತದೆ. ಏಕೆಂದರೆ, ನಾನು

ತಮ್ಮ ಉದ್ದೇಶವನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ, ಅವರು ಅನುಸರಿಸುತ್ತಿರುವ ಕ್ರಮ ಏನಿದೆ ಅದು ಸರಿಯಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆ ಕಾರಣಕ್ಕೋಸ್ಕರ ಇವತ್ತು ಅದನ್ನು ಪರೀಕ್ಷೆ ಮಾಡಿಸುವುದಕ್ಕೋಸ್ಕರ ಒಂದು independent agency ಯಿಂದ ತನಿಖೆ ಮಾಡಿಸಬೇಕು ಎನ್ನುವುದು ಒಂದು. ಎರಡನೆಯದು ಹಣಕಾಸು ಇಲಾಖೆಯವರು ಕೂಡ ಇಂತಹ ಯೋಜನೆಗಳನ್ನು ಜಾರಿಗೆ ತರಬೇಕಾದಾಗ ಅತ್ಯಂತ ಜಾಗರೂಕತೆಯಿಂದ, ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಾವು 10 ಲಕ್ಷ ಜನಕ್ಕೆ 10 ಸಾವಿರದಂತೆ ಕೊಡುತ್ತೇವೆ. ಅದರಿಂದ ಏನು ಲಾಭ ಆಯಿತು ಎನ್ನುವ ಮಾಹಿತಿ ಕೂಡ ಬೇಕು ಆ ಮಾಹಿತಿ ಎಲ್ಲಿ ಬರುತ್ತದೆ? ಅದಕ್ಕೆ ನೀವು ಈ ರೀತಿಯಾಗಿ ಬಜೆಟ್‌ನಲ್ಲಿ ಬಡವರ ದುಡ್ಡು ಇದೆ ಎನ್ನುವ ಕಾರಣಕ್ಕೋಸ್ಕರ ಸ್ವೇಚ್ಛೆಯಾಗಿ ಈ ರೀತಿಯಾದಂತಹ ಯೋಜನೆಗಳನ್ನು ಮಾಡಿದರೆ ಕೃಷಿಕರಿಗೆ ಅಥವಾ ಕೃಷಿಗೆ ಎಂದಿಗೂ ಸಹಾಯ ಆಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, fertilizers ಬಗ್ಗೆ, ನಿಮಗೆ ಈ ಸಲ ಕೃಷಿ ಉತ್ಪಾದನೆ ಸ್ವಲ್ಪ ಚೆನ್ನಾಗಿ ಆಗಿದೆ ಎಂದರೆ, ಬೆಳೆ ಚೆನ್ನಾಗಿ ಆಗಿದೆ ಎನ್ನುವ ಮಾತನ್ನು ಹೇಳುವುದಾದರೆ, ಎಲ್ಲೋ ಒಂದು ಕಡೆಗೆ ನನಗನಿಸುತ್ತದೆ, ಬಹುಶ: fertilizers ಸರಬರಾಜು ಮಾಡುವುದರಲ್ಲಿ ಸ್ವಲ್ಪ ಮಟ್ಟಿಗೆ ಸರ್ಕಾರ ಯಶಸ್ವಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಪ್ರಾರಂಭದ ವರ್ಷದಲ್ಲಿ ಎಡವಿದರು. ಆಗ ನಾವೆಲ್ಲಾ ಸಲಹೆ ಕೊಟ್ಟೆವು. ಇದನ್ನು marketing federation ಗೆ ಹಣವನ್ನು ಕೊಟ್ಟು ಅದರ ಮುಖೇನ ತರಿಸುವಂತಹ ಕೆಲಸವನ್ನು ಮಾಡಿ ಎಂದು ಹೇಳಿದೆವು. ಅದರ ಪ್ರಕಾರ ಮುಖ್ಯಮಂತ್ರಿಗಳು ಸುಮಾರು 400–500 ಕೋಟಿ ರೂ. ಹಣವನ್ನು ಕೊಟ್ಟು ಗೊಬ್ಬರವನ್ನು ದಾಸ್ತಾನು ಮಾಡಿದ ಹಿನ್ನೆಲೆಯಲ್ಲಿ ಹೋದ ವರ್ಷ ಗೊಬ್ಬರಕ್ಕೆ ಕೊರತೆ ಆಗಲಿಲ್ಲ. ಅದೂ ಕೂಡ timely ಇವತ್ತು ರೈತರಿಗೆ ಗೊಬ್ಬರ ಸಿಗುವ ಕೆಲಸವಾಯಿತು. ಆ ಕಾರಣಕ್ಕೋಸ್ಕರ ಇವತ್ತು ಉತ್ಪಾದನೆಯಲ್ಲಿ ಸ್ವಲ್ಪ ಮಟ್ಟಿಗೆ ಬೆಳವಣಿಗೆಯನ್ನು ಕೂಡ ಕಾಣುವುದಕ್ಕೆ ಸಾಧ್ಯವಾಗುತ್ತದೆ. ಬಜೆಟ್ ಪುಸ್ತಕದಲ್ಲಿ ಮಾವು ಮಂಡಳಿ, ದ್ರಾಕ್ಷಿ ಮಂಡಳಿ

ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ಮಂಡಳಿಗಳನ್ನು ಮಾಡುವುದು ಸರಿ. ಆ ಮಂಡಳಿಗಳ ಜೊತೆಗೆ ನಾನು ಇದ್ದ ಕಾಲದಲ್ಲಿ ಕೂಡ ತೊಗರಿಬೆಳೆಗಾರರ ಬವಣೆಯನ್ನು ನೀಗಿಸುವುದಕ್ಕೋಸ್ಕರ ಐದು ಕೋಟಿ ರೂ.ಗಳನ್ನು ಪ್ರಾಥಮಿಕವಾಗಿ ಕೊಟ್ಟು ಒಂದು ತೊಗರಿ ಬೋರ್ಡ್ ಎಂದು ಮಾಡಿದೆವು. ಆ ತೊಗರಿ ಬೋರ್ಡ್ ಆದಮೇಲೆ ನಾನು ಇರಲಿಲ್ಲ. ಆಮೇಲೆ ಏನಾಗಿದೆ ಎಂದರೆ, ತೊಗರಿ ಬೆಳೆಯುವವನು ಕೂಡ ಅತ್ಯಂತ ಸಂಕಷ್ಟದಲ್ಲಿದ್ದಾನೆ. ಆ ತೊಗರಿ ಬೋರ್ಡ್ ಪ್ರಯೋಜನವಾಗುವುದಿಲ್ಲ. ಮಾವು ಬೆಳೆಯುವವರು ಸಹ ಹೋದವರ್ಷ ನಿರ್ನಾಮವಾಗಿ ಹೋದರು. ಅವರಿಗೆ ಯಾವುದೇ ಸಲಹೆ ಕೊಡುವುದಕ್ಕೆ ಮಾವಿನ ಬೋರ್ಡ್ ಬರಲಿಲ್ಲ. ದ್ರಾಕ್ಷಾರಸವನ್ನು ಮಾಡುವುದಕ್ಕೋಸ್ಕರ, ಪ್ರೊಮೋಷನ್ ಮಾಡುವುದಕ್ಕೋಸ್ಕರ ದ್ರಾಕ್ಷಾ ಮಂಡಳಿ ಎಂದು ಮಾಡಿದರು. ಇವೆಲ್ಲಾ ಆರಂಭದ ಶೂರತ್ವ, ಪ್ರಾರಂಭದಲ್ಲಿ ನಡೆಯುತ್ತವೆ. ಆಮೇಲೆ ತದನಂತರದ ದಿನಗಳಲ್ಲಿ ಅದಕ್ಕೆ ಪ್ರೋತ್ಸಾಹವಿಲ್ಲ. ಮಾನ್ಯತೆ ಕೊಡುವುದಿಲ್ಲ. ಅದಕ್ಕೆ ನಾಮಕಾವಸ್ಥೆಗೆ ಒಬ್ಬರು ಅಧಿಕಾರಿ ಇರುತ್ತಾರೆ, ಯಾರೋ ಒಬ್ಬರು ಅಧ್ಯಕ್ಷರು ಇರುತ್ತಾರೆ. ಇದನ್ನು ಬಿಟ್ಟರೆ ಎಲ್ಲೋ ಒಂದು ಕೊಠಡಿಯಲ್ಲಿ ಕುಳಿತಿರುತ್ತಾರೆ. ಆದರೆ, ಅದು ಯಾವುದೇ ರೀತಿ ಕೂಡ ಸಹಾಯವಾಗುವುದಿಲ್ಲ. ಇದು ತಪ್ಪು. ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಅದಕ್ಕೆ ಪೂರಕವಾಗಿರುವಂತಹ ಮಾವು ಇರಲಿ, ತೊಗರಿ ಇರಲಿ ಅಥವಾ ದ್ರಾಕ್ಷಿ ಇರಲಿ ಅದಕ್ಕೆ ಪ್ರೋತ್ಸಾಹ ಮಾಡಬೇಕಾದಾಗ ರೈತರಿಗೆ ಯಾವ ರೀತಿಯಾಗಿ ಸಲಹೆಗಳನ್ನು ಕೊಡಬೇಕು ಎನ್ನುವುದನ್ನು ಕೊಡುವುದರಲ್ಲಿ ಆ ಬೋರ್ಡ್‌ಗಳು ಮುಂದೆ ಬಂದಾಗ ಮಾತ್ರ ಖಂಡಿತವಾಗಿ ಸಹಾಯವಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಬಹಳ ಮುಖ್ಯವಾದುದು, ಕೃಷಿಯಲ್ಲಿ ಇವತ್ತು ಏನಾದರೂ ಅಭಿವೃದ್ಧಿಯನ್ನು ಕಾಣುವುದಕ್ಕೆ ಸಾಧ್ಯವೆಂದರೆ, ಪಶುಸಂಗೋಪನೆ ಬಹಳ ಮುಖ್ಯವಾಗಿರತಕ್ಕಂತಹ ವಿಚಾರ. ಪಶುಸಂಗೋಪನೆಯಲ್ಲಿ ಇವತ್ತು ಇರುವ ತೊಂದರೆಯೇನು? ಈ ಬಜೆಟ್ ಪುಸ್ತಕದಲ್ಲಿ ನೋಡಿದೆ. ನೀವು animal husbandry ಬಗ್ಗೆ ಇಟ್ಟಿರತಕ್ಕಂತಹ ಹಣ, ಅದರ ಬಗ್ಗೆ ಆಡಿರತಕ್ಕಂತಹ ಮಾತುಗಳು.

ನನಗನಿಸುತ್ತದೆ ಬಹುಶ: ಇಡೀ ಭಾರತ ದೇಶದಲ್ಲೇ ಅತ್ಯಂತ ಹೆಚ್ಚು ಕುರಿ ಸಾಕಾಣಿಕೆ ಇರುವುದು ಕರ್ನಾಟಕದಲ್ಲಿ. ಆ ಕುರಿಗಳನ್ನು ಸಂರಕ್ಷಿಸುವುದಕ್ಕೆ ರೈತರು ಬೆಳಿಗ್ಗೆ ಎದ್ದು ಕುರಿಯನ್ನು ಸಾಕಬೇಕಾದರೆ ಏನು ಕಷ್ಟಪಡುತ್ತಾರೆ ಎನ್ನುವುದನ್ನು ಯಾರೂ ಕೂಡ ಅರ್ಥ ಮಾಡಿಕೊಂಡಿಲ್ಲ. ಸರ್ಕಾರಕ್ಕೆ ಇನ್ನೂ ಅರ್ಥವಾಗಿಲ್ಲ. ಇವತ್ತು ಕುರಿಗಳಿಗೆ ಯಾವ ರೋಗಗಳು ಬರುತ್ತವೆ ಎನ್ನುವುದನ್ನು ಇದುವರೆಗೂ ಅರ್ಥ ಮಾಡಿಕೊಳ್ಳುವುದಕ್ಕೆ ಆಗಿಲ್ಲ. ಎಲ್ಲಾದರೂ ಪ್ರಸ್ತಾಪ ಮಾಡಿದ್ದಾರಾ ಎಂದು ನೋಡಿದೆ. ಆದರೆ, ಎಲ್ಲೂ ಪ್ರಸ್ತಾಪ ಮಾಡಿಲ್ಲ. ಒಂದು ರೋಗವಿದೆ. ಪೆಸ್ಟೀಸ್–ರುಮೆನೆಂಟ್ಸ್ ಎಂದು ರೋಗವಿದೆ. ಅಂದರೆ ಕಾಲು–ಬಾಯಿ ಜ್ವರ. Mico–plausis ಎಂಬ bacteria ದಿಂದ ನೀಲ ನಾಲಿಗೆ ಅಂದರೆ blue tongue ರೋಗ ಬರುತ್ತದೆ. ಇವೆಲ್ಲಾ ಖಾಯಿಲೆಗಳಿಗೆ ಲಸಿಕೆಯನ್ನು ನಿರಂತರವಾಗಿ ಹಾಕಿಸುವುದರ ಮುಖೇನ ಕುರಿ ಸಂಪತ್ತನ್ನು ನಾವು ಬೆಳೆಸುವುದಕ್ಕೆ ಸಾಧ್ಯ. ಇವತ್ತು ಬಹುಶ: ಈ ರೋಗದಿಂದ 100ಕ್ಕೆ 20–30ರಷ್ಟು ನಷ್ಟವಾಗುವುದು. Blue tongue ಹಾಗೂ ಕಾಲು–ಬಾಯಿ ಜ್ವರದ ಮುಖೇನ ನಷ್ಟವಾಗುತ್ತದೆ. ಆ ಲಸಿಕೆ ಹಾಕಿಸುವಂತಹ ಕೆಲಸವನ್ನು ಬಹುಶ: ನಾನು ಪ್ರತಿ ಸಂದರ್ಭದಲ್ಲೂ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಕಳೆದ 10 ವರ್ಷಗಳಿಂದಲೂ ಆ ಲಸಿಕೆ ಹಾಕಿಸುವುದಕ್ಕೆ ನಾನು ಪ್ರಯತ್ನಪಡುತ್ತಿದ್ದೇನೆ, ಸಾಧ್ಯವಾಗಲಿಲ್ಲ. ಈ ಹಿಂದೆ ಮಾನ್ಯ ಜೆ.ಹೆಚ್.ಪಟೇಲರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಆ ಲಸಿಕೆಯನ್ನು ಹಾಕಿಸುವ ಕಾರ್ಯಕ್ರಮ ಸಾಮೂಹಿಕವಾಗಿ ಆಗಬೇಕು ಎಂದು ನನ್ನ ಕ್ಷೇತ್ರದಲ್ಲಿ ನಾನು ಪ್ರಯತ್ನ ಮಾಡಿದ್ದೆ. ಅದು ಮಾಡಿದ ಪರಿಣಾಮ 2–3 ವರ್ಷಗಳ ಕಾಲ ಆ ರೋಗಗಳು ನಮ್ಮಲ್ಲಿ ಬರಲೇ ಇಲ್ಲ. ಆ ರೀತಿ resistance ಬಂತು. ಆಗ ಖರ್ಚು ಮಾಡಿದ್ದು ಕೇವಲ 10 ಲಕ್ಷ ರೂ.ಗಳು. ನಮ್ಮಲ್ಲಿ ಸಂಪೂರ್ಣವಾಗಿ ಆ ರೋಗದಿಂದ 2–3 ವರ್ಷಗಳ ಕಾಲ ದೂರವಿದ್ದೆವು. ಆದರೆ, ಅಲ್ಲಿ ಈಗಾಗಲೇ ರೋಗ ಪ್ರಾರಂಭವಾಗಿದೆ. ಅಂತಹ ಲಸಿಕೆಗಳನ್ನು ಹಾಕುವುದರ ಬಗ್ಗೆ ಇವತ್ತು ನೀವು Drug Controller of India ರವರ ಹತ್ತಿರ ಚರ್ಚೆ ಮಾಡಿ ಆ ಲಸಿಕೆಗಳನ್ನು ವಿಶೇಷವಾಗಿ

ತರಿಸುವಂತಹ ಕೆಲಸವನ್ನು ಬಹುಶ: ಇಲಾಖೆಯವರು ಮಾಡಿದ್ದರೆ ಹೆಚ್ಚಿನದಾಗಿ ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು.

ಇವತ್ತು ಹೈನುಗಾರಿಕೆ ಬಹಳ ವ್ಯಾಪಕವಾಗಿ ಚೆನ್ನಾಗಿ ಬೆಳೆಯುತ್ತಿದೆ. ನಮಗೆ ಮಿಶ್ರ ತಳಿಗಳು ಸಹ ಸಾಕಷ್ಟು ಬರುತ್ತಿವೆ. ಸ್ಥಳೀಯವಾಗಿ ಇರತಕ್ಕಂತಹದರ ಜೊತೆಗೆ ಮಿಶ್ರ ತಳಿಗಳು ಜಾಸ್ತಿ ಬಂದಿರುವಂತಹ ಹಿನ್ನೆಲೆಯಲ್ಲಿ ಲ್ಯಾಬೊರೇಟರಿಗಳನ್ನು ಮಾಡಬೇಕು. ರೋಗಗಳನ್ನು ಪತ್ತೆಹಚ್ಚುವುದಕ್ಕೆ ಲ್ಯಾಬೊರೇಟರಿಗಳನ್ನು ಪ್ರತಿಯೊಂದು ತಾಲ್ಲೂಕಿಗೂ ಸಹ ಮಾಡುವ ಕೆಲಸ ಮಾಡಬೇಕು. ಈ ದಿಸೆಯಲ್ಲಿ ಈಗಾಗಲೇ ಕೆಲವು ತಾಲ್ಲೂಕುಗಳಿಗೆ equipments ಬಂದಿದೆ. Equipments ಬಂದು ನಾಲ್ಕು ತಿಂಗಳುಗಳು ಆದರೂ ಕೂಡ ಇವತ್ತಿನವರೆಗೂ ಒಬ್ಬರು lab technician ಅನ್ನು appointment ಮಾಡಿಲ್ಲ. Lab technician ಇಲ್ಲದೇ equipments ಅನ್ನು ಒಂದು ಕಡೆ ಇಟ್ಟಿದ್ದಾರೆ. ಇದರಿಂದ ಏನು ಪ್ರಯೋಜನ? ಏನು ರೋಗ ಬರುತ್ತದೆ ಎನ್ನುವುದಕ್ಕೆ, ಆ ರೋಗಗಳನ್ನು ಪರೀಕ್ಷೆ ಮಾಡಿ, ಅದನ್ನು anticipate ಮಾಡಿ ಅದರ surveillance ಮುಖೇನ ಅದನ್ನು identify ಮಾಡಿ, ಇಲಾಖೆಗೆ ಸಲಹೆ ಕೊಡುವಂತಹ ಕೆಲಸ ಮಾಡಬೇಕು. ಆ ಪ್ರಯತ್ನ ಇವತ್ತು ನಡೆಯುತ್ತಿಲ್ಲ. ಈಗ ನೀವು ಹೇಳಿದ್ದೀರಿ, 108 ಮಾದರಿಯಲ್ಲಿ ಮನುಷ್ಯನಿಗೆ ಯಾವ ರೀತಿಯಾಗಿ ವ್ಯವಸ್ಥೆ ಮಾಡಿದ್ದೇವೋ ಅದೇ ರೀತಿ ಪಶುಗಳಿಗೂ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದು ಬಹಳ ಸಂತೋಷ. ಆದರೆ, 20 ಕೋಟಿ ರೂ.ಗೆ ವ್ಯಾನ್ ತೆಗೆದುಕೊಂಡು, ವ್ಯಾನ್ ನಿಲ್ಲಿಸಿ ಅದಕ್ಕೆ ಔಷಧಿ ಕೊಡದೇ ಹೋದರೆ ಪ್ರಯೋಜನವಾಗುವುದಿಲ್ಲ. ಅದಕ್ಕೆ three shift ನಲ್ಲಿ ಡಾಕ್ಟರ್‌ಗಳು ಇರುವಂತಹ ರೀತಿಯಲ್ಲಿ, ಡಾಕ್ಟರ್ ವ್ಯವಸ್ಥೆ ಕೂಡ ಇರಬೇಕಾಗುತ್ತದೆ. ಅದು ಇದ್ದಾಗ ಮಾತ್ರ ಅದು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಅರ್ಥ ಮಾಡಿಕೊಳ್ಳಬೇಕು. ನಾವು ತಳಿಗಳನ್ನು ಇವತ್ತು ಅಭಿವೃದ್ಧಿ ಮಾಡುವ ಮುಖೇನ ಹೆಚ್ಚು ಕೆಲಸ ಮಾಡಬೇಕಾಗುತ್ತದೆ. ಸುಧಾರಿತ ಟಗರು ಮತ್ತು ಹೋತಗಳ ಉತ್ಪಾದನೆಯನ್ನು ಹೆಚ್ಚಿಸಬೇಕಾದಾಗ ಆ ತಳಿಗಳನ್ನು ನಾವು ಬೆಳೆಸಬೇಕಾಗುತ್ತದೆ. ಬಹುಶ: ಆ

ಪ್ರಯತ್ನ ಉತ್ತರ ಪ್ರದೇಶದಲ್ಲಿ ಬಿಟ್ಟರೆ ಇನ್ನು ಯಾವ ರಾಜ್ಯದಲ್ಲೂ ಸಹ ಆಗಿಲ್ಲ. ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ತುಮಕೂರಿನ ತಿಪಟೂರು ತಾಲ್ಲೂಕಿನಲ್ಲಿ ಕೊನೆಹಳ್ಳಿ ಎಂದು ಇದೆ. ಅಲ್ಲಿ ಸುಮಾರು 700–800 ಎಕರೆ ಜಮೀನಿದೆ. ಅಲ್ಲಿ ಕೃಷಿ ವಿಜ್ಞಾನ ಕೇಂದ್ರ ಕೂಡ ಇದೆ. ಅಲ್ಲಿ ಸುಧಾರಿತ ತಳಿಗಳಾದ ಟಗರು ಮತ್ತು ಹೋತಗಳನ್ನು ಸರ್ಕಾರದ ಸಹಾಯ ಧನದೊಂದಿಗೆ ಇವತ್ತು ಸಹಾಯವನ್ನು ಮಾಡಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಬಹಳ ಮುಖ್ಯವಾದುದು. ನಿಮಗೆ ಅದರ ಅನುಭವವಿಲ್ಲ. ನಾಟಿ ಕೋಳಿಯ ಬಗ್ಗೆ ಈಗ ಬಹಳಷ್ಟು ಪ್ರಚಾರವಾಗಿದೆ. ಬ್ರಾಯ್ಲರ್ ಕೋಳಿ ಅಥವಾ ಫಾರಂ ಕೋಳಿ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಎಲ್ಲರೂ ಕೂಡ ನಾಟಿ ಕೋಳಿ ಬೇಕು ಎನ್ನುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಉತ್ತರ ಕರ್ನಾಟಕದಲ್ಲಿ ಜವಾರಿ ಕೋಳಿ ಎನ್ನುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ: ಉತ್ತರ ಕರ್ನಾಟಕದಲ್ಲಿ ಜವಾರಿ ಕೋಳಿ ಎಂದು ಹೇಳುತ್ತಾರೆ. ನಾಟಿ ಕೋಳಿಗೆ ಇರತಕ್ಕಂತಹ ಒಂದೇ ರೋಗವೆಂದರೆ ರಾಣಿಕೇಟ್ಸ್. ರಾಣಿಕೇಟ್ಸ್ ಎಂದು ಒಂದು ರೋಗ ಬರುತ್ತದೆ. ಅದಕ್ಕೆ ವರ್ಷಕ್ಕೊಂದು ಸಾರಿ ಲಸಿಕೆ ಹಾಕಿದರೆ ಬಹುಶ: ಅದಕ್ಕೆ ರೋಗ ಬರುವುದಕ್ಕೆ ಸಾಧ್ಯವಿಲ್ಲ.

ನಾಟಿ ಕೋಳಿಗೆ ಇರತಕ್ಕಂಥ ಒಂದೇ ರೋಗ ಎಂದರೆ, ರಾಣಿ ಕೇಟ್ಸ್ ಎನ್ನುವ ರೋಗ ಬರುತ್ತದೆ. ಅದಕ್ಕೆ ವರ್ಷಕ್ಕೆ ಒಂದು ಬಾರಿ ಲಸಿಕೆ ಹಾಕಿಸಿದರೆ ಬಹುಶ: ರೋಗ ಬರುವುದಕ್ಕೆ ಸಾಧ್ಯವಿಲ್ಲ. ಆ ರೋಗವನ್ನು control ಮಾಡಲು ಸಾಧ್ಯವಾಗುತ್ತದೆ. ಇವತ್ತು ಹಳ್ಳಿಗಳಲ್ಲಿ ನೋಡುತ್ತಿರುತ್ತೇವೆ, ಹೋದ ತಕ್ಷಣವೇ ರೈತರಾಗಿತಕ್ಕವರು ರಸ್ತೆ ಬದಿಯಲ್ಲಿ ನಾಟಿ ಕೋಳಿ ಹಿಡಿದುಕೊಂಡು ನಿಂತಿರುವುದನ್ನು ನಾವು ನೋಡುತ್ತೇವೆ. ಒಂದು ಕೋಳಿಗೆ 300 ರೂಪಾಯಿ ಸಿಗುತ್ತದೆ. ಒಂದೆರಡೋ ಮೂರೋ ಕೋಳಿಗಳನ್ನು ಮಾರಿದರೆ ಸಾಕು ಅವರ ಜೀವನ ಸುಖವಾಗಿರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಬಹಳಷ್ಟು ಬೇಡಿಕೆ

ಆಗಿರುವ ಹಿನ್ನೆಲೆಯಲ್ಲಿ ರಾಣಿ ಕೇಟ್ಸ್ ರೋಗವನ್ನು ಅನ್ನು address ಇಲ್ಲದ ಹಾಗೆ ಮಾಡುವ ರೀತಿಯಲ್ಲಿ ಲಸಿಕೆ ಹಾಕಿಸುವ ಕೆಲಸವನ್ನು ಮಾಡಬೇಕು ಮತ್ತು ರೈತರಿಗೂ ಕೂಡ ಮಾಹಿತಿಯನ್ನು ಕೊಡಬೇಕು. ಏನೆಂದರೆ ಅದಕ್ಕೆ ಒಂದು ಗೂಡನ್ನು ಕಟ್ಟಿಕೊಳ್ಳುವುದಕ್ಕೆ ಸಹಾಯ ಮಾಡಿ ಅದಕ್ಕೆ 1,000 ಅಥವಾ 2,000 ರೂಪಾಯಿ ನಿಮಗೆ ಖರ್ಚಾಗಬಹುದು, ಗೂಡುಗಳನ್ನು ಇಟ್ಟುಕೊಂಡು ಅದನ್ನು ಸಾಕುವುದಕ್ಕೆ ಸಹಾಯ ಮಾಡಿ. ಕುರಿ ಸಾಕಾಣಿಕೆ ಮಾಡಲು ಸಣ್ಣ ಸಣ್ಣ ಶೆಡ್‌ಗಳನ್ನು ಇಟ್ಟುಕೊಳ್ಳಲು ಧನಸಹಾಯವನ್ನು ಮಾಡಿದರೆ ಅದು ಕೂಡ ಬಹಳ ಸಹಾಯವಾಗುತ್ತದೆ. ಇವತ್ತು ಕುರಿ ಮತ್ತು ಮೇಕೆ ಸಂಪತ್ತು ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ಅದಕ್ಕೆ ಮೇವಿನ ತೊಂದರೆ ಬಹಳ ದೊಡ್ಡದಾಗುತ್ತಿದೆ. ಮೇವಿನ ತೊಂದರೆಯನ್ನು ನೀಗಿಸಬೇಕಾದಾಗ, ನಮ್ಮಲ್ಲಿ ಎಲ್ಲಿ ನೋಡಿದರು ಕೂಡ forest land ಇರುವುದನ್ನು ನಾವು ನೋಡುತ್ತಿದ್ದೇವೆ. Forest land ನಲ್ಲಿ ನಾವು ಅನುಪಯುಕ್ತವಾಗಿರುವುದನ್ನು ಅಂದರೆ ಉಪಯೋಗವಿಲ್ಲದಿರುವ ಗಿಡಗಳನ್ನು ಬೆಳೆಸುವ ಪರಿಪಾಠ ಜಾಸ್ತಿಯಾಗಿದೆ. ಏಕೆಂದರೆ ಬೆಳೆಸುವುದು ಸುಲಭ. ಅದು ಹೇಗೋ survival rate ಚೆನ್ನಾಗಿರುತ್ತದೆ, ಹಸಿರಾಗಿ ಚೆನ್ನಾಗಿ ಕಾಣಿಸುತ್ತದೆ ಎಂದು ಬೆಳೆಸುತ್ತಾರೆ. ಆದುದರಿಂದ ನನ್ನ ಸಲಹೆ ಏನೆಂದರೆ, ಕುರಿ ಮತ್ತು ಮೇಕೆ ಇವುಗಳಿಗೆ ಸಹಾಯವಾಗುವಂತಹ ರೀತಿಯಲ್ಲಿ ಸುಬಾಭುಲ್ ಹುಲ್ಲು, ಗ್ಲೈಸಿರೇಡಿಯಾ, ಹೆಬ್ಬೇವು, ಅಗಸೆ, ಹಾಲವಾಣಿ, ನೇಪಿಯರ್ ಹುಲ್ಲು, ಈ ರೀತಿಯ fodder components ಏನಿದೆ ಅದನ್ನು ನಾವು forest area ದಲ್ಲಿ ಮತ್ತು ಊರಿನ ಪಕ್ಕದಲ್ಲಿರುವ area ದಲ್ಲಿ ಹೆಚ್ಚು ಬೆಳೆಸುವುದರಿಂದ ಆ ಸಂಪತ್ತನ್ನು ಉಳಿಸಲು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನೊಂದು ಬಹಳ ಮುಖ್ಯವಾಗಿ, ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇವತ್ತು ಹಾಲಿನ ದರ, ಹಾಲಿನ ಮುಖೇನ, ನೀವು ಪ್ರೋತ್ಸಾಹಧನ 2 ರೂಪಾಯಿ ಕೊಟ್ಟಿರುವ ಹಿನ್ನೆಲೆಯಲ್ಲಿ ಸ್ವಲ್ಪಮಟ್ಟಿಗೆ ರೈತರಿಗೆ ತುಂಬಾ ಸಹಾಯವಾಗಿದೆ ಎಂದು ನಾನು ಹೇಳದೇ ಇದ್ದರು ಕೂಡ ಸ್ವಲ್ಪಮಟ್ಟಿಗೆ support ಸಿಕ್ಕಿದೆ. ಅದರ ಬೆಲೆಯನ್ನೂ ಜಾಸ್ತಿ ಮಾಡಿ ರೈತರಿಗೆ 20-21

ರೂಪಾಯಿ ಸಿಗುವಂತಹ ಕೆಲಸವನ್ನು ತಾವು ಮಾಡಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಬಹಳ ಮುಖ್ಯವಾಗಿ ನೀವು ಸುವರ್ಣ ಭೂಮಿ ಯೋಜನೆ ಮಾಡಿ 10,000 ರೂಪಾಯಿ ಕೊಡುವುದರ ಬದಲು ಕುರಿ ಮತ್ತು ಮೇಕೆಗಳನ್ನು ಕೊಳ್ಳತಕ್ಕಂಥವರು, ಹೈನುಗಾರಿಕೆ ಹಮ್ಮಿಕೊಳ್ಳತಕ್ಕಂತಹ ಜನಗಳಿಗೆ ಕಡಿಮೆ ದರದಲ್ಲಿ, ವ್ಯವಸಾಯ ಮಾಡುವವರಿಗೆ 1% ಬಡ್ಡಿದರದಲ್ಲಿ ಸಾಲ ಕೊಡಲಾಗುವುದು ಎಂದು ಹೇಳಿದ್ದೀರಿ. ಸಂತೋಷ. ಅದೇ ರೀತಿ ಉಪಕಸುಬು ಆಗಿರುವ ಹೈನುಗಾರಿಕೆಗೂ ಕೂಡ 1% ಬಡ್ಡಿದರದಲ್ಲಿ ಸಾಲ ಕೊಡುವ ಕೆಲಸ ಮಾಡಿದರೆ ಬಹುಶ: ನೀವು ನಿರೀಕ್ಷೆ ಮಾಡಿರುವುದಕ್ಕಿಂಥ ಹೆಚ್ಚಾಗಿ ಇವತ್ತು ರೈತರು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲಿನ white revolution ಗೆ ಒಂದು ಮೂಲ ಆಗುತ್ತದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಹಾಗಾಗಿ ಉಪ ಕಸುಬುಗಳಿಗೆ ಸಹಾಯ ಮಾಡುವ ರೀತಿಯಲ್ಲಿ 1% ಬಡ್ಡಿದರದಲ್ಲಿ ಸಾಲ ಕೊಡುವಂತೆ ಮಾಡಬೇಕು. ಈಗ ಕೊಡುತ್ತಿರುವ 9% ನಲ್ಲಿ ಖಂಡಿತವಾಗಿಯೂ ರೈತರಿಗೆ ಸಹಾಯವಾಗುವುದಿಲ್ಲ. ಇದರ ಮುಖೇನ ಹೆಣ್ಣುಮಕ್ಕಳಿಗೆ, ಮಕ್ಕಳಿಗೆ ಹೆಚ್ಚು ಪ್ರೋತ್ಸಾಹ ಮತ್ತು nutrient problem solve ಮಾಡಲು ಸಾಧ್ಯವಾಗುತ್ತದೆ. ಆರ್ಥಿಕವಾಗಿಯೂ ಅವರಿಗೆ ಹಣಕಾಸು ಸೇರಲು ಸಾಧ್ಯವಾಗುತ್ತದೆ. ಇಂತಹ ಉಪಕಸುಬುಗಳಿಗೆ ನೀವು ಹೆಚ್ಚು ಪ್ರೋತ್ಸಾಹವನ್ನು ಮಾಡಬೇಕು.

ಬಹಳ ಮುಖ್ಯವಾಗಿ ಇವತ್ತು ಗೋಮಾಳ ಎನ್ನುವ concept ಹೋಗಿದೆ. ದನಗಳನ್ನು ಮೇಯಿಸುವುದಕ್ಕೋಸ್ಕರ ಇವತ್ತು ಎಲ್ಲಿ ನೋಡಿದರೂ ಭೂಮಿಗಳು ಸಿಗುತ್ತಿಲ್ಲ. ಭೂಮಿಗಳೆಲ್ಲಾ ಸೈಟ್‌ಗಳಾಗಿವೆ, extension areas ಆಗಿವೆ. ಹಾಗಾಗಿ ದನಗಳಿಗಾಗಿ ಮೇವನ್ನು ಹೆಚ್ಚು ಬೆಳೆಸಬೇಕಾದಂತಹ ಸಂದರ್ಭದಲ್ಲಿ ಮೇವು ಬೆಳೆಸುವುದಕ್ಕೆ, ಆಹಾರವನ್ನು ಖರೀದಿಸುವ ಸಲುವಾಗಿ ಪ್ರೋತ್ಸಾಹಧನ ರೈತರಿಗೆ ಕೊಡುವ ರೀತಿಯಲ್ಲಿ ಮಾಡಿದರೆ ಅದು ಬಹಳಷ್ಟು ಸಹಾಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಗೋಶಾಲೆಗಳಿಗೆ ಪ್ರೋತ್ಸಾಹ ಎಂದು ಹೇಳಿದ್ದೀರಿ. ಗೋಶಾಲೆಗಳಿಗೆ ಪ್ರೋತ್ಸಾಹ ನೀಡುವುದಕ್ಕಿಂತ ಹೆಚ್ಚಾಗಿ ಈ ರೀತಿಯಾಗಿರುವುದಕ್ಕೆ ಪ್ರೋತ್ಸಾಹ

ಕೊಡುವುದರಿಂದ ಒಳ್ಳೆಯದಾಗುತ್ತದೆ. ಗೋಶಾಲೆಗಳನ್ನು ನೀವು ಮಾಡುವುದಾದರೆ ದೇಶೀಯವಾಗಿರುವಂತಹ ತಳಿಗಳನ್ನು, ಕರುಗಳನ್ನು ಸಾಕಾಣಿಕೆ ಮಾಡುವ ರೈತರಿಗೆ ಆರ್ಥಿಕ ಸಹಾಯವನ್ನು ಮಾಡುವ ರೀತಿಯಲ್ಲಿ ಚಿಂತನೆ ಮಾಡಬೇಕು. ಮಲೆನಾಡು ಗಿಡ್ಡ ತಳಿಯನ್ನು improve ಮಾಡಬೇಕೆಂದು ತಾವು ಮಾತನಾಡಿದ್ದೀರಿ. ಆ ಪ್ರಯತ್ನಗಳನ್ನು ನೀವು ಮಾಡಿ. ಮಾಡುವುದರ ಜೊತೆಗೆ, ತಳಿಗಳ ಮಹತ್ವವೇನು ಎನ್ನುವ ವಿಚಾರವನ್ನು ಹೇಳುತ್ತೇನೆ. ಮಾನ್ಯ ಸುರೇಶ್‌ಕುಮಾರ್‌ರವರೆ, 1927ನೇ ಇಸವಿಯಲ್ಲಿ ಮಹಾತ್ಮಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿನ ಗುಜರಾತೀಸ್‌ನವರು ಏನು ಮಾಡಿದರೆಂದರೆ, ಮಹಾತ್ಮಗಾಂಧಿಯವರು ಇಲ್ಲಿ ಬರುತ್ತಾರೆ ಎನ್ನುವ ಕಾರಣಕ್ಕಾಗಿ ಮೂರೇ ಮೂರು ಮೇಕೆಗಳನ್ನು ನಮ್ಮ ದೇಶದಿಂದ ತರಿಸಿಕೊಂಡಿದ್ದರು. ಅದಕ್ಕೆ Boer ಎಂದು ಹೇಳುತ್ತಾರೆ. ಆ Boer ಮೇಕೆಯನ್ನು ಇವತ್ತು ದಕ್ಷಿಣ ಆಫ್ರಿಕಾದಲ್ಲಿ multiply ಮಾಡಿ, ಮಾಡಿ, ಎಷ್ಟಾಗಿದೆ ಎಂದರೆ, ಅದು ಸುಮಾರು 3-4 ಲೀಟರ್ ಹಾಲು ಕೊಡುತ್ತದೆ. ಮಹಾತ್ಮಗಾಂಧೀಜಿಯವರು ಕುಡಿಯುತ್ತಿದ್ದ ಹಾಲೇ ಮೇಕೆ ಹಾಲು. ಅದರ ಜೊತೆಗೆ 120-130 ಕೆ.ಜಿ ಮಾಂಸ ಬರುತ್ತದೆ. Boer ಮೇಕೆಯನ್ನು ನಾನೂ ನನ್ನ ಕ್ಷೇತ್ರದಲ್ಲಿ ತರಿಸಿದ್ದೇನೆ. ನಮ್ಮಲ್ಲಿ ಒಬ್ಬರು ಒಳ್ಳೆಯ Assistant Director ಇದ್ದಾರೆ, ಅವರಿಗೆ ಹೇಳಿ ತರಿಸಿ ನಾನು ಇವತ್ತು ಸಾಕಿಸುತ್ತಿದ್ದೇನೆ ಮತ್ತೆ ರೈತರಿಗೂ ಕೊಡಿಸುವ ಕೆಲಸವನ್ನು ಮಾಡಿದ್ದೇನೆ. ಅದರ ಜೊತೆಯಲ್ಲಿ ಉತ್ತರ ಪ್ರದೇಶದಲ್ಲಿ ಜಮುನಾ ಪ್ಯಾರಿ ಎಂದು ಒಂದು ತಳಿ ಇದೆ. ಬಹುಶ: Boer ಗಿಂತಲೂ ಚೆನ್ನಾಗಿದೆ. ಅದನ್ನು ನೋಡಿದರೆ ಒಳ್ಳೆ ಕರಡಿ ನೋಡಿದ ಹಾಗೆ ಆಗುತ್ತದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಇದೆ. ಸುಮಾರು 3 ಲೀಟರ್ ಹಾಲು ಕೊಡುತ್ತದೆ. ಮಾಂಸ ತುಂಬಾ ಚೆನ್ನಾಗಿರುತ್ತದೆ. ಮಾನ್ಯ ಸುರೇಶ್ ಕುಮಾರ್‌ರವರಿಗೆ ಅಭಿರುಚಿ ಹುಟ್ಟಲಿ ಎಂದೇ ಒತ್ತಿ ಒತ್ತಿ ಹೇಳುತ್ತಿದ್ದೇನೆ. ಅವರು ಎಲ್ಲೇ ಹೋದರೂ ಕಾಣದ ಹಾಗೆ ಜಮುನಾ ಪ್ಯಾರಿ ಮಟನ್ ಬೇಕೆಂದು ಕೇಳುವ ಹಾಗೆ ಇರಬೇಕೆನ್ನುವ ಕಾರಣಕ್ಕೋಸ್ಕರ ನಾನು ಹೇಳುತ್ತಿರುವುದು. ಈ ರೀತಿಯಾಗಿ ನಮ್ಮಲ್ಲಿರುವಂತಹ ದೇಶೀಯ ತಳಿಗಳನ್ನು

ಉಳಿಸುವುದರಲ್ಲಿ ನಮ್ಮ ಪ್ರಯತ್ನವನ್ನು ನಾವು ಮಾಡಬೇಕು. ಇವತ್ತು ನಾವು ಗೋ ಸಂಪತ್ತನ್ನು ರಕ್ಷಣೆ ಮಾಡುವುದರ ಬಗ್ಗೆ ಸಾಕಷ್ಟು ರೀತಿಯಲ್ಲಿ ಗೋ ಹತ್ಯೆ ನಿಷೇಧದ ಬಗ್ಗೆ ಸಾಕಷ್ಟು ಪ್ರಯತ್ನಗಳು ಆಗಿವೆ. ಅದೇನೇ ಇರಲಿ. ಆ ಸಂಪತ್ತು ಉಳಿಯಬೇಕು. ಅದು ಉಳಿದಾಗ ಮಾತ್ರ ಜೈವಿಕವಾಗಿರುವ ಗೊಬ್ಬರ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಗೊಬ್ಬರಗಳ ಮೂಲ ದನಗಳಾಗುತ್ತವೆ. ಅದರ ಮುಖೇನ ರೈತರ ಬದುಕನ್ನು ಹಸನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾಗಿರುವಂತಹ ವಿಚಾರವೇನೆಂದರೆ, ನಮ್ಮಲ್ಲಿರುವಂತಹ dry zone, ನಾವು ಇವತ್ತು ನೀರಾವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕಾಗಿದೆ. ನೀರಾವರಿಗೆ ನಾವು ಎಷ್ಟು ಪ್ರೋತ್ಸಾಹ ಕೊಟ್ಟಿದ್ದೇವೆ ಎನ್ನುವ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಕೇವಲ ಮೂರು ತಿಂಗಳ ಹಿಂದೆ ಕೃಷ್ಣ ನ್ಯಾಯಾಧೀಕರಣದ ತೀರ್ಪು ಬಂದಿದೆ. ಕೃಷ್ಣ ನ್ಯಾಯಾಧೀಕರಣದ ತೀರ್ಪು ಬಹಳ ವರ್ಷಗಳ ಕಾಲ ನ್ಯಾಯಾಧೀಕರಣದ ಮುಂದೆ ವ್ಯಾಜ್ಯಾ ಇತ್ತು. ಆ ವ್ಯಾಜ್ಯಾ ಇತ್ಯರ್ಥವಾಗಿ ಒಂದು ತೀರ್ಪು ಹೊರಬಂದಿದೆ.

ಆ ತೀರ್ಪಿನ ಹಿನ್ನೆಲೆಯಲ್ಲಿ ಈಗಾಗಲೇ ಎಲ್ಲಾ ಪಕ್ಷದ ಮುಖಂಡರನ್ನು ಕರೆಸಿ ಇವತ್ತು ನೀವು ಅದರ ಬಗ್ಗೆ ಟ್ರಿಬ್ಯೂನಲ್‌ಗೆ review ಹೋಗಬೇಕಾ? ಅಥವಾ Supreme Court ಗೆ ಹೋಗಬೇಕಾ ಎಂಬ ವಿಚಾರವನ್ನು ನೀವು ಪ್ರಸ್ತಾಪ ಮಾಡಿದ್ದೀರಿ. ನೀವೇನೇ ತೀರ್ಮಾನ ಮಾಡಿ, ಏಕೆಂದರೆ ಮಾನ್ಯ ನೀರಾವರಿ ಸಚಿವರಿಗೆ ಅದರ ಬಗ್ಗೆ ಸಾಕಷ್ಟು ಜ್ಞಾನ ಇದೆ. ಆ ಎಚ್ಚರಿಕೆಯ ಕ್ರಮವನ್ನು ಅವರು ತೆಗೆದುಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಬಹುಶಃ ಕಳೆದ ಮೂರು ತಿಂಗಳುಗಳಿಂದಲೂ ಕೂಡ ಒಂದು ವಿಚಾರ ಪ್ರಸ್ತಾಪ ಆಗುತ್ತಿದೆ. ಅದು ವಿಶೇಷವಾಗಿ ಧಾರವಾಡ ಕಡೆಯಿಂದಲೇ ಹೆಚ್ಚು ವ್ಯಾಖ್ಯಾನ ಬರುತ್ತಿದೆ. ಇದು ಸರಿಯೇ ಅಲ್ಲವೇ ಎಂದು ಹೇಳಿ ಬರುತ್ತಿದೆ. ಸರಿ ಎಂದು ಹೇಳಿ ಒಬ್ಬರು, ಸರಿ ಅಲ್ಲ ಎಂದು ಒಬ್ಬರು, ಅದರ ಬಗ್ಗೆ ವ್ಯಾಖ್ಯಾನ ಬರುತ್ತಿದೆ. ಎಲ್ಲಾ ಪೇಪರ್ ಕಟಿಂಗ್ ಅನ್ನು ಕೂಡ ನಾನು ಇಟ್ಟುಕೊಂಡಿದ್ದೇನೆ. ಅದನ್ನೇನು ಮತ್ತೆ ಪ್ರಸ್ತಾಪ

ಮಾಡುವುದು ಬೇಕಾಗಿಲ್ಲ. ಜನಗಳಿಗೆ ಗೊತ್ತಿರತಕ್ಕದ್ದು. ಇಲ್ಲಿ ನಾನು ಕೂಡ ಅದು ಸರಿ ತಪ್ಪು ಎಂದು ಹೇಳುವುದಕ್ಕಿಂತ ಮುಖ್ಯವಾಗಿ ನಾನು ಏನೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರೂ ಕೂಡ ಅದು ನನ್ನ ಅಭಿಪ್ರಾಯ. ಅದು ನನ್ನ ಪಕ್ಷದ್ದು ಎಂದು ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾನು ಮೊದಲಿನಿಂದಲೂ ಕೂಡ ನೀರಾವರಿಯ ಬಗ್ಗೆ ಹೆಚ್ಚು ಕಾಳಜಿಯನ್ನು ಇಟ್ಟುಕೊಂಡಿದ್ದೇನೆ. ನಾನು ಕಳೆದ 30 ವರ್ಷದ ರಾಜಕೀಯ ಜೀವನದಲ್ಲಿ ಕೂಡ ಶಾಸಕನಾಗಿ ನೀರಾವರಿಯ ಬಗ್ಗೆ ಹೋರಾಟವನ್ನು ಮಾಡಿಕೊಂಡು ಬಂದಿದ್ದೇನೆ. ಕೃಷ್ಣಾಕೊಳ್ಳ ನೀರಾವರಿ ಸಮಿತಿ ಎನ್ನತಕ್ಕ ಒಂದು ಸಮಿತಿಯನ್ನು ಮಾಡಿ ಕಳೆದ 20 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಪಶ್ಚಿಮ ಘಟ್ಟ ನೀರಾವರಿ ಸಮಿತಿ ಎಂದು ಹೇಳಿ ಒಂದು ಹೋರಾಟದ ಸಮಿತಿಯನ್ನು ಮಾಡಿ ನಾನು ಸರ್ಕಾರದ ಮಟ್ಟದಲ್ಲಿ ನಿಕಟವಾಗಿ ಸಂಪರ್ಕದಲ್ಲಿರುತ್ತೇನೆ, ಹೋರಾಟವನ್ನು ಕೂಡ ಮಾಡಿಕೊಂಡು ಬರುತ್ತಿದ್ದೇವೆ. ನನಗೆ ಈ Tribunal ತೀರ್ಪು ಸರಿಯೇ ಅಲ್ಲವೇ ಎನ್ನತಕ್ಕದ್ದರ ಬಗ್ಗೆ ಒಂದು ವ್ಯಾಖ್ಯಾನ ಇವತ್ತು ಪತ್ರಿಕೆಯಲ್ಲಿ ಬರುತ್ತಿರತಕ್ಕದ್ದು ಎಂದು ಹೇಳಿದರೆ Scheme B allocation ಕರ್ನಾಟಕಕ್ಕೆ 50% ಸಿಗಲಿಲ್ಲ. ಬಚಾವತ್ ತೀರ್ಪು-1ರಲ್ಲಿ ಉಲ್ಲೇಖ ಮಾಡಿದ ರೀತಿಯಲ್ಲಿ ನಮಗೆ 50% ಸಿಗಲಿಲ್ಲ. ನಮ್ಮ ಸರ್ಕಾರದ ಅಂದಾಜು 278 ಟಿಎಂಸಿ ಆಗಿತ್ತು. ಇವತ್ತು Tribunal ಕೊಟ್ಟಿರತಕ್ಕದ್ದು ಕೇವಲ 177 ಟಿಎಂಸಿ ಮಾತ್ರ ಎಂದು ಹೇಳಿ ಅದನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. ಬಹುಶಃ ಅದನ್ನು ಒಂದನೇ ಮುಖ್ಯವಾಗಿ ಇಟ್ಟುಕೊಂಡಿರತಕ್ಕದ್ದು. ಅದರಿಂದ ನನಗೆ ಅನಿಸುತ್ತದೆ. ಬಹುಶಃ ನಾವು Tribunal order ಅನ್ನು ಓದಿದಂತಹ ಸಂದರ್ಭದಲ್ಲಿ ಇವತ್ತು Scheme–Aನಲ್ಲಿ 75% dependability ಮೇಲೆ 734 ಟಿಎಂಸಿಯನ್ನು allocation ಮಾಡುತ್ತಾರೆ. 65% dependability ಮೇಲೆ ನಮಗೆ Scheme–Bನಲ್ಲಿ ಅಲೋಕೇಶನ್ ಮಾಡಿ 177 ಟಿಎಂಸಿ ಬರುತ್ತದೆ. ಅದೇನೂ ದೊಡ್ಡ ಅಗಾಧವಾದುದಲ್ಲ. ಅವರದ್ದೇ ಆಗಿರತಕ್ಕಂತಹ calculation ಕೂಡ ಕೊಟ್ಟಿದ್ದಾರೆ. ನಾವು ಅದು calculation ಕೊಡಬೇಕಾದಾಗ ಬಚಾವತ್ ತೀರ್ಪಿನಲ್ಲಿ ಕರ್ನಾಟಕಕ್ಕೆ 50% dependabiliity ಪ್ರಕಾರ 335 ಟಿಎಂಸಿ ಇತ್ತು.

ಈಗ ನಮಗೆ ಬಂದಿರತಕ್ಕದ್ದು, ಅದು 50% dependabiliity ಪ್ರಕಾರ ನಮಗೆ ಈಗ ಬಂದಿರತಕ್ಕದ್ದು 168 ಟಿಎಂಸಿ ಬರಲೇ ಬೇಕಾಗಿತ್ತು. ಇವತ್ತು ನಮಗೆ 65% dependabiliity ಪ್ರಕಾರ ಅದು 177 ಟಿಎಂಸಿ ಸಿಗುತ್ತದೆ. ನೀವು calculation ಮಾಡಬೇಕಾದಾಗ ಎಲ್ಲೋ ಒಂದು ಕಡೆಗೆ ಸ್ವಲ್ಪ ಕಡಿಮೆ ಆಯಿತು ಅಥವಾ ಹೆಚ್ಚಾಯಿತು ಎಂದು ಹೇಳಿ ವ್ಯಾಖ್ಯಾನ ಮಾಡುವುದಾದರೂ ಸಹ ಇನ್ನೊಂದು ಬಹಳ ಮುಖ್ಯವಾಗಿರತಕ್ಕದ್ದು. ಈ judgment ಬಹಳ ಮಹತ್ವವಾಗಿರುವಂತಹ ನಿರ್ಣಯಗಳು ಬಂದಿದೆ. ನಮ್ಮ ನಿರ್ಣಯ ಏನೆಂದರೆ ಬಚಾವತ್ ತೀರ್ಪು 1974ರಲ್ಲಿ ಬಂದಾಗ ಅವತ್ತು ಏನು ಇತ್ತು ಅಂದರೆ 2000 ವರ್ಷದ ಒಳಗಾಗಿ 734 ಟಿಎಂಸಿಯನ್ನು ನೀವು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕು. ಆಗ ಅಲ್ಲಿಂದ ಇಲ್ಲಿಯವರೆಗೆ ಇದ್ದಂತಹ ಸರ್ಕಾರಗಳ ಮುಖ್ಯಮಂತ್ರಿಗಳು, ಸರ್ಕಾರದವರು ಕೂಡ ಎದೆಯ ಮೇಲೆ ಕೈಇಟ್ಟುಕೊಂಡು ನೋಡಿಕೊಳ್ಳ ಬೇಕಾಗುತ್ತದೆ. ಎಷ್ಟರಮಟ್ಟಿಗೆ ನಾವು ನೀರನ್ನು ಬಳಕೆ ಮಾಡಿಕೊಳ್ಳುವುದರಲ್ಲಿ ಸಾರ್ಥಕವಾಗಿ ಕೆಲಸ ಮಾಡಿದ್ದೇವೆಂದು ಹೇಳಿ. ಇಲ್ಲಿಯವರೆಗಾಗಿ ನಾವು 598 ಟಿಎಂಸಿ ಮಾತ್ರ ಬಳಕೆ ಮಾಡಿಕೊಳ್ಳುವುದಕ್ಕೆ ಆಗಿರುವುದು. ಇನ್ನೂ 137 ಟಿಎಂಸಿಗೆ ಯೋಜನೆಗಳನ್ನು ಮಾಡಲಿಲ್ಲ. ಯೋಜನೆಗಳನ್ನು ಮಾಡಿದ್ದರೂ ಕೂಡ ಅರೆಬರೆ ಯೋಜನೆಗಳು. ಇವತ್ತು ಯೋಜನೆಗಳು on going projects ಆಗಿವೆ. ನಾವು ನೀರನ್ನು ಬಳಕೆ ಮಾಡುವುದಕ್ಕೆ ಇನ್ನೂ 134 ಟಿಎಂಸಿ ಆಗಲಿಲ್ಲ. ಇವತ್ತು ಆಂಧ್ರದವರು, ಮಹಾರಾಷ್ಟ್ರದವರು ಹೋರಾಟ ಮಾಡಿದ್ದು ಏನೆಂದರೆ Scheme-A ನೀರನ್ನು ಅವರು ಬಳಕೆ ಮಾಡಲಿಲ್ಲ. ಆ ನೀರಿನ ಹಕ್ಕನ್ನು ನಮಗೆ ಕೊಡಿ ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದರು. ನನಗೆ ಒಂದೇ ಒಂದು ಭಯ ಇದ್ದುದು ಎಂದರೆ ಎಲ್ಲಾದರೂ ಅವರು ಹಕ್ಕು ಕೊಟ್ಟು ಬಿಟ್ಟರೆ ನಮ್ಮ ಯೋಜನೆಗಳು ಏನಾಗುತ್ತದೆ ಎಂಬ ಭಯ ನಮ್ಮನ್ನು ಕಾಡುತ್ತಿತ್ತು. ಆದರೆ ಪುಣ್ಯಕ್ಕೆ ನಮ್ಮ Tribunal ಇವತ್ತು ನಮ್ಮ ಪರವಾಗಿದೆ, ಆ ಅಲೋಕೇಶನ್ ಅನ್ನು ಟಚ್ ಮಾಡತಕ್ಕ ಕೆಲಸವನ್ನು ಮಾಡಲಿಲ್ಲ. ಆಂಧ್ರದವರು ಹೋರಾಟ ಮಾಡುತ್ತಿದ್ದುದು ಅಷ್ಟೇನೆ. ಅವರು ಅನಧಿಕೃತವಾಗಿ ಇರತಕ್ಕ ಅನೇಕ ಯೋಜನೆಗಳು, ಅಂದರೆ ಶ್ರೀಶೈಲಂ, ಜುರಾಲಾ ಯೋಜನೆಗಳನ್ನು ಹಾಗೂ

ಸಾಕಷ್ಟು ಯೋಜನೆಗಳನ್ನು ಮಾಡಿ, ಆ ಯೋಜನೆಗಳಿಗೆ ನಮಗೆ ಇವತ್ತು ನೀರು ಬೇಕು ಎಂದು ಹೇಳಿ ಹೋರಾಟ ಮಾಡುತ್ತಿದ್ದರು, ಅದು ಪ್ರಶ್ನೆ ಬೇರೆ.

ಶ್ರೀ ಬಸವರಾಜ ಬೊಮ್ಮಯಿ (ಮಾನ್ಯ ಹಾಗೂ ಜಲಸಂಪನ್ಮೂಲ ಸಚಿವರು): ಇದು Tribunal ವಿಚಾರ ಮತ್ತು ಮುಂದೆ Supreme Courtನಲ್ಲಿ ಮುಂದುವರಿಯುವುದರಿಂದ ಅಸೆಂಬ್ಲಿಯಲ್ಲಿ records ಸರಿ ಇರಬೇಕು. Tribunal in its proceedings themselves have concluded that we are able to use more than 690 tmc of water, so tribunal itself has concluded in its proceedings. ಕರ್ನಾಟಕ 690 ಟಿಎಂಸಿ ನೀರನ್ನು ಬಳಕೆ ಮಾಡುವುದಕ್ಕೆ ಸಾಧ್ಯ ಆಗಿದೆ ಎನ್ನುವುದನ್ನು ಅವರೂ ಸಹ ಒಪ್ಪಿಕೊಂಡಿದ್ದಾರೆ. Just for records set right ಮಾಡುವುದಕ್ಕೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಅಂದುಕೊಂಡಿರುವುದು ನೀವು impound ಮಾಡಿದ್ದೀರಿ, ಬಳಕೆ ಮಾಡುವುದಕ್ಕೆ ಆಗುತ್ತಿಲ್ಲ. Utilization.

ಶ್ರೀ ಬಸವರಾಜ ಬೊಮ್ಮಾಯಿ. ನಾನು ಏಕೆ ಇದನ್ನು ಹೇಳಿದ್ದೇನೆ ಎಂದರೆ...

ಶ್ರೀ ಟಿ.ಬಿ. ಜಯಚಂದ್ರ: ನನಗೆ ಆ ಜವಾಬ್ದಾರಿಕೆ ಇದೆ. ಸದನದಲ್ಲಿ ಯಾವುದೇ ರೀತಿಯಲ್ಲಿ ಕೂಡ ವ್ಯತ್ಯಾಸ ಆಗಬಾರದು. ನಾನು ಹಿಂದೆ 1994ರಲ್ಲಿ ಮಾತನಾಡಬೇಕಾದರೆ ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದರು. ಇಂತಹ ವಿಚಾರ ಪ್ರಸ್ತಾಪ ಆದಾಗ Speaker Chamber ಗೆ ಕರೆದು ನಾವು ಮಾತನಾಡಿದ್ದು ಎಲ್ಲವನ್ನೂ ಕಡತದಿಂದ ತೆಗೆಸಿದರು. ಹಾಗಾಗಿ I do not want to embarrass the Karnataka Government in all these aspects. If it is exceeded, all complements for you and for your Government also. ನಾನು ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ ಆದರೆ ನಾವು ಇವತ್ತು ಬಳಕೆ ಮಾಡಲಿಲ್ಲ ಎಂದು ಹೇಳಿ ನಮಗೆ ಕೊಟ್ಟಿರತಕ್ಕದ್ದು ಒಂದು ದೊಡ್ಡ ಸಹಾಯ

ಆಗಿದೆ. ಒಂದು ಪಕ್ಷ ಅವರೇನಾದರೂ ಆ ರೀತಿಯಲ್ಲಿ ನೀವು ಬಳಕೆ ಮಾಡಿಲ್ಲ, ಅದನ್ನು ಅಲೋಕೇಶನ್ ಮಾಡೋಣ ಎಂದಿದ್ದರೆ...

ಶ್ರೀ ಬಸವರಾಜ ಬೊಮ್ಮಾಯಿ: ನೀವು ಹೇಳುವುದು 2000 ಇಸವಿಗೆ ಸರಿ ಇದೆ. ನೀವು ಹೇಳುತ್ತಿರುವುದು 590 ಮಾತ್ರ ಬಳಕೆ ಮಾಡಿದ್ದೇವೆಂದು ಹೇಳಿದ್ದೀರಿ, ಅದು 2000 ಇಸವಿಗೆ ಸರಿ ಇದೆ. But let us not extended that argument ಎಂದು ಅಷ್ಟೇ. Tribunal ನವರು ನಾವೇನು ಬಳಕೆ ಮಾಡಿದ್ದೇವೆ? ಏನು impound ಆಗಲಿ, ಬಳಕೆ ಮಾಡಿದ್ದೇವೆ? ಅದನ್ನು ಅವರು ಪ್ರಸ್ತಾಪಿಸಿ, ಅದು ಅವರ rights ಇದೆ, so we will not enter into the rights as per the Bachawath award, ಯಾರ್‍ಯಾರದ್ದು enblock allocation ಇದೆ, ಅದರಲ್ಲಿ we will not enter ಅದರ ಬಗ್ಗೆ ವ್ಯಾಖ್ಯಾನ ಮಾಡುವುದಿಲ್ಲ ಎಂದು ಹೇಳಿ ಒಂದು ತೀರ್ಮಾನವನ್ನು ಮಾಡಿ ಹೆಚ್ಚುವರಿ ನೀರಿನ ಹಂಚಿಕೆಗಾಗಿ ಈ Tribunal ಇದೆ. ಅದಕ್ಕಾಗಿ ಹೆಚ್ಚುವರಿ ನೀರಿನ ಹಂಚಿಕೆ ಮಾಡುತ್ತೇವೆಂದು ಹೇಳಿ ಆ portion ಮಾತ್ರ ಅವರು operate ಮಾಡಿದ್ದಾರೆ. ಅಷ್ಟರ ಮಟ್ಟಿಗೆ ನಮ್ಮ safeguard ಆಗಿದೆ ಎನ್ನುವ ಮಾತನ್ನು ಹೇಳಿದೆ.

ಶ್ರೀ ಟಿ.ಬಿ. ಜಯಚಂದ್ರ: ಅದನ್ನೇ ನಾನು ಹೇಳುತ್ತಿರುವುದು. ಒಂದು ಪಕ್ಷ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಏನು ಕಥೆ ಆಗುತ್ತಿತ್ತು? ಅದು ಆಗಲಿಲ್ಲ. ಹಾಗಾಗಿ ನಮ್ಮ ನೀರಿನ ಬಳಕೆಯನ್ನು ಇವತ್ತು ಕೂಡ ಸಂಪೂರ್ಣವಾಗಿ ಬಳಸುವುದಕ್ಕೆ ಸಾಧ್ಯ ಆಗುತ್ತದೆ. ಏಕೆ ಆಕ್ಷೇಪಗಳು ಬಂತು ಅಂದರೆ ನಾವು ಬಳಕೆ ಮಾಡಲಿಲ್ಲ ಎನ್ನುವ ಕಾರಣಕ್ಕೋಸ್ಕರ. ಈಗ ಪ್ರಶ್ನೆ ಉದ್ಭವಿಸತಕ್ಕದ್ದು ನಾವು ಈಗ ಅಲೋಕೇಶನ್ ಆಗಿರತಕ್ಕಂತಹ ನೀರನ್ನು ಬಳಕೆ ಮಾಡಲು 2050ರವರೆಗೆ ಅವಕಾಶ ಇದೆ. 2050ರ ಒಳಗಾದರೂ ಬಳಕೆ ಮಾಡುತ್ತೇವಾ ಎಂದು ಹೇಳಿ. ಕೃಷಿ ಬಜೆಟ್ ಎಂದು ಹೇಳಿ ಈಗ ಕೊಟ್ಟಿರತಕ್ಕ ಹಣವನ್ನು ನೋಡಿದರೆ ಇನ್ನು 50 ವರ್ಷ ಆದರೂ, 40 ವರ್ಷ ಆದರೂ ಕೂಡ ಬಳಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆಗ ತಿರುಗಿ review ಗೆ ಬಂದೇ ಬರುತ್ತವೆ, 50 ವರ್ಷವಾದ ಮೇಲೆ, 2050ನೇ ಇಸವಿ ಆದ ಮೇಲೆ

ಇನ್ನೇನು ಅನಾಹುತಗಳು ಕಾದಿರುತ್ತವೆಯೋ? ಆ ಅನಾಹುತಗಳು ಆಗುವುದಕ್ಕಿಂತ ಮುಂಚೆಯೇ ಬಳಕೆ ಮಾಡುವುದಕ್ಕೆ ನಾವು ಎಲ್ಲಾ ರೀತಿಯ ಕ್ರಮಗಳನ್ನು ಜರುಗಿಸಬೇಕು. ನೀವೀಗ ಜಲ ಕ್ರಾಂತಿಯ ಪರ್ವ ಎಂದು ಹೇಳಿದ್ದೀರಿ. ಜಲ ಕ್ರಾಂತಿಯನ್ನು ಮಾಡಬೇಕಾದಾಗ ನೀವು ಎಲ್ಲೋ ಒಂದು ಕಡೆಗೆ 7700 ಕೋಟಿ ರೂಪಾಯಿಯನ್ನು ತೆಗೆದು ಇಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು ನೀವು ಎಷ್ಟರ ಮಟ್ಟಿಗೆ ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯ ಆಗುತ್ತದೆ ಎನ್ನತಕ್ಕದ್ದನ್ನು ಯೋಚನೆ ಮಾಡಿ. ಆದರೆ ಈಗ ನಮಗೆ total allocation ಇರತಕ್ಕದ್ದು 911 ಟಿಎಂಸಿ. 911 ಟಿಎಂಸಿ ಇವತ್ತು ನಮಗೆ ಇದೆ. 734+177 ಸೇರಿ, 911ರಲ್ಲಿ ನೀವು ಇಷ್ಟನ್ನು, ನಾನು ಅಂಕಿ ಅಂಶ ಹೇಳುವುದಕ್ಕೆ ಹೋಗುವುದಿಲ್ಲ. 911 ಟಿಎಂಸಿ ನೀರನ್ನು ನಾವು ಬಳಕೆ ಮಾಡಬೇಕಾದಾಗ ಒಂದು ದೊಡ್ಡ ವಿಪತ್ತು ಅಥವಾ ಕಷ್ಟ ಎಂದು ಹೇಳಿದರೆ ಇವತ್ತಿನ ಎಲ್ಲಾ ಯೋಜನೆಗಳು ಕೂಡ by lift ಮಾತ್ರ. ಬಹುಶಃ ನೀವು 200 ಟಿಎಂಸಿಗಿಂತಲೂ ಹೆಚ್ಚು ನೀರು ಯಾವುದೇ ಯೋಜನೆಗಳನ್ನು ತೆಗೆದು ಕೊಂಡರೂ ಕೂಡ ಆ ಎಲ್ಲಾ ಯೋಜನೆಗಳೂ ಅವು ಭದ್ರಾ ಮೇಲ್ದಂಡೆ ಯೋಜನೆ UKP ಯಲ್ಲಿ ಬರತಕ್ಕಂತಹ ಯಾವುದೇ ಯೋಜನೆಗಳಾಗಲಿ ಮೇಲ್ದಂಡೆ ಯೋಜನೆ ಸಿಂಗಟಾಲೂರು ಇವೆಲ್ಲಾ ಕೂಡ ನೀವು ಲಿಫ್ಟ್ ಮಾಡಿಯೇ ಮಾಡಬೇಕು. ಲಿಫ್ಟ್ ಮಾಡಬೇಕಾದಾಗ ನೀವು ಬಳಕೆ ಮಾಡಬೇಕಾದಾಗ ನೀವು ಎಷ್ಟು ರಿಸೋರ್ಸ್ ಅನ್ನು ನೀವು ಮೊಬಲೈಸ್ ಮಾಡಬೇಕು ಹೇಗೆ ಮಾಡಬೇಕು ಎನ್ನುವುದು ಬಹಳ ಮುಖ್ಯ. ಮಾನ್ಯ ಬಸವರಾಜ ಬೊಮ್ಮಾಯಿಯವರಿಗೆ ನಾನು ಒಂದು ಮಾತನ್ನು ಹೇಳುತ್ತೇನೆ. ನೆರೆ ರಾಜ್ಯದಲ್ಲಿ ರಾಜಶೇಖರರೆಡ್ಡಿಯವರು ಜಲ ಯಜ್ಞಂ ಎನ್ನತಕ್ಕಂತಹ ಕಾರ್ಯಕ್ರಮವನ್ನು ಮಾಡಿದರು. ವರ್ಷಕ್ಕೆ 10,000 ಕೋಟಿ ರೂ.ಗಳ ಹಾಗೆ ಒಂದು ಲಕ್ಷದ 46,000 ಕೋಟಿ ರೂ. ಗಳಷ್ಟು ಯೋಜನೆಗಳನ್ನು ಮಂಜೂರಾತಿ ಮಾಡಿ ಸುಮಾರು 65,000 ಕೋಟಿ ರೂ.ಗಳನ್ನು ಈ ವರ್ಷದಲ್ಲಿ ಖರ್ಚು ಮಾಡಿದರು. ಆ ಪ್ರಯತ್ನ ಮಾಡಿದ ಹಿನ್ನೆಲೆಯಲ್ಲಿ ಅದರ ಲಾಭ ಅವರಿಗೆ ಆಯಿತು. ಇವತ್ತು ನೀವು ಜಲ ಕ್ರಾಂತಿ ಎಂದು ಮಾಡಬೇಕಾದಾಗ ಆ ಕ್ರಾಂತಿ

ಹೆಸರಾಗಿ ಕನಿಷ್ಟ 10,000 ಕೋಟಿ ರೂ.ಗಳನ್ನು ತೊಡಗಿಸುವಂತಹ ಪ್ರಯತ್ನವನ್ನು ನೀವು ಮಾಡಿದ್ದರೆ ಅದು ಮೆಚ್ಚಬಹುದಾಗಿತ್ತು. ಏನೂ ತಪ್ಪಾಗುವುದಿಲ್ಲ. ನಾವು ಜನಗಳ ಮುಂದೆ ಹೋಗಿ ಹೇಳೋಣ. ನಾವು ಕೃಷಿಗೋಸ್ಕರ ನಮ್ಮ ನೀರಿನ ಹಕ್ಕನ್ನು ಉಳಿಸಿ ಕೊಳ್ಳುವುದಕ್ಕೋಸ್ಕರ 10 ರಿಂದ 15,000 ಕೋಟಿ ನೀಡುತ್ತೇವೆ ಈ ಯೋಜನೆಗೆ ಇಷ್ಟು ದುಡ್ಡು ಬೇಕು ಈ ಬಾಬುಗಳಿಗೆ ನಾವು ಖರ್ಚು ಮಾಡುವುದಕ್ಕಾಗುವುದಿಲ್ಲ. ನಾವು ಕೃಷಿಗೆ ಹೆಚ್ಚು ಒತ್ತು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದರೆ ಅದು ಪ್ರಶ್ನೆ ಬೇರೆ ಆಗುತ್ತಿತ್ತು. ನೀವು ಈಗಲೂ ಕೂಡ ಫುಲ್ ಬಜೆಟ್ ಮಂಡಿಸಿಲ್ಲ. ಫುಲ್ ಬಜೆಟ್ ಮಂಡಿಸುವಂತಹ ಸಂದರ್ಭದಲ್ಲಾದರೂ ಯೋಚನೆ ಮಾಡಿ. 10,000 ಕೋಟಿ ರೂ. ಗೆ ಕಡಿಮೆ ಇಲ್ಲದ ರೀತಿಯಲ್ಲಿ ಮಾಡಬೇಕು. ದುಡ್ಡು ಇಡುವುದು ಮುಖ್ಯವಲ್ಲ. ಆದರೆ ಖರ್ಚು ಮಾಡುವುದು ಬಹಳ ಮುಖ್ಯ. ಅದು ವ್ಯವಸ್ಥಿತವಾಗಿ ಖರ್ಚು ಮಾಡಬೇಕಾದಾಗ ಯಾವ ರೀತಿ infrastructure ಅನ್ನು human resources ಅನ್ನು ಮಾಡಬೇಕು ಎನ್ನತಕ್ಕಂಥದ್ದಕ್ಕೂ ಕೂಡ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಕನಿಷ್ಟ ಅಷ್ಟಾದರೂ ದುಡ್ಡನ್ನು ಇಡತಕ್ಕಂತಹ ಕೆಲಸ ನೀವು ಮಾಡಬೇಕು. ಇನ್ನೊಂದು ಸಂತೋಷವೇನೆಂದರೆ, ಆಲಮಟ್ಟಿ ಎತ್ತರವನ್ನು 524.256ಕ್ಕೆ ಏರಿಸುವಂತಹ ತೀರ್ಮಾನ ಅದೊಂದು ಐತಿಹಾಸಿಕವಾದ ತೀರ್ಮಾನ ನಮಗೆ ವರದಾನವಾಗಿದೆ. ಆದರೆ ಅದರಲ್ಲಿ ಬರತಕ್ಕಂತಹ ಎತ್ತರವನ್ನು ಎತ್ತರಿಸತಕ್ಕಂತಹ ಸಂದರ್ಭದಲ್ಲಿ ಮುಳುಗುತ್ತಿರತಕ್ಕಂತಹ ಭೂಮಿ rehabilitation ಗೆ ನನಗನ್ನಿಸುತ್ತದೆ ಇದಕ್ಕೆ 3,000 ಕೋಟಿ ರೂ. ಕನಿಷ್ಟ ಬೇಕಾಗುತ್ತದೆ. ಅಷ್ಟು ಹಣ ಇಲ್ಲದಿದ್ದರೆ ನೀವು ಅದನ್ನು ಎತ್ತರಿಸುವುದಕ್ಕೆ ಸಾಧ್ಯವೇ ಇಲ್ಲ. ಅದನ್ನು ಎತ್ತರಿಸಬೇಕಾದಾಗ ಸಂಪನ್ಮೂಲವನ್ನು ನೀವು ರೂಢಿಸಿಕೊಳ್ಳಬೇಕಾಗುತ್ತದೆ ಎನ್ನತಕ್ಕಂತಹ ಮಾತನ್ನು ಹೇಳುವುದರ ಜೊತೆಗೆ ಇನ್ನೊಂದು ಬಹಳ ಸಂತೋಷ ಎಂದರೆ, ನಮ್ಮ ಭಾಗದ ಹೋರಾಟ ಭದ್ರಾ ಮೇಲ್ದಂಡೆ ಕಾರ್ಯ ಯೋಜನೆ ಮಧ್ಯಮ ಕರ್ನಾಟಕಕ್ಕೆ ಆಗಬೇಕು. ತುಮಕೂರು ಮತ್ತು ಚಿತ್ರದುರ್ಗ ಭಾಗದ ಬರಗಾಲಕ್ಕೆ ತುತ್ತಾಗಿರತಕ್ಕಂತಹ ಪ್ರದೇಶಗಳಿಗೆ ನೀರಾವರಿ

ಬೇಕು ಎನ್ನುವ ಹೋರಾಟವನ್ನು ಕಳೆದ 30-40 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ದಿ. ದೇವರಾಜ ಅರಸ್‌ರವರಿಂದ ಪ್ರಾರಂಭಗೊಂಡು ಎಲ್ಲಾ ಮುಖ್ಯ ಮಂತ್ರಿಗಳು ಕೂಡ ನಿಜಲಿಂಗಪ್ಪನವರಿಂದ ಹಿಡಿದು ಎಲ್ಲರೂ ಕೂಡ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ನಾನೂ ಹೋರಾಟ ಮಾಡುತ್ತಿದ್ದೆ. ಏನೆಂದರೆ, ಕೃಷ್ಣ ಕೊಳ್ಳ ನೀರಾವರಿ ಸಮಿತಿಯನ್ನು ಮಾಡಿಕೊಂಡು ನಾವು ಅದನ್ನು ತುಮಕೂರು ಬ್ರ್ಯಾಂಚ್ ಕೆನಾಲ್ ಮಾಡಿ ಎಂದು ಬಹಳಷ್ಟು ಸಾರಿ ಮಾತನಾಡಿದ್ದೇವೆ. ವಿಧಾನಸಭೆಯಲ್ಲಿ ಮಾನ್ಯ ಬಸವರಾಜ್‌ರವರಿಗೂ ನಮಗೂ ಸಾಕಷ್ಟು ರೀತಿಯಲ್ಲಿ ಮಾತಾಗಿದೆ. ಆಗ ಅವರು ನನಗೆ ಹೇಳಿದ್ದರು. ತಾಂತ್ರಿಕವಾದ ಮಾಹಿತಿ ನೀವು ಕೊಡುವುದಾದರೆ ತುಮಕೂರು ಬ್ರ್ಯಾಂಚ್ ಕೆನಾಲ್ ಮಾಡುತ್ತೇನೆ ಎನ್ನತಕ್ಕಂತಹ ಮಾತನ್ನು ಕೂಡ ನೀವು ನನಗೆ ಹೇಳಿದ್ದಿರಿ. 21.07.08ರಲ್ಲಿ ನಾನು ನಿಮಗೆ ಒಂದು ಪ್ರಶ್ನೆ ಹಾಕಿದ್ದೆ. ಆಗ ನೀವು ಸ್ಪಷ್ಟವಾದ ಆಶ್ವಾಸನೆಯನ್ನು ಕೊಟಿದ್ದೀರಿ. ಸ್ಕೀಮ್ A & B ಯಲ್ಲಿ ಬರುವಂತಹ ನೀರಿಗೆ ಒಂದು ಸಮಗ್ರವಾದ ಭದ್ರಾಮೇಲ್ದಂಡೆ ಯೋಜನೆಯನ್ನು ರೂಪಿಸಿ ತುಮಕೂರು ಜಿಲ್ಲೆಯ ಸಿರಾ, ಚಿಕ್ಕನಾಯಕನಹಳ್ಳಿ ಮತ್ತು ಚಿತ್ರದುರ್ಗ ಭಾಗದ ಹಿರಿಯೂರು ಮತ್ತಿತರ ಭಾಗಗಳಿಗೆ ನೀರನ್ನು ಕೊಡಲು ಸರ್ಕಾರ ಚಿಂತಿಸಿದೆಯೇ ಎಂದದ್ದಕ್ಕೆ ಭದ್ರಾ ಮೇಲ್ದಂಡೆ ಯೋಜನೆಗಾಗಿ ಸ್ಕೀಮ್ ಬಿ ಅಡಿಯಲ್ಲಿ ಲಭ್ಯವಾಗಬಹುದಾದ ನೀರಿನ ಪ್ರಮಾಣವು ಕೃಷ್ಣ ನ್ಯಾಯಾಧಿಕರಣದ ಅಂತಿಮ ತೀರ್ಮಾನವನ್ನು ಅವಲಂಬಿಸಿರುತ್ತದೆ. ಅದರಂತೆ ನ್ಯಾಯಾಧಿಕರಣದ ತೀರ್ಪು ಹೊರ ಬಂದ ನಂತರ ಸ್ಕೀಮ್ ಬಿ ಅಡಿಯಲ್ಲಿ ಲಭ್ಯವಾಗುವ ನೀರಿಗೆ ಯೋಜನೆಯ ರೂಪುರೇಷೆಗಳನ್ನು ನಿರ್ಧರಿಸಬೇಕಾಗಿರುವುದರಿಂದ ಸ್ಕೀಮ್ ಎ ಮತ್ತು ಸ್ಕೀಮ್ ಬಿ ಯಲ್ಲಿ ಸಮಗ್ರವಾದ ಭದ್ರಾ ಮೇಲ್ದಂಡೆ ಯೋಜನೆಯನ್ನು ರೂಪಿಸುವುದರ ಬಗ್ಗೆ ಸೂಕ್ತ ನಿರ್ಧಾರವನ್ನು ಕೈಗೊಳ್ಳಲಾಗುವುದು ಎನ್ನತಕ್ಕಂತಹ ಉತ್ತರವನ್ನು ನೀವು ಎರಡು ವರ್ಷದ ಕೆಳಗೆ ಕೊಟ್ಟಿದ್ದೀರಿ. ಹಾಗಾಗಿ ಇವತ್ತು ಸಕಾಲ ಬಂದಿದೆ. ಇವತ್ತು ನಿಮಗೆ 320 TMC ಯಿಂದ 360 TMC ವರೆಗೆ ಬಳಕೆ ಮಾಡುವುದಕ್ಕೆ ಟ್ರಿಬ್ಯುನಲ್ ಅವಕಾಶ ಕೊಟ್ಟಿರತಕ್ಕಂತಹ ಹಿನ್ನೆಲೆಯಲ್ಲಿ there is a specific allocation of water for Singatalore,

Upper Tunga and Upper Bhadra. ಹಾಗಾಗಿ ಈ ಸ್ಕೀಮ್ ಎ ನಲ್ಲಿ ಕೂಡ ಈ ಮೂರು ಯೋಜನೆಗಳಿಗೂ ಸ್ವಲ್ಪ ನೀರು ಕೊಟ್ಟಿದ್ದೀರಿ. ಅಲೋಕೇಷನ್ ಇದೆ. ಅದರ ಜೊತೆಗೆ ನಮಗೆ ಅವಕಾಶ ಇರತಕ್ಕಂಥದ್ದು 240 TMC. ನಿಮಗೆ ಇವತ್ತು ಟ್ರಿಬ್ಯುನಲ್‌ನವರು ಹೇಳಿ ಬಿಟ್ಟಿದ್ದಾರೆ ಮಧ್ಯಮ ಕರ್ನಾಟಕಕ್ಕೆ ಈ ಯೋಜನೆ ಆದರೆ ತುಂಗಭದ್ರಾ ವ್ಯಾಲಿಯಲ್ಲಿ ಬರತಕ್ಕಂತಹ ಯೋಜನೆ ಅಡಿ 40 TMC , ಅಪ್ಪರ್ ಕೃಷ್ಣದಲ್ಲಿ 130 TMC ಎಂದು ಹೇಳಿದೆ. 130 TMC ನೀರನ್ನು ಅಲ್ಲಿ ಬಳಸುವುದಕ್ಕೆ ನೀವು ಕಾರ್ಯ ಯೋಜನೆ ಹಾಕಿ. ಅದೇ ರೀತಿಯಾಗಿ ಇಲ್ಲಿಯೂ ಕೂಡ. ನಾನೇನು ಒತ್ತಾಯ ಮಾಡುತ್ತಿದ್ದೇನೆಂದರೆ ಇವತ್ತು ರೀ ಅಲೋಕೇಷನ್ ಯಾವ ಯಾವ ಯೋಜನೆಗೆ ಎಷ್ಟು ನೀರು ಎಂದು ರೀ ಅಲೋಕೇಷನ್ ಮಾಡಬೇಕು. ನನಗೆ ಒಂದು ವಿಚಾರ ಅರ್ಥವಾಗುತ್ತಿಲ್ಲ. ಗೆಜೆಟ್‌ನಲ್ಲಿ ನೋಟಿಫೈ ಆಗುವುದಕ್ಕಿಂತ ಮುಂಚೆ ಮಾಡಬಹುದಾ ಬೇಡವೆಂದು ಅರ್ಥವಾಗುತ್ತಿಲ್ಲ. ಬಹುಶ: ಎಲ್ಲೋ ಒಂದು ಕಡೆಗೆ ನೀವು ಗೆಜೆಟ್‌ನಲ್ಲಿ ನೋಟಿಫೈ ಆಗಲಿ ಇಲ್ಲದೆ ಇರಲಿ Tribunal ತೀರ್ಮಾನ ಮಾತ್ರ it is binding. Almost. ಏನೇ ವ್ಯತ್ಯಾಸವಾದರೂ ಕೂಡ ಸ್ವಲ್ಪ ಆಜುಬಾಜುಗೆ ಸ್ವಲ್ಪ ವ್ಯತ್ಯಾಸವಾಗಬಹುದೇ ವಿನ: ಬಹಳಷ್ಟು ಬದಲಾವಣೆ ಆಗುವುದಿಲ್ಲ. ಕಾವೇರಿ ತೀರ್ಪು ಬಂದು ಸುಪ್ರೀಂ ಕೋರ್ಟಿಗೆ ಹೋಗಿ ಎಷ್ಟು ವರ್ಷವಾಯಿತು, ಅದು ಏನಾಗುತ್ತದೆ ಪ್ರಶ್ನೆ ಬೇರೆ. ಆದರೆ ಈಗಲೂ ಕೂಡ ನಾವು ತತಕ್ಷಣ ರೀ ಅಲೋಕೇಷನ್ ಮಾಡಿ ಕೆಲಸವನ್ನು ಪ್ರಾರಂಭ ಮಾಡತಕ್ಕಂತಹ ಕೆಲಸವನ್ನು ಮಾಡಬೇಕು ಎನ್ನತಕ್ಕಂತಹ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ. ನನಗೆ ಒಂದು ಸಂತೋಷವೇನೆಂದರೆ ಭದ್ರಾ ಮೇಲ್ದಂಡೆ ಯೋಜನೆಯನ್ನು ತುಂಗಾದಿಂದ ಭದ್ರಾಕ್ಕೆ ಭದ್ರಾದಿಂದ ಇವತ್ತು ತರೀಕೆರೆಯವರೆಗೆ ನೀರು ತರತಕ್ಕಂತಹ ಕೆಲಸವನ್ನು ಪ್ರಾರಂಭ ಮಾಡಿದ್ದರಿಂದಲೇ ಇವತ್ತು ಹೆಚ್ಚು ಅಲೋಕೇಷನ್ ಬಂದಿದ್ದು. ಆ ವಿಚಾರದಲ್ಲಿ ನಿಮಗೆ compliment ಮಾಡುತ್ತೇನೆ. ರೈತರು ತರೀಕೆರೆಯಲ್ಲಿ ತೊಂದರೆ ಮಾಡಿರಬಹುದು. ನೀವು ಕೆಲಸವನ್ನು ಪ್ರಾರಂಭ ಮಾಡಿದರಲ್ಲಾ ಅದೇ ಬೇಸಿಸ್. ಏಕೆಂದರೆ ನಾನು ಟ್ರಿಬ್ಯುನಲ್‌ನಲ್ಲಿ ಏನು

argument ಆಗುತ್ತದೆ ಎನ್ನತಕ್ಕಂತಹ ಮಾಹಿತಿಯನ್ನು ಕೂಡ ನಾನು ಸಂಪೂರ್ಣವಾಗಿ ಇಟ್ಟುಕೊಂಡಿದ್ದೆ. ನಾನು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ಸಂಪೂರ್ಣವಾದ ರೆಕಾರ್ಡ್ಸ್ ನೋಡಿ ನಾನು ಅರ್ಥಮಾಡಿಕೊಳ್ಳುತ್ತಿದ್ದೆ. ಹಾಗಾಗಿ ನಿಮ್ಮ ಆ ಪ್ರಯತ್ನ ನಮಗೆ ಫಲಪ್ರದ ಆಗಿದೆ, ಸಹಾಯವಾಗಿದೆ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಕೋರ್ಟಿನ ವಿಚಾರದಲ್ಲಿ ನೀವು ಹೆಚ್ಚಿನ ಆಸಕ್ತಿ ವಹಿಸಿದ್ದೀರಿ. Basically ನೀವು ಇಂಜಿನಿಯರಿಂಗ್ ಗ್ರಾಜ್ಯುಯೇಟ್ ಆಗಿರುವುದರಿಂದ ಇದೆಲ್ಲಾ ಸ್ವಲ್ಪ ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳುವ ಶಕ್ತಿ ಇತ್ತು. ಅದು ಪ್ರಯತ್ನ ಪಟ್ಟಿದ್ದೀರಿ ಅದು ಸಹಾಯವಾಗಿದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಯಾವುದೇ ರೀತಿಯಲ್ಲಿ ಕೂಡ ಆ ಯೋಜನೆ ಅನುಷ್ಟಾನ ಆಗಬೇಕು. ಪ್ರಥಮ ಹಂತದಲ್ಲಿ ಈಗಾಗಲೇ ಏನು ಪ್ರಾರಂಭವಾಗಿದೆ, ಆ ಸಮಗ್ರವಾದ ಯೋಜನೆಯನ್ನು ಮಾಡುವುದರ ಜೊತೆಗೆ ನಿಮಗೆ ಲಿಫ್ಟ್ ಅವಾಯ್ಡ್ ಮಾಡಬೇಕಾದರೆ ಕೆ.ಸಿ.ರೆಡ್ಡಿಯವರ ವರದಿ ಪ್ರಕಾರ ಮೊದಲು ಏನು ಯೋಜನೆ ಇತ್ತು ಅದು ಮಾರ್ಪಾಡು ಆಗಬೇಕಾಗುತ್ತದೆ. ನಾನು ನಿಮ್ಮ ಹತ್ತಿರ ವಿಧಾನಸಭೆಯಲ್ಲಿ ಎರಡು ವರ್ಷದ ಕೆಳಗೆ ಮಾತನಾಡಿದಂತಹ ಸಂದರ್ಭದಲ್ಲಿ ತಾಂತ್ರಿಕ ಸಮಿತಿಗೆ ನೀವು ವರದಿಯನ್ನು ಕಳುಹಿಸಿ ಕೊಟ್ಟಿರಿ. ಇವತ್ತು ನಮ್ಮ ಸಲಹೆ ಹೀಗಿದೆ ಎಂದು ಹೇಳಿದಾಗ ತಾಂತ್ರಿಕ ಸಮಿತಿಯವರು ಕೂಡ ಹತ್ತಾರು ಸಭೆಗಳನ್ನು ಮಾಡಿ ಈಗಾಗಲೇ ದೇಸಾಯಿ ಅವರ ಅಧ್ಯಕ್ಷತೆಯಲ್ಲಿರುವ ಸಮಿತಿಯವರು ಕೂಡ ತುಮಕೂರು ಬ್ರ್ಯಾಂಚ್ ಕೆನಾಲ್ ಅನ್ನು ಮಾಡಬಹುದು ಎನ್ನತಕ್ಕಂತಹ ಸಲಹೆಯನ್ನು ಕೂಡ ಕೊಟ್ಟಿದ್ದಾರೆ. ಎಸ್ಟಿಮೇಟ್ಸ್ ಕೂಡ ಇವತ್ತು ಆಗುತ್ತದೆ. ಇವತ್ತು ನೀರು ನಮ್ಮ ಕೆನಾಲ್‌ನಿಂದ ಹೊರಗಡೆ ಬಂದ ತಕ್ಷಣ gravity flow ನಲ್ಲಿ ಸಿರಾ ಹಾಗೂ ಕೊರಟಗೆರೆಯವರೆಗೆ ನೀರು ಬರುವುದಕ್ಕೆ ಸಾಧ್ಯವಾಗುತ್ತದೆ. ಅದರ ಮುಂದಕ್ಕೆ ನಮಗೆ ಲಿಫ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೆ.ಸಿ. ರೆಡ್ಡಿಯವರು ಸಲಹೆ ಮಾಡಿರುವ ಪ್ರಕಾರ ಚಿತ್ರದುರ್ಗ ಬ್ರ್ಯಾಂಚ್ ಕೆನಾಲ್ ಮುಖೇನ ಅಷ್ಟೊಂದು ನೀರನ್ನು ತೆಗೆದುಕೊಂಡು ಹೋಗಬೇಕಾಗಿಲ್ಲ. ಹಿರಿಯೂರಿಗೆ ನೀರು ಕೊಡಬೇಕೆಂದರೆ ತುಮಕೂರು

ಬ್ರ್ಯಾಂಚ್ ಕೆನಾಲ್ ಮುಖೇನ ಸಿರಾ ಮತ್ತು ಹಿರಿಯೂರು ಹಾಗೂ ಪಾವಗಡ ಭಾಗಕ್ಕೆ ನೀರು ಬರುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ನಮ್ಮದು ಸಿರಾ ಬಾರ್ಡರ್. ಪಾವಗಡ ಎಂದರೆ ಎಲ್ಲರ ಕಲ್ಪನೆ ಏನೆಂದರೆ ಎಲ್ಲಿಯೋ ಇದೆ ಎಂದು ಇದೆ. ಪಾವಗಡ ತಾಲ್ಲೂಕು ಇರುವುದು ಸಿರಾಕ್ಕೆ ಹೊಂದಿಕೊಂಡ ಹಾಗೆ ನೀವು ಸಿರಾಕ್ಕೆ ನೀರು ಕೊಟ್ಟರೆ ಪಾವಗಡಕ್ಕೆ ನೀರು ಕೊಟ್ಟ ಹಾಗೆ. ಹಾಗಾಗಿ ನೀವು ಪಾವಗಡ ತಾಲ್ಲೂಕಿಗೂ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆ ಬಗ್ಗೆ ನೀವು ಏನು ಆಶ್ವಾಸನೆ ಕೊಟ್ಟಿದ್ದೀರಿ ಆ ರೀತಿಯಾದ ಯೋಜನೆಯನ್ನು ನೀವು ಆದಷ್ಟು ಬೇಗ ಆಡಳಿತಾತ್ಮಕ ಮಂಜೂರಾತಿ ಕೊಡಬೇಕು. ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ಕೊಡತಕ್ಕಂತಹ ಅವಶ್ಯಕತೆ ಇದೆ. 2003ರಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಮಾನ್ಯ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಿಜಲಿಂಗಪ್ಪನವರು ತೀರಿಕೊಂಡಿದ್ದಂತಹ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಒತ್ತಾಯ ಮಾಡಿ ಇವತ್ತು ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದೂ ಕೂಡ ಒಂದು ಸಹಾಯವಾಗಿದೆ. ಹಾಗಾಗಿ ಈ ಯೋಜನೆಗೆ ಸ್ಕೀಮ್ ಬಿ ಗೆ ತುಮಕೂರು ಬ್ರ್ಯಾಂಚ್ ಕೆನಾಲ್ ಅಪ್ರೂವ್ ಮಾಡುವುದರ ಮುಖೇನ ಇವತ್ತು ಒಪ್ಪಿಗೆಯನ್ನು ಕೊಡಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಯಾವುದೇ ಕಾರಣದಿಂದಲೂ ಕೂಡ ರೀ–ಅಲೋಕೇಷನ್ ಬಗ್ಗೆ ನನ್ನ ಒತ್ತಾಯ ಏನೆಂದರೆ, ನೀವು 40 TMC ಏನು ಮೂರು ಯೋಜನೆಗಳಿಗೆ ಇಟ್ಟಿದ್ದೀರಿ ಆ ಯೋಜನೆಗೆ ಸೀಮಿತವಾದ ರೀತಿಯಲ್ಲಿ ಹಂಚಿಕೆ ಮಾಡಬೇಕು. ಹೆಚ್ಚು ಬಳಕೆಯನ್ನು ಮಾಡತಕ್ಕಂತಹ ಕೆಲಸವನ್ನು ಮಾಡಬೇಕು. ಬಹುಶ: ನನಗನ್ನಿಸುತ್ತದೆ ಎಲ್ಲೋ ಒಂದು ಕಡೆ ಅಷ್ಟು ನೀರನ್ನು ನೀವು ಬಳಕೆ ಮಾಡುವುದು ಅಷ್ಟು ಸುಲಭದ ಮಾತಲ್ಲ. ಬಹಳಷ್ಟು ಹಣವನ್ನು ಇವತ್ತು ಖರ್ಚು ಮಾಡಬೇಕಾಗುತ್ತದೆ. ಇನ್ನೊಂದು ಮುಖ್ಯವಾದ ಸಲಹೆಯನ್ನು ನಾನು ಕೊಡುತ್ತೇನೆ. ಭದ್ರಾ ಮೇಲ್ದಂಡೆ ಯೋಜನೆಗೆ ಟ್ರಿಬ್ಯುನಲ್ ಅಲೋಕೇಷನ್ ಕೊಟ್ಟಿರತಕ್ಕಂತಹ ಹಿನ್ನೆಲೆಯಲ್ಲಿ ನೀವು ತೇಗೂರು ಗುಡ್ಡ ಅಲ್ಲಿಂದ ಕೂಡ ಅಜ್ಜಂಪುರದವರೆಗೆ ಟನಲ್ ಮುಖೇನ ನೀರು ತರಬಹುದು

ಎನ್ನತಕ್ಕಂತಹ ವಾದ ಕೂಡ ಇದೆ. ಅದಕ್ಕೆ ತಾಂತ್ರಿಕವಾದ ಸಲಹೆಯನ್ನು ಕೂಡ ಕೊಟ್ಟಿದ್ದಾರೆ.

ದಯಮಾಡಿ ಯೋಚನೆ ಮಾಡಿ. ಮಾವುಂಡಿ ಮತ್ತು ತೇಗೂರು ಗುಡ್ಡಕ್ಕೆ tunnel ಮುಖೇನ ನೀರು ತಂದರೆ ಖಂಡಿತ feasible ಆಗುತ್ತದೆ, gravity ಯಲ್ಲಿ ನೀರು ಬರುತ್ತದೆ, environment problem ಆಗುವುದಿಲ್ಲ. It will not affect the fauna & flora of the forest area also. It is most suitable. ರೈತರು ವಿರೋಧ ಮಾಡುತ್ತಾರೆಂದು, ಬಾಗೂರು-ನವಿಲೆ tunnel ಅನ್ನೇ ಆಧಾರವಾಗಿಟ್ಟುಕೊಂಡು ಮಾನ್ಯ ಕೆ.ಸಿ.ರೆಡ್ಡಿಯವರು, ಅದನ್ನು ಮಾಡಲು ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದನ್ನು ಒಮ್ಮೆ ಮರು ಪರಿಶೀಲನೆ ಮಾಡತಕ್ಕಂಥ ಕೆಲಸವನ್ನು ಮಾಡಿ. ಏಕೆಂದರೆ, technology ಸಾಕಷ್ಟು improve ಆಗಿದೆ. ಆಂಧ್ರಪ್ರದೇಶದಲ್ಲಿ ಈಗಾಗಲೇ tunnel technology ಎನ್ನತಕ್ಕದ್ದು ಹೆಚ್ಚಾಗಿ ಪ್ರಚಾರದಲ್ಲಿದೆ. ಅವರೂ ಕೂಡ ಬಳಕೆ ಮಾಡುತ್ತಿರಬೇಕಾದರೆ, ಅದನ್ನೂ ಕೂಡ ಪರೀಕ್ಷೆ ಮಾಡಿ ನೋಡಿ. ಅದರ ನಂತರ ಅನಿವಾರ್ಯ ಆಗುತ್ತದೆ ಎನ್ನುವುದಾದರೆ ನೀವು ಈ ಯೋಜನೆಗೆ ಕೈ ಹಾಕತಕ್ಕಂಥ ಕೆಲಸವನ್ನು ಮಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಜಯಚಂದ್ರರವರೆ, ಜಲ ಸಂಪತ್ತನ್ನು ಪರಿಪೂರ್ಣವಾಗಿ ಉಪಯೋಗ ಮಾಡುವುದಕ್ಕೆ ಇಡೀ ರಾಜ್ಯದಲ್ಲಿ ಒಂದು conscious decision ಮಾಡತಕ್ಕದ್ದು ಬಹಳ ಅವಶ್ಯಕತೆ ಇದೆ. ಏಕೆಂದರೆ, ನಾವು ತೆಗೆದುಕೊಳ್ಳುವಂತಹ ತೀರ್ಮಾನ ಮುಂದಿನ ಹಲವಾರು ಪೀಳಿಗೆಗೆ, ಅದು ಒಳ್ಳೆಯದೂ ಆಗಬಹುದು ಅಥವಾ ಮಾರಕವೂ ಆಗಬಹುದು. ಆದರಿಂದ ಈ ಸದನ ವ್ಯಾಪಕವಾಗಿ ಚರ್ಚೆ ಮಾಡಬೇಕು. ಈಗ ಮಾವುಂಡಿ ಬಗ್ಗೆ ಹೇಳಿದಿರಿ, ಅಲ್ಲಿ wild life ಬರುತ್ತದೆ, forest ಬರುತ್ತದೆ, ಅಲ್ಲಿ water resources ಇದೆ, ಅದನ್ನು ನಾನು ಒಪ್ಪುತ್ತೇನೆ. ಆದರೆ ಅದನ್ನು ತರಬೇಕೇ? ತಂದರೆ ಯಾವ ರೀತಿ affect ಆಗುತ್ತದೆ? ಅದೇ ರೀತಿ ಮೊನ್ನೆ ಹೇಳಿದಂತಹ western flowing rivers ಬಗ್ಗೆ ಸಹ ಚರ್ಚೆಯಾಗಬೇಕು. ಮತ್ತೆ ಇನ್ನೊಂದು ಏನಾಗಿದೆ ಎಂದರೆ, ನಮಗೆ ನಿಸರ್ಗ

ಒಂದು ಕಡೆ western ghats with highest rainfall ಕೊಟ್ಟಿದೆ. ಇನ್ನೊಂದು ಕಡೆ ಬಯಲುಸೀಮೆ ಕೊಟ್ಟಿದೆ where scanty rainfall ಇದೆ. ಇಡೀ ರಾಜ್ಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಸೇರಿ, ಒಟ್ಟಾರೆ ನಾವು water grid ಎಂದೇನು ಕರೆಯುತ್ತೇವೆ, ಆ water grid ಅನ್ನು ಯಾವ ರೀತಿ distribute ಮಾಡಬೇಕು ಎಂಬ ಬಗ್ಗೆ conscious decision ತೆಗೆದುಕೊಳ್ಳಬೇಕಾಗುತ್ತದೆ. ಒಂದು ಕೇವಲ ಸರ್ಕಾರವೇ ಮಾಡುವಂತಹ ವಿಚಾರ ಇದಲ್ಲ. ಇವತ್ತು ನಮ್ಮ ನದಿ ನೀರುಗಳನ್ನು ಸಮರ್ಪಕವಾಗಿ ಬಳಕೆ ಮಾಡಿದರೆ, ಬಹುತೇಕವಾಗಿ ಯಾವುದೇ ತಾಲ್ಲೂಕೂ ಕೂಡ ನೀರಿನ ಬವಣೆ ಇಲ್ಲದಂತೆ ಮಾಡಲಿಕ್ಕೆ ಸಾಧ್ಯವಿದೆ. ಉದಾಹರಣೆಗೆ ಈಗ ಬೇಡ್ತಿ ಮತ್ತು ವರದಾ. Government of India ದವರೂ in principle ಅದನ್ನು ಒಪ್ಪಿಕೊಂಡಿದ್ದಾರೆ. ಆ ಬೇಡ್ತಿಯನ್ನು ವರದಾಗೆ ತಂದು, ವರದಾಯಿಂದ ತುಂಗಾಕ್ಕೆ ಬಂದ ಮೇಲೆ, ಅಲ್ಲಿ ಹೆಚ್ಚುವರಿ ನೀರು ಆಗುತ್ತದೆ. ಆ ಸಂದರ್ಭದಲ್ಲಿ ಅದನ್ನು ನಾವು ಮಾರಮ್ಮನ ಕಣಿವೆಗೆ ಹಾಕಿದರೆ, ಇವತ್ತು ಮಹಾರಾಜರು ಕಟ್ಟಿರುವಂತಹ ಮಾರಮ್ಮನ ಕಣಿವೆಯಲ್ಲಿ ನಾವು highest water ಅನ್ನು storage ಮಾಡಬಹುದು. ಇಡೀ ನಮ್ಮ ಚಿತ್ರದುರ್ಗ ಜಿಲ್ಲೆ, ತುಮಕೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆಗೆ ಒಂದು ರೀತಿಯಿಂದ ಅಲ್ಲಿಗೆ ಬೇಕಾದ ಎಲ್ಲವನ್ನೂ ಕೂಡ ಕೊಡಲಿಕ್ಕೆ ಸಾಧ್ಯತೆ ಇದೆ. ಈ ಎಲ್ಲವೂ ಕೂಡ ಹಿಂದೆ ಹಲವಾರು ಬಾರಿ ನಮ್ಮ ಇಂಜಿನಿಯರ್‌ಗಳು ಚರ್ಚೆ ಮಾಡಿ ಬಿಟ್ಟಿದ್ದಾರೆ. ಆದರೆ ಒಂದು conscious decision ಆಗಬೇಕಾಗಿದೆ. ಇವತ್ತು ಕೂರ್ಗ್‌ನಿಂದ ಪಡೆದುಕೊಳ್ಳುವುದಾಗಲಿ, western ghtats ನಿಂದ ಪಡೆದುಕೊಳ್ಳುವುದಾಗಲಿ, ಇವೆಲ್ಲದಕ್ಕೂ ಕೂಡ ಒಂದು ಸಾರಿ ಈ ಸದನ ಚರ್ಚೆ ಮಾಡಿ conscious decision ಮಾಡಿದರೆ ಬಹುತೇಕವಾಗಿ ಎಲ್ಲಾ ಸಮಸ್ಯೆ ನೀಗುತ್ತದೆ. ಯೋಜನೆ ಆಗಿ ಜಾರಿಯಾಗುವುದು ಒಂದು ವರ್ಷದಲ್ಲೇ ಆಗಬಹುದು ಅಥವಾ ಐದು ವರ್ಷಗಳಲ್ಲಿ ಆಗಬಹುದು. ಅದು ಬೇರೆ ವಿಚಾರ. ಆದರೆ ನಮ್ಮ ನೀರಿನ ಸಂಪತ್ತನ್ನು ಸದುಪಯೋಗ ಮಾಡಿ ನಮ್ಮ ecological and environmental balance ಅನ್ನು ಇಟ್ಟುಕೊಳ್ಳುವುದಕ್ಕೆ ಇದು

ಸಹಾಯವಾಗುತ್ತದೆ. ಆಧುನಿಕ ತಂತ್ರಜ್ಞಾನ ಏನಿದೆ, ಇದನ್ನು ಬಳಕೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. 3–4 ದಿವಸಗಳಲ್ಲಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲಿಕ್ಕೆ ಸಿದ್ಧನಿದ್ದೇನೆ. ಎಲ್ಲಾ ವಿಚಾರಗಳನ್ನು ನಾನು ದಾಖಲೆ ಸಮೇತವಾಗಿ ಈ ಸದನದಲ್ಲಿ ಮಂಡಿಸಲು ಸಿದ್ಧನಿದ್ದೇನೆ ಮತ್ತು ಹೊಸ technology ಏನೇನು ಬಂದಿದೆ, ಅದನ್ನೂ ಕೂಡ ವಿಸ್ತೃತವಾಗಿ ಇಡಲಿಕ್ಕೆ ಸಿದ್ಧನಿದ್ದೇನೆ. ತಾವೆಲ್ಲರೂ ಸಿದ್ಧರಾದರೆ..

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ಮನವಿ. ಬಜೆಟ್ ಮೇಲೆ ನಾವೆಲ್ಲರೂ ಇನ್ನೂ ಕೂಡ ಮಾತನಾಡುವವರಿದ್ದೇವೆ.

ಶ್ರೀ ಬಸವರಾಜ್ ಬೊಮ್ಮಾಯಿ: ಅವರು ಹೇಳಿದ್ದಕ್ಕೆ ಹೇಳಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಅವರು ಯೀಲ್ಡ್ ಆಗುತ್ತಾರೆ. ನೀವು ಮಧ್ಯೆ ಮಧ್ಯೆ ಪ್ರವೇಶ ಮಾಡಿ ಅರ್ಧ–ಅರ್ಧ ಗಂಟೆ ನೀವೇ ತೆಗೆದುಕೊಂಡರೆ ನಾವೇನು ಮಾಡೋಣ ಸ್ವಾಮಿ? ಸ್ವಾಮಿ ನೀವೇ ಹೇಳಿ.

ಶ್ರೀ ಬಸವರಾಜ್ ಬೊಮ್ಮಾಯಿ: ನಾನು ಹೇಳಿರುವಂತಹ ವಿಚಾರ ಇಡೀ ರಾಜ್ಯಕ್ಕೆ ಬೇಕಾಗಿರುವಂತಹ ವಿಚಾರವಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಉತ್ತರ ಕೊಡುವುದಕ್ಕೆ ನಿಮಗೆ ಅವಕಾಶ ಇದೆ. ನಾಳೆಯೆಲ್ಲಾ ಬೇಕಾದರೆ ನೀವು ಉತ್ತರ ಕೊಡಿ. ಸಂಜೆಯವರೆಗೂ ನಾವು ಕುಳಿತುಕೊಂಡು ಅದನ್ನು ಕೇಳುತ್ತೇವೆ. ನಾವು ಒಂದು ವಾರದಿಂದ ಮಾತನಾಡಲು ಇಲ್ಲಿ ಕಾಯ್ದುಕೊಂಡು ಕುಳಿತಿದ್ದೇವೆ. ನಾವೇನು ಮಾಡಬೇಕು?

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಶಿವಲಿಂಗೇಗೌಡರೆ, ನೀವು ಮಾತನಾಡುವುದಕ್ಕೆ ಏನೂ ಅಡ್ಡಿಯಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನೀವೇ ಮಧ್ಯೆ ಮಧ್ಯೆ ಎದ್ದು ನಿಂತು ಅರ್ಧ–ಅರ್ಧ ಗಂಟೆ ಮಾತನಾಡಿ reply ಕೊಡುತ್ತಿದ್ದರೆ ನಮಗೆಲ್ಲಿ ಮಾತನಾಡಲು ಅವಕಾಶ ಸಿಗುತ್ತದೆ?

ಶ್ರೀ ಬಸವರಾಜ್ ಬೊಮ್ಮಾಯಿ: ನಾನು reply ಏನೂ ಮಾಡಿಲ್ಲ. ಮಾನ್ಯ ಸದಸ್ಯರು ಮಾತನಾಡಿದ್ದಕ್ಕೆ ಪೂರಕವಾಗಿ ಮಾತ್ರವೇ ಮಾತನಾಡಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನೀವು ಬಜೆಟ್ ಮೇಲಿನ ಚರ್ಚೆಗೆ reply ಕೊಡಬೇಕಾದರೆ, ನೀವು ಏನೇನು ಹೇಳುತ್ತೀರೋ, ಎಲ್ಲವನ್ನೂ ಕೂಡ ಹೇಳಿಬಿಡಿ. ನಾವು ಎಲ್ಲವನ್ನೂ ಕೇಳುತ್ತೇವೆ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಶಿವಲಿಂಗೇಗೌಡರೆ, ಚರ್ಚೆ ಕೇವಲ one way traffic ತರಹ ಆದರೆ ಚೆನ್ನಾಗಿರುವುದಿಲ್ಲ. ಇದೆಲ್ಲಾ ಇರಬೇಕಾಗುತ್ತದೆ. Parliamentary repartee ಇರುತ್ತದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು. ಮಾನ್ಯ ಅಧ್ಯಕ್ಷರು ನಮಗೆ ಸಹಕಾರ ಕೊಡಬೇಕು.

ಶ್ರೀ ಬಸವರಾಜ್ ಬೊಮ್ಮಾಯಿ: Parliamentary repartee ಇರಬೇಕು. ಆಗಲೇ ಚರ್ಚೆ ಚೆನ್ನಾಗಿರುತ್ತದೆ.

ಉಪಾಧ್ಯಕ್ಷರು: ಚರ್ಚೆ ಬಹಳ ಚೆನ್ನಾಗಿ ನಡೆಯುತ್ತಿದೆ. ಚರ್ಚೆಗೆ ಪೂರಕವಾಗಿ ತಾವು ಮಾಹಿತಿ ಕೊಟ್ಟಿದ್ದು ಸರಿಯಿದೆ. ಮಾನ್ಯ ಜಯಚಂದ್ರರವರೆ, ತಾವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಸಂಪೂರ್ಣವಾಗಿ ನಿಮ್ಮ ಮಾತನ್ನು ಒಪ್ಪುತ್ತೇನೆ. ಬಹುಶ: ಎಲ್ಲಾದರೂ ಒಂದು ಕಡೆ, ಕಾವೇರಿ ಮತ್ತು ಕೃಷ್ಣಾ ನದಿ ನೀರಿನ ತೀರ್ಪಿನ ಹಿನ್ನೆಲೆಯಲ್ಲಿ ಸಮಗ್ರವಾಗಿ ವಿಧಾನ ಸಭೆಯಲ್ಲಿ ಚರ್ಚೆಯಾಗಬೇಕಾಗಿದೆ. ಕೇವಲ ನಾನೊಬ್ಬನೇ ಅಲ್ಲ. ಎಲ್ಲರೂ ಕೂಡ ಇದಕ್ಕೆ ಧ್ವನಿಗೂಡಿಸುವವರಿದ್ದಾರೆ. ದಯಮಾಡಿ ಕರೆಯಿರಿ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಕರೆದ ರೀತಿಯಲ್ಲಿ ನೀರಾವರಿ ಬಗ್ಗೆ ಚರ್ಚಿಸಲು ವಿಶೇಷವಾದಂತಹ ಸದನವನ್ನು ಕರೆದರೆ ಅಥವಾ ಕಾಲ ನಿಗದಿ ಮಾಡಿದರೆ ಒಳ್ಳೆಯದು. ಬಹುಶ: ನೀವು ಪೂರ್ಣ ಬಜೆಟ್ಟಿಗೆ ಒಪ್ಪಿಗೆ ಪಡೆಯುವುದಕ್ಕಿಂತ ಮುಂಚೆ ಹೆಚ್ಚು ಹಣವನ್ನು ತರುವುದಕ್ಕೆ ಮತ್ತು ಶಾಸಕರ ಒತ್ತಾಯದ ಮೇರೆಗೆ ಬಜೆಟ್‌ನಲ್ಲಿ ಹೆಚ್ಚು allocation ಮಾಡುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ದಯಮಾಡಿ ಆ ಕೆಲಸವನ್ನು ಮಾಡಿ, ಅದನ್ನು

ಸ್ವಾಗತ ಮಾಡುತ್ತೇವೆ. ಆ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಸಲಹೆಗಳನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಜಯಚಂದ್ರರವರೆ, appeal period ಮುಗಿಯುವುದಕ್ಕಿಂತ ಮುಂಚಿತವಾಗಿ ಕರೆಯಿರಿ ಎಂದು ಹೇಳಿ. Appeal period ಎಂದು 90 days ಇರುತ್ತದೆ. ಅದಕ್ಕಿಂತ ಮುಂಚಿತವಾಗಿ ಅಧಿವೇಶನ ಕರೆದು ಚರ್ಚೆ ಮಾಡಿದರೆ ಒಳ್ಳೆಯದು.

ಶ್ರೀ ಟಿ.ಬಿ.ಜಯಚಂದ್ರ: ಈಗಾಗಲೇ clarification ಕೇಳುವುದೆಂದು ತೀರ್ಮಾನ ಮಾಡಿದ್ದಾರೆ. Supreme Court ಗೆ ಯಾರು ಹೋದರೂ ಕೂಡ ನಾವೂ ಹೋಗಬೇಕಾಗುತ್ತದೆ. ಯಾರೋ ಒಬ್ಬರು ಹೋದರೂ ಸಹ, ಪ್ರತಿವಾದಿಗಳಾಗಿ ನಾವು ಹೋಗಲೇಬೇಕಾಗುತ್ತದೆ. ಆ ಪ್ರಶ್ನೆ ಬೇರೆ. ಕೋರ್ಟಿನ ವ್ಯಾಜ್ಯ ಬೇರೆ. ಆದರೆ ಬಳಕೆಯಲ್ಲಿ ಮಾತ್ರ ಯಾವುದೇ ಸಂದರ್ಭದಲ್ಲೂ ಕೂಡ ಹಿಂದೆ ಬೀಳಬಾರದು. ಸೂಕ್ತ ಬಳಕೆಯನ್ನು ಮಾಡತಕ್ಕಂಥ ಕೆಲಸವನ್ನು ನಾವು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನನಗೂ ಗೊತ್ತಿದೆ, ಸಮಯದ ಅಭಾವವಿದೆ. ಇನ್ನೂ ಮಾತನಾಡಬೇಕಾದ ಸಾಕಷ್ಟು ವಿಚಾರಗಳು ನನ್ನಲ್ಲಿದ್ದರೂ ಕೂಡ, ಕಾಲಾವಕಾಶ ಕಡಿಮೆ ಇದೆ. ಬೇರೆಯವರೂ ಕೂಡ ಮಾತನಾಡುವುದಕ್ಕೆ ನಾನು ಅನುವು ಮಾಡಿ ಕೊಡಬೇಕಾಗುತ್ತದೆ. ವಿಶೇಷವಾಗಿ ಸದನವನ್ನು ಕರೆಯತಕ್ಕಂಥ ಅಭಿಪ್ರಾಯವನ್ನು ಇವತ್ತು ಮಾನ್ಯ ನೀರಾವರಿ ಸಚಿವರು ಏನು ಸೂಚಿಸಿದ್ದಾರೋ ಆ ಕೆಲಸವನ್ನು ಮೊದಲು ಮಾಡಲಿ ಎಂದು ಹೇಳುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ನೀರಾವರಿ ವಿಚಾರ ಬಂದಾಗ ನಮ್ಮ ಮಾನ್ಯ ಮುನಿಯಪ್ಪನವರನ್ನು ನಾವು ಮರೆಯಲಿಕ್ಕಾಗುವುದಿಲ್ಲ. ನಾವು ಕೋಲಾರದಲ್ಲಿ ನಡೆಯುತ್ತಿರತಕ್ಕಂಥ ಹೋರಾಟವನ್ನು ಪರಿಗಣಿಸಬೇಕು. ಮೊನ್ನೆ ಚಿಕ್ಕಬಳ್ಳಾಪುರ ಬಂದ್ ಮಾಡಲಾಯಿತು. ಒಂದು ನರಪ್ರಾಣಿಯೂ ಸಹ ಹೊರಗಡೆ ಓಡಾಡದೇ ಇರುವ ರೀತಿಯಲ್ಲಿ ಬಂದ್ ಮಾಡಲಾಯಿತು. ಪಾಪ! ಅವರಿಗೆ ನೀರು ಬರುತ್ತದೋ, ಬಿಡುತ್ತದೋ. ಒಂದು ವರದಿ ಬರುತ್ತದೆ, ನಮಗೆ ನೀರು ಬರುತ್ತದೆಂದು ಜಾತಕ ಪಕ್ಷಿಗಳಂತೆ ಕಾಯುತ್ತಿರುವ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜನಗಳಿಗೆ

ಕುಡಿಯುವ ನೀರು ಕೊಡಲೇಬೇಕು. ನಿನ್ನೆ ಮಾನ್ಯ ನೀರಾವರಿ ಸಚಿವರು ಎತ್ತಿನಹೊಳೆ ಇತ್ಯಾದಿ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡಿದರು. ಮತ್ತೆ ನಾನು ಆ ಬಗ್ಗೆ ಪ್ರಸ್ತಾಪ ಮಾಡಿದರೆ ಇನ್ನೂ ಹೆಚ್ಚು ಹೊತ್ತು ಆಗುತ್ತದೆ. ಆ ಯಾವುದೇ ಯೋಜನೆ ಆದರೂ ಕೂಡ, ನನ್ನ ಸಲಹೆ ಏನೆಂದರೆ, ನಾನು ನಿನ್ನೆ ಸಲಹೆ ಮಾಡಿದ್ದೇನೆ, ಇರುವ ನೀರನ್ನು ನಾವು ಹೇಗೆ ಬಳಕೆ ಮಾಡಬಹುದು ಎಂಬುದನ್ನು comprehensive ಆಗಿ study ಮಾಡಿದಾಗ ಬಹಳ ಸುಲಭವಾಗಿ ಯೋಜನೆಗಳನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ. ಈಗ ಎತ್ತಿನಹೊಳೆ ಒಂದೇ ಯೋಜನೆಗೆ 8 ಸಾವಿರ ಕೋಟಿ ರೂ.ಗಳನ್ನು ನೀವು ಅಂದಾಜು ಮಾಡಿ 200 ಕೋಟಿ ರೂ.ಗಳನ್ನು ಮಾತ್ರ ಬಜೆಟ್‌ನಲ್ಲಿ ಇಟ್ಟರೆ, ಜನಗಳ ಮೂಗಿಗೆ ತುಪ್ಪ ಹಚ್ಚಬಹುದೇ ವಿನ: ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ. ನಾವು ಇವತ್ತು ಅವರ ಸಹನೆಯನ್ನು ಪರೀಕ್ಷೆ ಮಾಡಬಾರದು. ಎಲ್ಲೋ ಒಂದು ಕಡೆಗೆ ಆ ಯೋಜನೆ ಆಗಬೇಕು. ಕೋಲಾರಕ್ಕೆ ಕುಡಿಯುವ ನೀರು ಕೊಡುವ ವಿಚಾರದಲ್ಲಿ, ಬಹುಶ: ಭದ್ರಾ ಮೇಲ್ದಂಡೆ ಯೋಜನೆ ಮತ್ತು ಆ ಸಕಲೇಶಪುರದ ಹತ್ತಿರ ಬರತಕ್ಕಂಥ ಎತ್ತಿನಹೊಳೆ ಮತ್ತು ಬೇರೆ ಬೇರೆ ಹಳ್ಳಗಳಲ್ಲಿ ಬರತಕ್ಕಂಥ ನೀರನ್ನು ಇವತ್ತು ಹೇಮಾವತಿ ಬೇಸಿನ್‌ನಿಂದ ವಾಪಸ್ ತೆಗೆದುಕೊಂಡು ಕೊಟ್ಟರೆ, ಅದು ಸಮಸ್ಯೆಯನ್ನು ನೀಗಿಸುವುದಕ್ಕೆ ಖಂಡಿತ ಸಾಧ್ಯವಿದೆ. ಅದು ಅಗಾಧವಾದ ಕೆಲಸವಲ್ಲ. ಆದರೆ ಇದಕ್ಕೆ ಒಟ್ಟಾರೆಯಾಗಿ ಹೇಳಬೇಕೆಂದರೆ, ಇದಕ್ಕೆ ಬೇಕಾಗಿರತಕ್ಕದ್ದು ಸಂಪನ್ಮೂಲ. ಸಂಪನ್ಮೂಲವನ್ನು ವಿಧಾನ ಸಭೆ ಕೊಡದಿದ್ದರೆ ಯಾರೂ ಏನೂ ಖರ್ಚು ಮಾಡಲಿಕ್ಕಾಗುವುದಿಲ್ಲ. ನಾವು ಎಲ್ಲೋ ಒಂದು ಕಡೆ ಸಮರ್ಪಣಾ ಮನೋಭಾವದಿಂದ, ರೈತರ ಹಿತದೃಷ್ಟಿಯಿಂದ, ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಕನಿಷ್ಟವೆಂದರೂ ಈ ಯೋಜನೆಗಳಿಗೆ 1 ಲಕ್ಷ ಕೋಟಿ ರೂ.ಗಳ ಹಣವನ್ನು ಇಡುತ್ತೇವೆ ಎನ್ನತಕ್ಕಂಥ ರೀತಿಯಲ್ಲಿ ಮಾಡಬೇಕು. ನಾವೆಲ್ಲರೂ ಕೂಡ ಸರ್ಕಾರಕ್ಕೆ ಹೇಳಬೇಕು. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಅವರಿಗೆ ಪ್ರೋತ್ಸಾಹವನ್ನು ಕೊಟ್ಟು 1 ಲಕ್ಷ ಕೋಟಿ ರೂ.ಗಳನ್ನು ಇಡತಕ್ಕಂಥ ರೀತಿಯಲ್ಲಿ ತೀರ್ಮಾನವನ್ನು ಮಾಡಿ, ನಾವು

ಸರ್ವಾನುಮತದ ಅಭಿಪ್ರಾಯವನ್ನು ಕೊಟ್ಟು, ಹಂತ ಹಂತವಾಗಿ ಖರ್ಚು ಮಾಡತಕ್ಕಂಥ ಕೆಲಸವನ್ನು ಮಾಡಿದರೆ, ಕನಿಷ್ಟ 20 ವರ್ಷಗಳಲ್ಲಾದರೂ ಕೂಡ ಈ ಯೋಜನೆಗಳು ಮುಗಿಯಲಿಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮುನಿಯಪ್ಪನವರೆ, ನೀವು ನೋಡುತ್ತೀರೋ ಇಲ್ಲವೋ. ನಿಮ್ಮ ಮಕ್ಕಳ ಕಾಲದಲ್ಲಾದರೂ ಆಗುತ್ತದೆ. ಅಂತರ್ಜಲ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ ಇವತ್ತು ಆ ಯೋಜನೆಗಳು ಬಹಳ ವೇಗದಲ್ಲಿ ಹೋಗಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಿ, ನಾನು ಕೊನೆಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. AIBP ಯೋಜನೆ ಸಣ್ಣ ನೀರಾವರಿ ಇಲಾಖೆಯಲ್ಲಿ ಇವತ್ತು ಅನುಷ್ಠಾನಗೊಳಿಸುತ್ತಿದ್ದಾರೆ. ನಿನ್ನೆ ತಾವು ಅಸೆಂಬ್ಲಿಯಲ್ಲಿ ಹೇಳಿದಿರಿ.

1376 ಕೋಟಿವರೆಗೂ ಕೊಟ್ಟಿದ್ದಾರೆಂದು, ಅದಕ್ಕೆ ನಾನು ನೀರಾವರಿ ಸಚಿವರನ್ನು, ನೀಆವರಿ ಕಾರ್ಯದರ್ಶಿಗಳನ್ನು ಅಭಿನಂದಿಸುತ್ತೇನೆ, ಏಕೆಂದರೆ, ನಾನು ಅವರ ಸಂಪರ್ಕದಲ್ಲಿದ್ದೇನೆ. ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ AIBP ಯೋಜನೆಯಲ್ಲಿ ಎರಡು ಯೋಜನೆಗಳು ಮಂಜೂರಾಗಿವೆ, ಒಂದು 80 ಲಕ್ಷ ಇನ್ನೊಂದು 3 ಕೋಟಿ 15 ಲಕ್ಷದ್ದು. ಬಹುಶಃ ಅಲ್ಲಿ ಕೆಲಸವಾಗುತ್ತಿರುವುದನ್ನು ನೀರಾವರಿ ಸಚಿವರಾದ ಬಸವರಾಜ ಬೊಮ್ಮಾಯಿಯವರು ಬಂದು ನೋಡಬೇಕು. ಅಲ್ಲಿ ನೀರು ಬಂದು ನಿಂತ ಮೇಲು ನೋಡಬೇಕು, ಈಗಾಗಲೇ underground waterನ basement ತೆಗೆದು, ಬ್ಲಾಕ್ ಮಾಡಿ ನಿಂತಿರುವುದರಿಂದಲೇ ಇವತ್ತು ಸುಮಾರು ನೂರಾರು ಬೋರ್‌ವೆಲ್‌ಗಳಲ್ಲಿ ನೀರು ಬರಲು ಶುರುವಾಗಿದೆ. ಅಷ್ಟಕ್ಕೆ, ಅನ್ನು ಅರೆಸ್ಟ್ ಮಾಡಿದ್ದೇವೆ, ನೀರು ಬಂದು ಇನ್ನು ನಿಂತಿಲ್ಲ, ಅಷ್ಟಕ್ಕೆ ಇವತ್ತು ನೂರಾರು ಬಾವಿಗಳಲ್ಲಿ ನೀರು ಬರುವ ಕೆಲಸವಾಗಿದೆ. ಅದಕ್ಕೆ ಇವತ್ತು ಸಣ್ಣ ನೀರಾವರಿ ಇಲಾಖೆಯ ಮುಂದೆ ನಾನು ಒಂದು ಬೇಡಿಕೆಯನ್ನು ಕೂಡ ಇಟ್ಟಿದ್ದೇನೆ. ಇವತ್ತು ಅದೇ ರೀತಿಯಾಗಿ 6–7 ಬ್ಯಾರೇಜ್‌ಗಳನ್ನು ಕಟ್ಟಿದ್ದರೆ, ಒಂದು ಮಾತನ್ನು ಹೇಳುತ್ತೇನೆ ಬರಗಾಲಕ್ಕೆ ತುತ್ತಾಗಿರುವ ನಮ್ಮ ಸಿರಾ ತಾಲ್ಲೂಕನ್ನು ಅರೆಮಲೆನಾಡನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ, ಇವತ್ತು ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲದಿರುವ ರೀತಿಯಲ್ಲಾಗುತ್ತದೆ, ಆ ಕೆಲಸ ಮಾಡಲು

ಸಾಧ್ಯವಾಗುತ್ತದೆ. AIBP ಯೋಜನೆ, ಇವತ್ತು ಹಿಂದುಳಿದ ಪ್ರದೇಶಗಳೇನಿವೆ, ಬರಗಾಲಕ್ಕೆ ತುತ್ತಾಗಿರುವ ಪ್ರದೇಶಗಳನ್ನು ಕೇಂದ್ರಿಕೃತ ಮಾಡಿ, ಮಳೆ ನೀರನ್ನು ಸಂಗ್ರಹಿಸುವ ಕೆಲಸವನ್ನು ಮಾಡುವಲ್ಲಿ, ಕೋಲಾರ, ತುಮಕೂರು, ಮಧುಗಿರಿ, ಚಿಕ್ಕಬಳ್ಳಾಪುರ, ಈ ಭಾಗದಲ್ಲಿ ಹೆಚ್ಚು ಖರ್ಚು ಮಾಡಲು ಸಹಾಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ.

ಉಪಾಧ್ಯಕ್ಷರು: ಜಯಚಂದ್ರರವರೆ, ಕನಿಷ್ಟ ಒಂದು ಕೋಟಿ ಲಕ್ಷ ರೂಪಾಯಿಗಳನ್ನಾದರೂ ಕಾಯ್ದಿರಿಸಬೇಕೆನ್ನುವ ಸಲಹೆಯನ್ನು ಕೊಟ್ಟಿದ್ದೀರಿ, ಯಾವ ರೀತಿ ಸಂಪನ್ಮೂಲಗಳನ್ನು ಜೋಡಿಸಬಹುದೆನ್ನುವ ಬಗ್ಗೆ ಚಿಂತಿಸಬೇಕಾಗಿದೆ, ಒಂದು ಸಲಹೆ, ಕರ್ನಾಟಕ ರಾಜ್ಯದ gross asset 2,83,000 ಕೋಟಿ ಇದೆ ಸಾಲವಿರುವುದು 97,000 ಕೋಟಿ, ಬಹುಶಃ ಆರ್ಥಿಕ ತಜ್ಞರು ಯಾರ ಹತ್ತಿರ expertise ಇದೆ, 50% ವರೆಗೆ ಸಾಲ ತೆಗೆಯುವುದಕ್ಕೆ allow ಮಾಡಬಹುದೆನ್ನುವ ಒಂದು ಸಲಹೆ ಇದೆ, ಬಹುಶಃ ಇದರ ಬಗ್ಗೆಯು ತಾವು ಬೆಳಕು ಚೆಲ್ಲಬೇಕೆಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ನಾನು ಇದೆಲ್ಲವನ್ನೂ ಸಂಪೂರ್ಣವಾಗಿ ಸಾಲದಲ್ಲಿ ಮಾಡಿ ಎಂದು ಹೇಳುತ್ತಿಲ್ಲ, farmer's participation ಕೂಡ ಬೇಕಾಗುತ್ತದೆ, bonds float ಮಾಡಿ ರೈತರು ಕೂಡ ಭಾಗವಹಿಸಬೇಕಾಗುತ್ತದೆ, invest ಮಾಡುವುದಕ್ಕೆ ರೈತರು ರೆಡಿ ಇದ್ದಾರೆ. ಆದರೆ ನೀವು ನಿರ್ದಿಷ್ಟವಾಗಿ ಒಂದು ಯೋಜನೆಯನ್ನು ಕೈಗೆತ್ತಿಕೊಂಡರೆ ಇಷ್ಟು ವರ್ಷದಲ್ಲಿ ನಾವು ನೀರನ್ನು ಕೊಡುತ್ತೇವೆನ್ನುವ ತೀರ್ಮಾನ ಮಾಡಿದರೆ, there is not problem to rise the fund. ಇವತ್ತು ರೈತ ಎಷ್ಟು ಕಷ್ಟದಲ್ಲಿದ್ದಾನೆಂದರೆ, ಸ್ವಂತ ಭೂಮಿಗೆ 3–4 ಲಕ್ಷ ಹಾಕಿ ಐಪಿ ಸೆಟ್ ಅಳವಡಿಸಿ ಕರೆಂಟ್ ಸಿಗದೆ, ಅಂತರ್ಜಲವಿಲ್ಲದೆ ಅವನು ನೋವು ಪಡುತ್ತಿರುವುದು ಅವನಿಗೆ ಇವತ್ತು ಅರಿವಾಗಿದೆ. ಇವತ್ತು ಈ ರೀತಿಯಾಗಿರುವುದನ್ನು ಮಾಡಿದರೆ, ಇವತ್ತು ಹೇಗಾದರೂ ಮಾಡಿ ದುಡ್ಡು ತುಂಬುವುದಕ್ಕೆ ತಯಾರಾಗುತ್ತಾನೆ, ಒಂದು. ಎರಡನೆಯದು, ನಿಮಗೆ immediate result ಬಂದಾಗ, ಈಗ ನಮ್ಮ ಶಿರಾಕ್ಕೆ ಹೇಮಾವತಿಯಿಂದ ಸ್ವಲ್ಪ ನೀರು ಬಂದ ಪ್ರಯುಕ್ತ ಇವತ್ತು ಅರ್ಧ ತಾಲ್ಲೂಕು ಸಂವೃದ್ಧವಾಗಿದೆ. ಇವತ್ತು

ನಮ್ಮಲ್ಲಿ cash crop ಎಷ್ಟು ಜಾಸ್ತಿಯಾಗಿದೆ. Income ಎಷ್ಟಾಗಿದೆ ಎನ್ನುವುದನ್ನು, ಕೇವಲ 10 ವರ್ಷಗಳಲ್ಲೇ ನಾನು ಬದಲಾವಣೆಯನ್ನು ನೋಡುವುದಕ್ಕೆ ಸಾಧ್ಯವಾಗಿದೆ, ಏಕೆಂದರೆ, I am the live example. It happened before me only. It happened in my regime only. ನಿಮಗೆ income generation ಗೆ ಏನೇನು ಕಷ್ಟವಾಗುವುದಿಲ್ಲ. ಇವತ್ತು ಕೇವಲ 35 ಲಕ್ಷ ಎಕರೆ, ನಮ್ಮ ಕಾವೇರಿ, ಕೃಷ್ಣಾ ಯೋಜನೆಯಲ್ಲಿ ಸಂಪೂರ್ಣ ನೀರನ್ನು ಬಳಕೆ ಮಾಡಿದರೆ 65 ಲಕ್ಷ ಎಕರೆ ನೀರಾವರಿ ಮಾಡಲು ಸಾಧ್ಯವಾಗುತ್ತದೆ. ಬಹುಶಃ ಇನ್ನು 30 ಲಕ್ಷ ಎಕರೆಗೆ ನೀರಾವರಿ ಕೆಲಸವನ್ನು ಮಾಡಿದರೆ ಅವರ ಬಾಳು ಸಂವೃದ್ಧವಾಗುವುದಿಲ್ಲವೆ? ಇವತ್ತು agriculture production ಇನ್ನು 5–10 ವರ್ಷಗಳಲ್ಲಿ ನಾವು ಆಹಾರಕ್ಕೋಸ್ಕರ ಬಿಕ್ಷಾ ಪಾತ್ರೆಯನ್ನು ಹಿಡಿದುಕೊಂಡು ಬೇರೆ ದೇಶಕ್ಕೆ ಹೋಗುವ ಪರಿಸ್ಥಿತಿಗೆ ಬರುತ್ತಿದ್ದೇವೆ. ಇವತ್ತು ನಾವು ಕೃಷಿಗೆ ಆದ್ಯತೆಯನ್ನು ಕೊಡಬೇಕು, ಕೃಷಿಗೆ ಪ್ರೋತ್ಸಾಹ ಕೊಡಬೇಕು, ಆಹಾರ ಉತ್ಪಾದನೆಗೆ ಮಹತ್ವ ಕೊಡಬೇಕು, ಅದರ ಮುಖೇನ, ಬೆಳೆಯುವ ರೈತನಿಗೆ ಪ್ರೋತ್ಸಾಹದಾಯಕವಾಗಿ ನಾವು ನಿಲ್ಲಬೇಕಾಗುತ್ತದೆ. ಇವತ್ತು ನಾವು ಮಳೆಯನ್ನು ನಂಬಿ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ, ಅದಕ್ಕೆ ನೀರು ಕೊಡುವ ರೀತಿಯಲ್ಲಿ ಯೋಚನೆ ಮಾಡಿದರೆ, ಅದಕ್ಕಿಂತ ಒಳ್ಳೆಯ ತೀರ್ಮಾನವಿಲ್ಲ, ಬಹುಶಃ ಅದಕ್ಕೆ ಹಣದ ತೊಂದರೆಯಾಗುತ್ತದೆನ್ನುವುದಿಲ್ಲ. ನಮ್ಮ ಬಜೆಟ್‌ನಲ್ಲಿ, ಆಂಧ್ರ ಪ್ರದೇಶದಲ್ಲಿ ಕಟ್ ಮಾಡಿದ ರೀತಿಯಲ್ಲಿ ಯಾವುದೋ ಒಂದು ಬಡವರ ಪರವಾಗಿರುವ ಯೋಜನೆಯನ್ನಿಟ್ಟುಕೊಂಡು ಇನ್ನು ಹೆಚ್ಚಿನ ಹಣವನ್ನು ಆ ಯೋಜನೆಗೆ ಕೊಡುವಂಥ ಕೆಲಸವನ್ನು ಮಾಡಿದರೆ, ಖಂಡಿತವಾಗಿಯೂ ಕೂಡ ಕರ್ನಾಟಕದ 6 ಕೋಟಿ ಜನರೂ ಕೂಡ ಒಪ್ಪುತ್ತಾರೆ ಎನ್ನುವ ಮಾತನ್ನು ಹೇಳುತ್ತೇನೆ. ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಕೊಡಬೇಕು, ಒಂದೇ ವರ್ಷಕ್ಕೆ ಕೊಡಬೇಕೆಂದು ನಾನು ಹೇಳುತ್ತಿಲ್ಲ. ಕನಿಷ್ಠ 10–15 ಸಾವಿರ ಕೋಟಿ ಕೊಡುವ ರೀತಿಯಲ್ಲಿ ವ್ಯವಸ್ಥೆಯಾಗಬೇಕು, ಬಜೆಟ್‌ನಿಂದ 10–12 ಸಾವಿರ ಕೋಟಿ, ಸಾಲದ ಮೂಲಕ 3–4 ಸಾವಿರ ಕೋಟಿ, ಈ ರೀತಿಯಾಗಿ ಮಾಡಿದರೆ, ಇವತ್ತು ಹತ್ತು ವರ್ಷಗಳಲ್ಲಿ ನಮ್ಮ

ಯೋಜನೆಯನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ, ಹಣವಿಲ್ಲದೆ ನಾವು ಎಷ್ಟೇ ಮಾತನಾಡಿದರೂ ಪ್ರಯೋಜನವಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಅಧ್ಯಕ್ಷರೆ, ಇಲ್ಲಿಯವರೆಗೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ 2011-12ನೇ ಸಾಲಿನ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ಧನ್ಯವಾದಗಳು. ಈಗ 2011-12ನೇ ಸಾಲಿಗೆ 85,414 ಕೋಟಿ ರೂಪಾಯಿಗಳ ಒಂದು ಅಂದಾಜಿನ ಬಜೆಟ್ ಅನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಮಂಡನೆ ಮಾಡಿದ್ದಾರೆ. ರಾಜಸ್ವ ಖಾತೆಯಿಂದ 65,034 ಕೋಟಿ, ಬಂಡವಾಳ ಖಾತೆಯಿಂದ 20,285 ಕೋಟಿ. ಆದರೆ ಈ ಸಾರಿ ಬಜೆಟ್ ಬಗ್ಗೆ ಕರ್ನಾಟಕ ರಾಜ್ಯಾದ್ಯಂತ ಬಹಳ ಮಹತ್ವಪೂರ್ಣವಾದ ವಿಷಯಗಳು ಚರ್ಚೆಗೆ ಬಂತು. ಕಾರಣ, ಈ ಸಆರಿ ಬಜೆಟ್, ನನ್ನ ಕಳೆದ 3 ವರ್ಷಗಳಲ್ಲಿ ಮಾಡಿದಂಥ ಬಜೆಟ್ ಅಲ್ಲ, ವಿಶೇಷವಾಗಿ ರೈತರ ಪರವಾದ ಬಜೆಟ್ ಅನ್ನು ಪ್ರತ್ಯೇಕವಾಗಿ ಮಂಡನೆ ಮಾಡುತ್ತೇನೆ ಎನ್ನುವ ವಿಚಾರವನ್ನು ಕರ್ನಾಟಕ ರಾಜ್ಯದ ಜನತೆಗೆ ಒಂದು ತಿಂಗಳ ಮುಂಚಿತವಾಗಿ ಹೇಳಿದಂಥ ಸಂದರ್ಭದಲ್ಲಿ ಹಸಿರು ಶಾಲು ಹಾಕಿಕೊಂಡು ರೈತರಪರವಾಗಿ ನಾನು ಇದ್ದೇನೆ ಎನ್ನು ವಿಚಾರವನ್ನು ಹೇಳಿದರೂ ಸಹ ಮರೆತಿದ್ದರು, ಈಗ ಎಲ್ಲೋ ನಿಜವಾಗಲೂ ಜ್ಞಾಪಕ ಮಾಡಿಕೊಂಡಿದ್ದಾರೆ, ಒಳ್ಳೆಯ ವಿಚಾರವೆಂದು ನಾವೆಲ್ಲಾ ಮನಸ್ಸಿನಲ್ಲಿ ಗ್ರಹಿಸಿಕೊಂಡು, ಒಂದು ಉತ್ತಮವಾದ, ರೈತ ಪರವಾದ ಬಜೆಟ್ ಈ ಸಾರಿ ಸಿಗಬಹುದೆನ್ನುವ ಆಶಾಭಾವನೆಯಲ್ಲಿ ಇಡೀ ಕರ್ನಾಟಕ ರಾಜ್ಯದ ಜನತೆ ಇದನ್ನು ತಿಳಿದುಕೊಂಡಿದ್ದರು. ಮಾಧ್ಯಮಗಳಂತು ಕೃಷಿ ಬಜೆಟ್‌ಗೆ ಉತ್ತಮವಾದ ರೀತಿಯಲ್ಲಿ ಉತ್ತೇಜನವನ್ನು ಕೊಟ್ಟರು. ಆಯಿತು, 17,857 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಹಿಂದೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳನ್ನು ಸೇರಿಸಿ ಒಂದು ಅಂದಾಜನ್ನು ಇಡುತ್ತಿದ್ದರು. ಆದರೆ ಈ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದು, ಕೃಷಿಗೆ alliance ಆಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳನ್ನು ಸೇರಿಸಿ 17,857 ಕೋಟಿ ರೂಪಾಯಿಗಳನ್ನು

ಬಜೆಟ್‌ನಲ್ಲಿರಿಸಿ ಭಾಗ-1, ಭಾಗ-2 ಎಂದು, ಭಾಗ-1 ಬಜೆಟ್ ಅನ್ನು ಕೃಷಿಗೆ ಮಂಡನೆ ಮಾಡಿದರು. ಆ ಬಜೆಟ್ ಮಂಡನೆ ಮಾಡುವ ಸಂದರ್ಭಕ್ಕೆ ನಾವೆಲ್ಲಾ ಬಹಳ ಉತ್ಸಾಹಕರಾಗಿದ್ದೇವು. ಆದರೆ ಆ ಕೃಷಿ ಬಜೆಟ್ ಅನ್ನು ಮಂಡನೆ ಮಾಡಬೇಕಾದರೆ, ನಾನು ಈ ಸಂದರ್ಭದಲ್ಲಿ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ, ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಮಾಡುತ್ತಿದ್ದೇನೆ, ಇವತ್ತು ಒಂದು ಸಂಸಾರವನ್ನೇ ಉದಾಹರಣೆಗೆ ತೆಗೆದುಕೊಳ್ಳಿ, ಬೇಕಾದಷ್ಟು ಸಂಪತ್ತು ಇರಬಹುದು, ಆ ಸಂಪತ್ತನ್ನು ವಿತರಣೆ ಮಾಡುವ, ಖರ್ಚು ಮಾಡುವ ಶಕ್ತಿ ಬೇಕಾದರೆ, ಮನೆಯಲ್ಲಿ ಜನಬೇಕು. ನಾನು ಇವತ್ತು ರಾಜ್ಯದ ಎಲ್ಲಾ ಇಲಾಖೆಗಳ ಉದಾಹರಣೆ ಕೊಡುವುದಕ್ಕೆ ಹೋಗುವುದಿಲ್ಲ, ನನ್ನ ಕ್ಷೇತ್ರದ ನನ್ನ ತಾಲ್ಲೂಕಿಗೆ ಸೀಮಿತವಾಗಿ ಹೇಳುತ್ತೇನೆ, 52 ಜನರಿದ್ದಂಥ ಕೃಷಿ ಅಧಿಕಾರಿಗಳಲ್ಲಿ ಕೇವಲ 4 ಜನರಿದ್ದಾರೆ, ನಾವೇನಾದರೂ ಕೃಷಿ ಇಲಾಖೆಗೆ ಆಕಸ್ಮಿಕವಾಗಿ ಹೋದರೆ, ಸಹಾಯಕ ನಿರ್ದೇಶಕರು, ಎಂಎಲ್ಎ ಬಂದಿದ್ದಾರೆಂದು ಎದ್ದು ಹೋಗಿ ಟೀ, ಕಾಫಿನೊ ಹೇಳುವಂತ ಪರಿಸ್ಥಿತಿ ಆ ಇಲಾಖೆಯಲ್ಲಿದೆ. ನೀವು, ಹಿಂದಿನ ಸರ್ಕಾರ ಏನು ಮಾಡುತ್ತಿತ್ತು ಎಂದು ಹೇಳಬಹುದು. ಹಿಂದಿನ ಸರ್ಕಾರದವರು ಈ ಕೆಲಸ ಮಾಡಲಿಲ್ಲವೆಂದೇ ಅವರನ್ನು ಈ ಕಡೆಗೆ ಕಳುಹಿಸಿ ನಿಮ್ಮನ್ನು ಆ ಕಡೆಗೆ ಕಳುಹಿಸಿರುವುದು. ನೀವು 3 ವರ್ಷದಿಂದ ಈ ಕೃಷಿ ಇಲಾಖೆಯಲ್ಲಿರುವ ನೌಕರರನ್ನೆಲ್ಲಾ ಜಲಾನಯನ ಇಲಾಖೆಗೆ ಹೊರಟು ಹೋಗುತ್ತಾರೆ.

ಏಕೆ ಹೋಗುತ್ತಾರೆ, ಜಲಾನಯನ ಇಲಾಖೆಯಲ್ಲಾದರೂ ನಾಲ್ಕು ಕಾಸು ಸಿಗುತ್ತದೆ. ಕೃಷಿ ಇಲಾಖೆಯಲ್ಲಿ ಏನೂ ಸಿಗುವುದಿಲ್ಲವೆಂದು ಎಲ್ಲಾ ನಮ್ಮಂತಹವರನ್ನು ಹಿಡಿದುಕೊಂಡು transfer ಅಥವಾ ಡೆಪ್ಯುಟೇಷನ್ ಮಾಡಿಸಿಕೊಂಡು ಹೊರಟು ಹೋಗುತ್ತಾರೆ. ಆ ಇಲಾಖೆಯಲ್ಲಿ ಕೆಲಸ ಇಲ್ಲದಿದ್ದರೂ ತುಂಬಿ ತುಳುಕುತ್ತಿದೆ. ಸನ್ಮಾನ್ಯ ಕೃಷಿ ಸಚಿವರು ಹಾಗೂ ಸರ್ಕಾರಕ್ಕೆ ನಾನು ಒಂದು ಮನವಿ ಮಾಡುತ್ತೇನೆ, ದಯಮಾಡಿ ಈ ಸಂಪನ್ಮೂಲವನ್ನು ಕಾಪಾಡಿ ಮೊದಲು ಕೃಷಿ ಇಲಾಖೆಗೆ ಅಧಿಕಾರಿಗಳನ್ನು ನೇಮಿಸಿ ಎನ್ನತಕ್ಕಂತಹ ಮನವಿಯನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇಲ್ಲವೆಂದರೆ ಇದು

ಕೃಷಿ ಬಜೆಟ್ ಎನಿಸಿಕೊಳ್ಳುವುದಿಲ್ಲ. ನೀವು ಸಂಪತ್ತನ್ನು ಘೋಷಣೆ ಮಾಡಬಹುದು, ಸಂಪತ್ತನ್ನು ಕೊಡಬೇಕು ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನೀವು ಅನೇಕ ಯೋಜನೆಗಳನ್ನು ಘೋಷಣೆ ಮಾಡಿದಿರಿ. ಆ ಯೋಜನೆಗಳನ್ನು ತೆಗೆದುಕೊಂಡು ರೈತರ ಮನೆ ಬಾಗಿಲಿಗೆ ಹೋಗತಕ್ಕಂತಹ ನೌಕರ ವರ್ಗದವರು ಇರಬೇಕು. ಇದನ್ನು ಯಾರು ಯೋಚನೆ ಮಾಡಿದ್ದೀರಾ? ನಾಲ್ಕು ಜನ ನೌಕರರನ್ನು ಇಟ್ಟುಕೊಂಡು ನೀವು ಬೇಕಾದಷ್ಟು ಸಂಪನ್ಮೂಲವನ್ನು ಕೊಟ್ಟರೆ ಅದು ನ್ಯಾಯವಾದ ರೀತಿಯಲ್ಲಿ ಖರ್ಚಾಗುತ್ತಾ? ಇದನ್ನು ದಯವಿಟ್ಟು ಸರ್ಕಾರ ಮೊದಲು ಆಲೋಚನೆ ಮಾಡಬೇಕು ಎನ್ನತಕ್ಕಂತಹ ಮನವಿಯನ್ನು ಹಾಗೂ ಒತ್ತಡವನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಚೆ ಪಡುತ್ತೇನೆ. ಅದರ ಜೊತೆಯಲ್ಲಿ ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಅಂದಾಜು ಬಜೆಟ್ ಮೊದಲನೇ ಅಂದಾಜು, ಎಲ್ಲವನ್ನು ಸುರಿಮಳೆಗೈಯಬಹುದು. ಆಶ್ವಾಸನೆಗಳ ಸುರಿಮಳೆಯನ್ನು ಏನು ಬೇಕಾದರೂ ನಾವು ಬಿತ್ತರಿಸಬಹುದು. ಆದರೆ ನಾವು ಏನು ಮಾಡಿದ್ದೇವೆ? ಕೊನೇ ಪಕ್ಷ ಒಂದು ಸರ್ಕಾರ ಬಂದಾಗ ಆ ಸರ್ಕಾರ ಎಷ್ಟು ಬಜೆಟನ್ನು ಮಂಡನೆ ಮಾಡಿದೆ ಅದನ್ನು ಇಂತಹ ITBT ಯುಗದಲ್ಲಿ ನೀವು ಏಕೆ ಲೆಕ್ಕಗಳನ್ನು ಹಾಗೂ ಮಾಹಿತಿಗಳನ್ನು ವರ್ಷದಿಂದ ವರ್ಷಕ್ಕೆ, ತಿಂಗಳಿನಿಂದ ತಿಂಗಳಿಗೆ ಸಾರ್ವಜನಿಕವಾಗಿ ಇಡತಕ್ಕಂತಹ ಪ್ರಯತ್ನ ಮಾಡಿಲ್ಲ? 2008–09ನೇ ಸಾಲಿನ ಮಹಾ ಲೆಕ್ಕ ಪರಿಶೋಧಕರ ವರದಿ ಈಗ ತಲುಪಿದೆ. 2009–10ನೇ ಸಾಲಿನ ಬಗ್ಗೆ ಇನ್ನು ಇವತ್ತು ಒಂದು ಪುಸ್ತಕ ಕೊಟ್ಟಿದ್ದಾರೆ. ಬೆಳಿಗ್ಗೆ ಅಜೆಂಡಾ ಜೊತೆಯಲ್ಲಿ ಬಂದಿದೆ. 2010–11ನೇ ಸಾಲಿನ ಬಗ್ಗೆ ಆರ್ಥಿಕ ಇಲಾಖೆಯವರಿಗೆ ಹೋಗಿ ಕೇಳಿದರೆ ಇದು ಎಲ್ಲಾ ನಮ್ಮ ಅಂದಾಜು, ಇದು ಅಂತಿಮ ಅಲ್ಲವೆಂದು ಹೇಳುತ್ತಾರೆ. ಈ ರೀತಿ ಯಾವುದೇ ಒಂದು ರಾಜ್ಯದ ಹಣಕಾಸಿನ ಸ್ಥಿತಿಗತಿ ಮತ್ತು ಆಯವ್ಯಯದಲ್ಲಿ ಮಂಡನೆ ಮಾಡಿದಂತಹ ವಿಚಾರಗಳು ನಿಜವಾಗಿಯೂ ಸಾರ್ವಜನಿಕರಿಗೆ ಮತ್ತು ರೈತರಿಗೆ ಮತ್ತು ನಮ್ಮೆಲ್ಲರಿಗೂ ದೊರಕುವಂತಾಗಬೇಕು. ನಾವು ಯಾರೂ ಆರ್ಥಿಕ ತಜ್ಞರು ಇಲ್ಲಿ ಬಂದಿಲ್ಲ. ನಾವೆಲ್ಲಾ ಸಾಮಾನ್ಯ ವರ್ಗದಿಂದ ಬಂದಂತಹವರು. ನಮಗೆಲ್ಲಾ

ಅರ್ಥ ಆಗಬೇಕಾದರೆ 2008-09ನೇ ಸಾಲಿನಲ್ಲಿ ನಾವು ಏನು ಆಯವ್ಯಯದಲ್ಲಿ ಮಂಡನೆ ಮಾಡಿದ್ದೇವೆ, ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಖರ್ಚಾಗಿದೆ ಎನ್ನತಕ್ಕಂಥದ್ದನ್ನು ಆ ತಿಂಗಳ ಕೊನೆಯಲ್ಲಿ ಪ್ರತಿಯೊಬ್ಬರಿಗೆ ಲೆಕ್ಕ ಸಿಗತಕ್ಕಂತಹ ಒಂದು ವ್ಯವಸ್ಥೆ ಏಕೆ ಇವತ್ತು ಆಗುವುದಿಲ್ಲ? ಅಂದು ಏನೋ ಕೂತು ಬರೆಯಬೇಕಾಗಿತ್ತು ಬಹಳ ಕಷ್ಟ ಇತ್ತು. ಆದರೆ ಇವತ್ತು ITBT ಇದೆ, ಎಲ್ಲಾ ಕಂಪ್ಯೂಟರ್ ಯುಗ ಇದೆ, ಇಂತಹ ಸಂದರ್ಭದಲ್ಲಿ ಏತಕ್ಕೋಸ್ಕರ ನೀವು ವರ್ಷದಿಂದ ವರ್ಷಕ್ಕೆ ಲೆಕ್ಕ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ, ದಯಮಾಡಿ ಇದು ಆಗಬೇಕು. ಆಗ ಈ ಆಶ್ವಾಸನೆಗಳ ಸುರಿ ಮಳೆ ಸ್ವಲ್ಪ ಮಟ್ಟಿಗೆ ತಗ್ಗುತ್ತದೆ. ಸರ್ಕಾರ ಎಚ್ಚೆತ್ತು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ಸಾರಿ ನಾನು ಇಂತಹ ಮೂಲಕ್ಕೆ ಇಷ್ಟು ಸಾವಿರ ಕೋಟಿ ರೂ. ಇಟ್ಟಿದ್ದೆ, ನನ್ನಿಂದ ಖರ್ಚು ಮಾಡುವುದಕ್ಕಾಗಲಿಲ್ಲ, ಇದು ಮತ್ತೆ ನಾನು ಈ ಬಜೆಟ್ ಮಂಡನೆ ಮಾಡುವಾಗ ಹೇಳಿದಾಗ ಜನ ನನಗೆ ಏನು ಅಂದಾರು, ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ಶಾಸಕರು ಏನು ಅಂದಾರು ಎನ್ನತಕ್ಕಂತಹ ಭಯ ಇರುತ್ತದೆ. ಆ ಭಯಕ್ಕೆ ತಕ್ಕಂತೆ ಅಯ್ಯೋ ನಾನು ಅಷ್ಟು ಹೊತ್ತಿಗೆ ಇಳಿದು ಹೋಗಿರುತ್ತೇನೆ, ಆ ವರದಿ ಬರುವ ಅಷ್ಟೊತ್ತಿಗೆ ನನ್ನ ಮುಖ್ಯ ಮಂತ್ರಿ ಅವಧಿ ಮುಗಿದು ಹೋಗಿರುತ್ತದೆ. ನಮ್ಮ ಸರ್ಕಾರದ ಅವಧಿಯೂ ಮುಗಿದು ಹೋಗಿರುತ್ತದೆ. ಬಂದವರು ಉತ್ತರ ಹೇಳಿಕೊಳ್ಳುತ್ತಾರೆ ಎಂದು ಹೇಳಿ ಹೋಗುವುದಾದರೆ ಇದು ಬಹುಶ: ತಪ್ಪಾಗುತ್ತದೆ. ಆರ್ಥಿಕ ಇಲಾಖೆಯವರು ಇದರಲ್ಲಿ ಎಚ್ಚರಿಕೆ ವಹಿಸ ಬೇಕಾಗುತ್ತದೆ. ಕಾಲಕಾಲಕ್ಕೆ ತಿಂಗಳಿಗೆ ಒಂದು ಸಾರಿ ಅಂದಾಜು ಕೊಡತಕ್ಕಂಥದ್ದು ಅಲ್ಲ, ಅಂದಾಜನ್ನು ತಿಂಗಳಿಗೆ ಕೊಡಲಿ ಆದರೆ ವರ್ಷದ ಕೊನೆಯಲ್ಲಿ ನಿಖರವಾಗಿ ಆ ಸರ್ಕಾರ ಖರ್ಚು ಮಾಡಿರತಕ್ಕಂತಹ ಹಣವನ್ನು ವ್ಯವಸ್ಥಿತವಾಗಿ ಕೊಡತಕ್ಕಂತಹ ಒಂದು ನಿಟ್ಟಿನಲ್ಲಿ ಕೆಲಸ ಆಗಬೇಕು ಎನ್ನತಕ್ಕಂತಹ ವಿಚಾರವನ್ನು ಹೇಳಿ, ಆಗ ಮಾತ್ರ ಮುಂದಿನ ಸಾರಿ ಮಂಡಿಸತಕ್ಕಂತಹ ಬಜೆಟ್‌ಗೆ ಅರ್ಥ ಬರುತ್ತದೆ. ಗೌರವ ಇರುತ್ತದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಈಗ ಕೃಷಿ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ

ಸರ್ಕಾರಕ್ಕೆ ಒಳ್ಳೆಯ ಒಂದು ಗೌರವ ಬಂದಿದೆ ಅವರು ಈ ರಾಜ್ಯದ ರೈತರನ್ನು ನೆನೆದಿದ್ದಾರೆ, ಪ್ರತ್ಯೇಕವಾದ ಬಜೆಟ್ ಅನ್ನು ಮಂಡನೆ ಮಾಡತಕ್ಕಂತಹ ವಿಚಾರವನ್ನು ನಾನು ಎಂದೂ ಟೀಕೆ ಮಾಡುವುದಿಲ್ಲ. ಆದರೆ ಅದು ರಾಜಕೀಯ ಉದ್ದೇಶಪೂರಿತವಾಗಿ ಆಗಿರಬಾರದು. ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದಾರೆ. ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರ ಮಹಾನ್ ನಾಯಕರುಗಳೆಲ್ಲಾ ಸರ್ಕಾರವನ್ನು ರಚನೆ ಮಾಡತಕ್ಕಂತಹ, ಈ ದೇಶವನ್ನು ಮುಂದೆ ಯಾವ ದಿಕ್ಕಿನಲ್ಲಿ ಕೊಂಡೊಯ್ಯಬೇಕೆಂಬ ರೀತಿಯಲ್ಲಿ ಹೋಗಿ ಕೇಳಿದಾಗ ಈ ಭಾರತ ದೇಶದ ಬೆನ್ನೆಲುಬು ಈ ರೈತ. ಸುಮಾರು ಶೇ. 80 ಭಾಗ ರೈತಾಪಿ ಜೀವನ ನಡೆಸುತ್ತಿರುವಂತಹ ಈ ರೈತರು ಇವರ ಕಣ್ಣಲ್ಲಿ ಕಣ್ಣೀರನ್ನು ತಂದರೆ ಬಹುಶ: ಈ ರಾಷ್ಟ್ರಕ್ಕೆ ಒಳ್ಳೆಯದಾಗುವುದಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಅದನ್ನು ನಾವು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ 2008-09ನೇ ಸಾಲಿನಲ್ಲಿ ಕೃಷಿ ಮತ್ತು ತೋಟಗಾರಿಕೆಗೆ ನಿಗಧಿಪಡಿಸಿದಂತಹ ಹಣ 2145.90 ಮಧ್ಯಂತರ ಹಣವೂ ಸೇರಿ. ಆದರೆ ಮಹಾ ಲೆಕ್ಕಪರಿಶೋಧಕರ ವರದಿ ಪ್ರಕಾರ ನೀವು ಖರ್ಚು ಮಾಡಿರುವಂಥದ್ದು ರೆವಿನ್ಯೂ ಹೆಡ್‌ನಲ್ಲಿ 1316 ಕೋಟಿ ರೂ. 838 ಕೋಟಿ ಹಣವನ್ನು ಅಂದಾಜಿನಲ್ಲಿ ಖರ್ಚು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಅಂದರೆ ರೈತರ ಬಗ್ಗೆ ಎಷ್ಟು ಕಾಳಜಿ ಇದೆ? ಅದಾದ ನಂತರ ಕಳೆದ 2010-11 ರಲ್ಲಿ 1752 ಕೋಟಿ ಅದರಲ್ಲಿ 764 ಕೋಟಿ ಜನವರಿ ತಿಂಗಳವರೆಗೆ ಖರ್ಚಾಗಿದೆ. ಇನ್ನೆರಡು ತಿಂಗಳುಗಳಲ್ಲಿ ಉಳಿದಂತಹ 928 ಕೋಟಿ ಹಣವನ್ನು ಎಲ್ಲಾದರೂ ಖರ್ಚು ಮಾಡುವುದಕ್ಕೆ ಸಾಧ್ಯವಿದೆಯೇ ಎನ್ನತಕ್ಕಂತಹ ವಿಚಾರವನ್ನು ಸರ್ಕಾರದ ಗಮನಕ್ಕೆ ಇವತ್ತು ತರಬೇಕಾಗಿದೆ. ಅದಕ್ಕೋಸ್ಕರ ನಾನು ಹೇಳುವುದು, ಯಾವುದೇ ಸರ್ಕಾರವಾಗಿರಲಿ, ನಾನು ಈ ಸರ್ಕಾರ ಒಂದೇ ಎಂದು ಹೇಳುವುದಿಲ್ಲ, ಯಾವುದೇ ಸರ್ಕಾರ ಇರಲಿ ಇವತ್ತು ITBT ಯುಗ ಬಂದಿದೆ, ದಯಮಾಡಿ ಸರ್ಕಾರ ಹಿಂದಿನ ವರ್ಷ ಏನು ಖರ್ಚು ಮಾಡುತ್ತದೆ ಎನ್ನುವುದನ್ನು ಬಜೆಟ್ಟಿನ ಪೂರ್ವದಲ್ಲಿ ಎಲ್ಲಾ ಸದಸ್ಯರಿಗೆ ಸಾರ್ವಜನಿಕವಾಗಿ ಸಿಗತಕ್ಕಂತಹ ವ್ಯವಸ್ಥೆ ಆಗಬೇಕು ಎನ್ನತಕ್ಕಂಥದ್ದನ್ನು ನಾನು ಒತ್ತಿ ಒತ್ತಿ ಹೇಳುತ್ತೇನೆ. ಇವತ್ತು 2008-09ನೇ ಇಸವಿಯಲ್ಲಿ ಸುಮಾರು 12,640

ಕೋಟಿ ರೂ. ಹಣ ಇವತ್ತು ಖರ್ಚಾಗದೆ ಉಳಿದಿರತಕ್ಕಂಥದ್ದು ಎಂದು ವರದಿಯಲ್ಲಿ ಕೊಟ್ಟಿದ್ದಾರೆ. ಅಂದರೆ ಭರವಸೆಗಳ ಸುರಿಮಳೆ ಸಂಪನ್ಮೂಲದ ಉತ್ಪತ್ತಿಯ ಕಡಿಮೆ ಇದಕ್ಕೆ ಕಾರಣ. ನಾವು ಭರವಸೆಗಳನ್ನು ಕೊಡಬಹುದು, ಅ ಸಂಪನ್ಮೂಲಗಳನ್ನು ಕ್ರೂಢೀಕರಿಸತಕ್ಕಂತಹ ಒಂದು ಧ್ಯೇಯ ಧೋರಣೆ ಬಹಳ ಸಮರ್ಪಕವಾಗಿರ ಬೇಕಾಗುತ್ತದೆ. ಆ ಒಂದು ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಬೇಕಾಗುತ್ತದೆ. ಪ್ರತಿಯೊಬ್ಬರು ಆ ಸಂಪನ್ಮೂಲ ಸೋರುವಿಕೆಯನ್ನು ತಡೆಗಟ್ಟಬೇಕಾಗುತ್ತದೆ. ತಡೆಗಟ್ಟತಕ್ಕಂತಹ ನಿಟ್ಟಿನಲ್ಲಿ ಪ್ರಾಮಾಣಿಕವಾದ ಕೆಲಸವನ್ನು ಸರ್ಕಾರ ಮಾಡಿದಂತಹ ಸಂದರ್ಭದಲ್ಲಿ ನಿಜವಾಗಿಯೂ ಆ ಬಜೆಟ್‌ಗೆ ಗೌರವ ಬರುತ್ತದೆ, ಹಣ ಖರ್ಚಾಗುತ್ತದೆ. ಹಣ ಖರ್ಚಾದರೆ ಏನೂ ಇಲ್ಲ, ಆದರೆ ಹಣ ಖರ್ಚು ಮಾಡಬೇಕಾದರೆ ಸಂಪನ್ಮೂಲ ಬೇಕಾಗುತ್ತದೆ. ಆದರೆ ಅದೇ ಪ್ಲ್ಯಾನ್‌ನಲ್ಲಿ ಸಾಲತೆಗೆಯುವುದರಿಂದ ಹಣ ಖರ್ಚಾಗೇ ಆಗುತ್ತದೆ. ಬಂಡವಾಳದ ಮೂಲ ಏನಿದೆ ಅದು ನಿಲ್ಲುವುದಿಲ್ಲ. ಅದು ಬಹುಶ: 80%ವರೆಗೆ ರೀಚ್ ಆಗತಕ್ಕಂತಹ ವ್ಯವಸ್ಥೆ ಇರುತ್ತದೆ. ಅದಕ್ಕೋಸ್ಕರ ಈ ಸಂದರ್ಭದಲ್ಲಿ ಇನ್ನು ಅಂಕಿ ಸಂಖ್ಯೆಗಳು ಕೊಡುತ್ತಾ ಹೋದರೆ, ಕಾಲದ ಮಿತಿ ಕಡಿಮೆ ಇರುವುದರಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತಿನ ದಿವಸ ಏನು ಕೃಷಿ ಬಜೆಟ್ ಮಂಡನೆ ಮಾಡಿದ್ದೀರಿ, ಇದಕ್ಕೆ ಪೂರಕವಾಗಿ ಕೆಲವೊಂದು ಸಲಹೆ ಸೂಚನೆಗಳನ್ನು ಗ್ರಾಮೀಣ ಪ್ರದೇಶದ ರೈತರ ಬಾಗದಿಂದ ಬಂದಂತಹ ನಾವು ಅಲ್ಲಿರತಕ್ಕಂತಹ ವಾಸ್ತವಾಂಶಗಳನ್ನು ಹೇಳುತ್ತೇವೆ.

ಗ್ರಾಮೀಣ ಪ್ರದೇಶದ ರೈತರ ಭಾಗದಿಂದ ಬಂದಿರತಕ್ಕಂಥ ನಾವು ಅಲ್ಲಿರತಕ್ಕಂಥ ವಾಸ್ತವಾಂಶಗಳನ್ನು ನೀವು ಎಷ್ಟೇ ಸಂಪನ್ಮೂಲಗಳನ್ನು ಕೊಡಬಹುದು, ಯೋಜನೆಗಳನ್ನು ತರಬಹುದು, ಆದರೆ ಆ ಯೋಜನೆಗಳು ಸಮರ್ಪಕವಾಗಿ ಗ್ರಾಮೀಣ ಪ್ರದೇಶದಲ್ಲಿ ರೈತರ ಕೈಗೆ ಸಿಗುತ್ತಿವೆಯೆ, ರೈತರ ಬದುಕಿನಲ್ಲಿ ಆ ಯೋಜನೆಗಳು ಎಷ್ಟರಮಟ್ಟಿಗೆ ಕೆಲಸ ಮಾಡಿವೆ ಎನ್ನತಕ್ಕಂಥದ್ದರ ಬಗ್ಗೆ ಕೆಲವೊಂದು ವಿಚಾರಗಳನ್ನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತು ರೈತರ ಬೆಳೆಗೆ ಸೂಕ್ತವಾಗಿರತಕ್ಕಂಥ ಬೆಲೆಯನ್ನು ಕೊಡಬೇಕು. ಆ ಬೆಲೆಯನ್ನು ಕೊಡತಕ್ಕಂಥ ನಿಟ್ಟಿನಲ್ಲಿ ಸರ್ಕಾರದ ಪಾತ್ರವೇನು?

ಸರ್ಕಾರ ಯಾವ ರೀತಿ ಅದರಲ್ಲಿ ಪ್ರವೇಶ ಮಾಡಬೇಕು. ಯಾವಾಗ ಆ ಬೆಲೆಯ ನಿಯಂತ್ರಣವನ್ನು ರೈತರಿಗೆ ನಿಜವಾದಂಥ ರೀತಿಯಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ ರೈತ ಬೆಳೆದಂಥ ಬೆಳೆಯನ್ನು ಮಾರುಕಟ್ಟೆಗೆ ತಂದಂಥ ಸಂದರ್ಭದಲ್ಲಿ ಏನು ಆಗಬೇಕು ಎಂದು ಹೇಳಬಯಸುತ್ತೇನೆಂದರೆ, ಉದಾಹರಣೆಗೆ ರೈತ ತಾನು ಬೆಳೆದ ಕೊಬ್ಬರಿಯನ್ನು ಮಾರುಕಟ್ಟೆಗೆ ಮಾರಲು ತರುತ್ತಾನೆಂದಿಟ್ಟುಕೊಳ್ಳೋಣ. ಅಲ್ಲಿ ಆಗ ಕೊಳ್ಳತಕ್ಕಂಥವರ ಬೇಡಿಕೆಯ ಸಂಖ್ಯೆ ಅಂದು ಕಡಿಮೆ ಇರುತ್ತದೆ. ಆ ಸಂದರ್ಭದಲ್ಲಿ ಅಲ್ಲಿರುವವರು ರೈತರ ಕೊಬ್ಬರಿಯನ್ನು ಬೇಕಾಬಿಟ್ಟಿ ಹರಾಜು ಹಾಕತಕ್ಕಂಥ ವ್ಯವಸ್ಥೆ ಇಂದು ಇದೆ. ಅದಕ್ಕೋಸ್ಕರ ಸರ್ಕಾರದವರಾದ ನೀವು ಬೆಂಬಲ ಬೆಲೆಯನ್ನು ಘೋಷಣೆ ಮಾಡಿ. ಆ ಬೆಂಬಲ ಬೆಲೆಯನ್ನು ಘೋಷಣೆ ಮಾಡತಕ್ಕಂಥದ್ದರಲ್ಲಿ ಸ್ವಲ್ಪ ನೀವು ಬಹಳ ಉದಾರವಾದಂಥ ನೀತಿಯನ್ನು ಅನುಸರಿಸಬೇಕು. ಮಾರುಕಟ್ಟೆಯಲ್ಲಿರತಕ್ಕಂಥ ಬೆಲೆಗಿಂತ ಹೆಚ್ಚು ಬೆಲೆ ನಿಗದಿ ಮಾಡಬೇಕು. ಅದನ್ನು ಬಿಟ್ಟು ನೀವು ಕೇಂದ್ರ ಸರ್ಕಾರವನ್ನು ಕೇಳಿ ನೀವು ನಿರ್ಧಾರ ತೆಗೆದುಕೊಳ್ಳುವುದರೊಳಗೆ ಅಲ್ಲೆಲ್ಲಾ ರೈತರಿಂದ ಮಾಲನ್ನು ಬಿಕರಿ ಮಾಡಾಗಿರುತ್ತದೆ. ಆದುದರಿಂದ ಅವನಿಗೆ ಸೂಕ್ತವಾದಂಥ ಬೆಲೆಯನ್ನು ಕೊಡುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. ಅದರಲ್ಲಿಯೂ ತೋಟಗಾರಿಕಾ ಬೆಳೆಗಳಲ್ಲಿ, ಉದಾಹರಣೆಗೆ ಹೇಳಬೇಕೆಂದರೆ ರೈತ ಟಮೋಟೋ ಹಣ್ಣನ್ನು ಬೆಳೆಯುತ್ತಾನೆ. ಬೆಳೆದ ಟಮೋಟೋ ಹಣ್ಣನ್ನು ಮಾರುಕಟ್ಟೆಗೆ ತರುತ್ತಾನೆ. ಮಾಲು ಕಡಿಮೆಯಾದ ತಕ್ಷಣ ಮಾರುಕಟ್ಟೆಯಲ್ಲಿ ಇದ್ದಕ್ಕಿದ್ದ ಹಾಗೆ ಒಂದು ಕೆ.ಜಿ. ಟಮೋಟೋ ಹಣ್ಣಿಗೆ 50 ರೂಪಾಯಿ ಆಗಿಬಿಡುತ್ತದೆ. ಆಗ ರೈತ ಇದನ್ನು ತಿಳಿದು ಬೇಕಾದಷ್ಟು ಟಮೋಟೋ ಬೆಳೆಯನ್ನು ಬೆಳೆದುಬಿಡುತ್ತಾನೆ. ಕಡೆಗೆ ಅವನು ಟಮೋಟೋ ಹಣ್ಣನ್ನು ಮಾರುಕಟ್ಟೆಗೆ ತಂದು ಮಾರಬೇಕೆಂದಾಗ ಟಮೋಟೋ ಹಣ್ಣಿನ ಬೆಲೆ ಒಂದು ಕೆ.ಜಿ.ಗೆ 5 ರೂ ನಿಂದ 6 ರೂ.ಗೆ ಬಂದಿರುತ್ತದೆ. ಆತನಿಗೆ ಟ್ರ್ಯಾಕ್ಟರ್ ಬಾಡಿಗೆ ಕೂಡ ಸಿಗುವುದಿಲ್ಲ. ಇದರಿಂದಾಗಿ ಟಮೋಟೋ ಹಣ್ಣನ್ನು ದಾರಿಯುದ್ದಕ್ಕೂ ಸುರಿದು ಹೋಗಿರುತ್ತಾನೆ. ಅದಕ್ಕೋಸ್ಕರ ನೀವೇನು ಮಾಡಬೇಕೆಂದರೆ, ಕರ್ನಾಟಕ

ರಾಜ್ಯದಲ್ಲಿ ಇವತ್ತು ಟಮೋಟೋ ಹಣ್ಣಿಗೆ ಎಷ್ಟು ಬೇಡಿಕೆ ಇದೆಯೋ ಆ ಬೇಡಿಕೆ ಬಗ್ಗೆ ಸಮೀಕ್ಷೆಯನ್ನು ನಡೆಸಬೇಕು. ಇದರ ಜೊತೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನಮ್ಮ ಈ ಟಮೋಟೋ ಹಣ್ಣಿಗೇನಾದರೂ ಬೇಡಿಕೆ ಇದೆಯೆ ಎನ್ನುತಕ್ಕಂಥದ್ದರ ಬಗ್ಗೆ ತಿಳಿದುಕೊಂಡು ನಿರ್ಧಿಷ್ಟವಾದಂಥ ಪ್ರಮಾಣದಲ್ಲಿ ರೈತರಿಗೆ ಇವತ್ತು ನೀವು ಇಷ್ಟು ಎಕರೆಯಲ್ಲಿ ಟಮೋಟೋವನ್ನು ಬೆಳೆಯುವುದರ ಬದಲು ನೀವು ಇಷ್ಟೇ ಎಕರೆಯಲ್ಲಿ ಬೆಳೆಯಿರಿ ಎಂದು ಹೇಳಬೇಕು. ಸಾಮಾನ್ಯವಾಗಿ ಯಾವ ಯಾವ ಜಿಲ್ಲೆಗಳಲ್ಲಿ ಟಮೋಟೋ ಹಣ್ಣನ್ನು ಬೆಳೆಯಲಾಗುತ್ತದೆಯೋ ಅವರಿಗೆ ಕೃಷಿ ಅಧಿಕಾರಿಗಳ ಮುಖಾಂತರ ಮಾಹಿತಿಯನ್ನು ಕೊಡಿಸಿ, ನೀವು ಹೇರಳವಾಗಿ ಟಮೋಟೋ ಬೆಳೆಯನ್ನು ಹಾಕಬೇಡಿ, ಕೇವಲ ಇಷ್ಟು ಪ್ರದೇಶದಲ್ಲಿ ಮಾತ್ರ ಟಮೋಟೋ ಬೆಳೆಯಿರಿ ಎನ್ನತಕ್ಕಂಥ ಒಂದು ಜಾಗೃತಿಯನ್ನು ರೈತರಿಗೆ ನೀಡತಕ್ಕಂಥ ಕೆಲಸವನ್ನು ಮಾಡಿ. ಸಾಧ್ಯವಾದರೆ ಈ ಬಗ್ಗೆ ಒಂದು ಕಾನೂನನ್ನಾದರೂ ಅಳವಡಿಸಿ. ಬೆಳೆಯ ನೀತಿಯನ್ನು ತಂದು ದಯಮಾಡಿ ಇದಕ್ಕಿಂತ ಹೆಚ್ಚಿಗೆ ಬೆಳೆಯಬೇಡಿ, ಎಷ್ಟು ಬೇಡಿಕೆ ಇದೆಯೋ ಅಷ್ಟು ಬೇಡಿಕೆಗೆ ತಕ್ಕಂತೆ ಬೆಳೆಯನ್ನು ಬೆಳೆಯಿರಿ, ಒಂದು ವೇಳೆ ನೀವು ಬೆಳೆದಂಥ ಬೆಳೆಗೆ ಏನಾದರೂ ಮಾರುಕಟ್ಟೆ ಸಿಗದಿದ್ದರೆ ಸರ್ಕಾರದವರಾದ ನಾವು ಮಧ್ಯೆ ಪ್ರವೇಶ ಮಾಡುತ್ತೇವೆ ಮತ್ತು ಆ ಬೆಳೆಯನ್ನು ಕೊಂಡುಕೊಳ್ಳುತ್ತೇವೆ ಎನ್ನತಕ್ಕಂಥ ಧೈರ್ಯವನ್ನು ಸರ್ಕಾರದವರಾದ ನೀವು ರೈತರಲ್ಲಿ ತುಂಬಬೇಕು. ಆಗ ಮಾತ್ರ ಈ ಆವರ್ತ ನಿಧಿ ಕೆಲಸ ಮಾಡುತ್ತದೆ. ಆವರ್ತ ನಿಧಿಯನ್ನು 1000 ಕೋಟಿ ಎಂದು ಇಡತಕ್ಕಂಥದ್ದು ಮುಖ್ಯವಲ್ಲ. ಇದನ್ನು ಬಹಳ ಉತ್ತಮ ಮಟ್ಟದಲ್ಲಿ ಉಪಯೋಗ ಮಾಡಿ ಆ ಒಂದು ಆವರ್ತ ನಿಧಿಗೆ ಬೆಲೆ ಬರುವಂಥ ನಿಟ್ಟಿನಲ್ಲಿ ಈ ಒಂದು ಕೆಲಸವನ್ನು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಬೆಲೆಯ ನೀತಿ ಬಗ್ಗೆ ಹೆಚ್ಚಿನ ರೀತಿಯ ಒಂದು ವ್ಯವಸ್ಥೆಯನ್ನು ಮಾಡಿದರೆ ಮಾತ್ರ ರೈತ ಬದುಕುವುದಕ್ಕೆ ಸಾಧ್ಯ ವಾಗುತ್ತದೆ. ಇದರ ಜೊತೆಗೆ ಆ ರೈತರಿಗೆ ಬೆಳೆ ವಿಮೆಯನ್ನು ಕೊಡತಕ್ಕಂಥ ಒಂದು ಕಾನೂನನ್ನು ಕಡ್ಡಾಯವಾಗಿ ತರಬೇಕು. ಈಗ ಕೇಂದ್ರ ಸರ್ಕಾರ ಕಡ್ಡಾಯವಾಗಿ ಸ್ವಲ್ಪ ಮಟ್ಟಿಗೆ ಕೊಡುತ್ತದೆ. ಅದೇ ರೀತಿ

ರಾಜ್ಯ ಸರ್ಕಾರವೂ ಕೂಡ ರೈತನ ಬೆಳೆ ಅನಿವಾರ್ಯವಾಗಿ ಹಾಳಾದಂಥ ಸಂದರ್ಭದಲ್ಲಿ ಆ ಬೆಳೆ ವಿಮೆಯನ್ನು ಕೊಡತಕ್ಕಂಥ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಆ ರೈತನಿಂದ ಹಣವನ್ನು ಕಟ್ಟಿಸಿಕೊಳ್ಳತಕ್ಕಂಥದ್ದನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎನ್ನತಕ್ಕಂಥದ್ದು ನಮ್ಮ ಒಂದು ಸಲಹೆಯಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬೆಲೆಯ ನಿಯಂತ್ರಣವನ್ನು ನಾವು ನೋಡಬೇಕಾದರೆ ಮಾರುಕಟ್ಟೆಯ ಏರುಪೇರನ್ನು ಕಂಡುಹಿಡಿಯಬೇಕಾದರೆ ಮತ್ತು ಅದನ್ನು ಕಂಟ್ರೋಲ್ ಮಾಡಬೇಕಾದರೆ ಇಂದು ಶೀತಲ ಕೇಂದ್ರಗಳು ಬಹಳ ಮುಖ್ಯ. ಸಂಸ್ಕರಣ ಘಟಕಗಳು ಬಹಳ ಮುಖ್ಯ. ಆ ಶೀತಲ ಕೇಂದ್ರಗಳನ್ನು ನೀವು ಅತಿ ಹೆಚ್ಚು ಮಾಡಬೇಕು. ಒಂದು ಹೋಬಳಿಗೆ ಒಂದು ಶೀತಲ ಕೇಂದ್ರವನ್ನು ಕಟ್ಟಿಸ ಬೇಕಾಗುತ್ತದೆ. ರೈತ ಬೆಳೆದಂಥ ಬೆಳೆಯನ್ನು ಮಾರುಕಟ್ಟೆಗೆ ತಂದಂಥ ಸಂದರ್ಭದಲ್ಲಿ ಅವತ್ತು ಉತ್ತಮವಾದಂಥ ಬೆಲೆ ಇಲ್ಲದಿದ್ದರೆ ಅವತ್ತಿಗೆ ಅವನ ಖರ್ಚಿಗೆ ಹಣವನ್ನು ಕೊಟ್ಟು, ಅವನು ಆ ಶೀತಲ ಕೇಂದ್ರದಲ್ಲಿ ಬೆಳೆಯನ್ನು ಇಟ್ಟು ಮಾರುಕಟ್ಟೆಗೆ ಹೋಗಿ ಅಲ್ಲಿ ಬೆಲೆಯ ವ್ಯತ್ಯಾಸಗಳನ್ನು ಗಮನಿಸಿ ಪುನ: ಮಾರುಕಟ್ಟೆಗೆ ಬಂದು ಒಳ್ಳೆಯ ಬೆಲೆಗೆ ತನ್ನ ಮಾಲನ್ನು ಮಾರತಕ್ಕಂಥ ರೀತಿಯಲ್ಲಿ ಒಂದು ವ್ಯವಸ್ಥೆಯನ್ನು ಮಾಡಲು ನೀವು ಬಹಳ ಸೂಕ್ಷ್ಮವಾಗಿ ಈ ವಿಚಾರವನ್ನು ಗಮನಿಸಿ ಮಾಡಬೇಕಾಗುತ್ತದೆ. ಇಂದು ಕೃಷಿ ಮಾರುಕಟ್ಟೆಗಳ ಬಗ್ಗೆ ಚೆನ್ನಾಗಿ ನಡೆಯುತ್ತಿದೆಯೆಂದು ತಾವು ಹೇಳುತ್ತೀರಿ. ಆದರೆ ಇಂದು ಕೃಷಿ ಮಾರುಕಟ್ಟೆಗಳಲ್ಲಿ ಒಳ್ಳೆಯ ಕೆಲಸಗಳು ನಡೆಯುತ್ತಿಲ್ಲ. ಎಲ್ಲ ಹಣವನ್ನು ಉಪಯೋಗ ಮಾಡಿ ಎಂಥದ್ದೋ Rural sandy ಎಂದು ಕಟ್ಟಿದ್ದಾರೆ. ಅಲ್ಲಿ ಇಂದು ಭಿಕ್ಷುಕರು ವಾಸ ಮಾಡುತ್ತಿದ್ದಾರೆ. ಆ ಮಾರುಕಟ್ಟೆಯೇ ಒಂದು ದಿನವೂ ನಡೆಯುತ್ತಿಲ್ಲ. ಎಲ್ಲ ಸದಸ್ಯರಿಗೆ ಏನು ಬೇಕೋ ಆ ಸದಸ್ಯರಿಗೆ ಬೇಕಾದಂತೆ ನನ್ನ ಕ್ಷೇತ್ರದಲ್ಲಿ ಕಟ್ಟಬೇಕು, ನನ್ನ ವಾರ್ಡಿನಲ್ಲಿ ಕಟ್ಟಬೇಕು ಎಂದು ಹೇಳಿ ತೆಗೆದುಕೊಂಡು ಹೋಗಿ ಇಂದು ಅಲ್ಲಿ ಯಾವ Rural sandy ಯೂ ಇಲ್ಲ. ಉದಾಹರಣೆಗೆ ಹೇಳಬೇಕೆಂದರೆ, ನನ್ನ ಕ್ಷೇತ್ರದಲ್ಲಿಯೇ ಎಂಟು ಕಡೆ ಹನ್ನೆರಡು, ಹನ್ನೆರಡು ಲಕ್ಷ ರೂ.ಗಳನ್ನು ಹಾಕಿ ಕಟ್ಟಿ ಇವತ್ತು ಯಾರೋ ಭಿಕ್ಷುಕರು ಬಂದು

ಅಲ್ಲಿ ವಾಸ ಮಾಡುತ್ತಿದ್ದಾರೆ. ಯಾವ ರೈತನೂ ಅದನ್ನು ಉಪಯೋಗಿಸುವುದಕ್ಕೆ ಆಗುತ್ತಿಲ್ಲ. ಕೃಷಿ ಮಾರುಕಟ್ಟೆಯನ್ನು ಸ್ವಲ್ಪ ಹಿಡಿತಕ್ಕೆ ತೆಗೆದುಕೊಳ್ಳಿ. ಕೃಷಿ ಮಾರುಕಟ್ಟೆಯಲ್ಲಿ ಆಗುತ್ತಿರತಕ್ಕಂಥ ಅನ್ಯಾಯವನ್ನು ತಪ್ಪಿಸಿ. ಅದರಲ್ಲಿ ಬರತಕ್ಕಂಥ ಸೆಸ್‌ಗಳನ್ನೆಲ್ಲಾ ಅಲ್ಲಿಯ ಮಂಡಳಿ, ಡೈರೆಕ್ಟರ್‌ಗಳು ನಿಜವಾಗಿಯೂ ದುರುಪಯೋಗ ಪಡಿಸಿಕೊಂಡು ಈಗ ಅವರು ಊರಿಗೊಂದು ಗೋದಾಮನ್ನು ಕಟ್ಟುತ್ತಾರಂತೆ. ಅದನ್ನು ಮೇನ್‌ಟೇನ್ ಮಾಡುವವರು ಯಾರು? ಇವರೇನೋ ಗೋದಾಮನ್ನು ಕಟ್ಟಿ ಹೋಗುತ್ತಾರೆ. ಆದರೆ ಅದನ್ನು ಮುಂದೆ ನೋಡುವವರು ಯಾರು? ಸುಮ್ಮಸುಮ್ಮನೆ ಇವರಿಗೆ ಬೇಕಾದ ಕಾನೂನನ್ನು ಮಾಡುತ್ತಿದ್ದಾರೆ. ಅದಕ್ಕೆ ಸ್ವಲ್ಪ ತಡೆಯೊಡ್ಡಿ. ಒಂದು ಉತ್ತಮವಾದಂಥ ವ್ಯವಸ್ಥೆಯನ್ನು ತರಬೇಕು. ಆ ಮಾರುಕಟ್ಟೆಯಲ್ಲಿರತಕ್ಕಂಥ ವ್ಯತ್ಯಾಸಗಳು, ಅದರಲ್ಲಾಗತಕ್ಕಂಥ ಲೋಪದೋಷಗಳು, ಅಲ್ಲೆಲ್ಲಾ ಸೆಸ್ ಇಲ್ಲದೇ ಪದಾರ್ಥಗಳು ಹೋಗತಕ್ಕಂಥದ್ದು, ಎಲ್ಲವೂ ಅಡ್ಜಸ್ಟ್‌ಮೆಂಟ್‌ಗಳು, ಹೀಗೆ ಇದನ್ನೆಲ್ಲವನ್ನು ನಿಲ್ಲಿಸತಕ್ಕಂಥದ್ದರಲ್ಲಿ ಸರ್ಕಾರ ಭಾಗಿಯಾದರೆ ಆ ರೈತರಿಂದ ಬರತಕ್ಕಂಥ ಸೆಸ್‌ನಿಂದಲೇ, ಕರ ವಸೂಲಿಯಿಂದಲೇ ಆ ರೈತರ ಬದುಕನ್ನು ಅತಿ ಹೆಚ್ಚಿನ ಮಟ್ಟದಲ್ಲಿ ಉದ್ಧಾರ ಮಾಡಬಹುದು. ಅವರಿಗೆ ಬೇಕಾದ ಎಲ್ಲ ಮೂಲಭೂತ ಸೌಲಭ್ಯಗಳನ್ನು ಅಲ್ಲಿ ಕಲ್ಪಿಸಿಕೊಡಬಹುದು. ಆ ಒಂದು ನಿಟ್ಟಿನಲ್ಲಿ ಇಂದು ಆ ಕೃಷಿ ಮಾರುಕಟ್ಟೆ ಏನು ಒಂದು ಅವ್ಯವಸ್ಥೆಗೆ ಗುರಿಯಾಗಿದೆಯೋ ಅದನ್ನು ಒಂದು ಉತ್ತಮ ವ್ಯವಸ್ಥೆಗೆ ತರತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಭಾಗವಹಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಭಿತ್ತನೆ ಬೀಜದ ಬಗ್ಗೆ ಹೇಳಬೇಕೆಂದರೆ, ನಾನು ಬಹಳ ಸಲ ಈ ಸದನದಲ್ಲಿ ಈ ಬಗ್ಗೆ ಹೇಳಿದ್ದೇನೆ. ಅದನ್ನು ಯಾರು ಗಮನಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸೂರ್ಯಕಾಂತಿಯ ಬಗ್ಗೆ ರಾಣೆಬೆನ್ನೂರಿನಲ್ಲಿ ಏನಾಗಿದೆ ಎಂಬ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ರಾಣೆಬೆನ್ನೂರಿಗೆ ಕಂಪನಿಯವನು ಹೋಗಿ ಆ ರೈತನ ಜೊತೆ ಒಂದು ನೂರು ರೂಪಾಯಿ ರೇಟ್‌ನಂತೆ ಒಂದು ಕೆ.ಜಿ.ಗೆ ಮಾತನಾಡಿ ಅಲ್ಲಿ ಬೆಳೆಯನ್ನು ಬೆಳೆಸುತ್ತಾನೆ. ಅವನ ಮನೆ ಬಾಗಿಲಿಗೆ ಮಿಶನ್ ತೆಗೆದುಕೊಂಡು ಹೋಗುತ್ತಾನೆ. ಅಲ್ಲಿಗೆ ಹೋಗಿ ಜೆಳ್ಳು ಎಷ್ಟಿದೆಯೋ ಅದನ್ನು

ಎಸೆದು ಗಟ್ಟಿ ಬೀಜವನ್ನು ತೆಗೆದುಕೊಂಡು ಅಲ್ಲಿಯೇ ಪ್ಯಾಕ್ ಮಾಡುತ್ತಾನೆ. ಕಾವೇರಿಯಂತಲೋ, ಗಂಗಾ–ಕಾವೇರಿಯಂತಲೋ ಅವನು ಏನು ಸೀಲ್ ಇಟ್ಟುಕೊಂಡಿರುತ್ತಾನೋ ಅದರ ಸೀಲ್ ಒತ್ತುತ್ತಾನೆ. ಆ ಸೀಲ್ ಒತ್ತುಕೊಂಡು ತಂದು ಸ್ವಾಮಿ ಅದನ್ನು ಎಷ್ಟಕ್ಕೆ ಮಾರುತ್ತಾನೆ ಗೊತ್ತೆ? ಆ ರೈತನಿಗೆ ಕೊಡುವುದು ಒಂದು ಕೆ.ಜಿ.ಗೆ ನೂರು ರೂಪಾಯಿ. ಆದರೆ ಇಲ್ಲಿ ತಂದು ಮಾರುವುದು 500 ರಿಂದ 600 ರೂಪಾಯಿ ಕೆ.ಜಿ.ಗೆ. ಯಾವುದಕ್ಕೆ ಬೇಡಿಕೆ ಇರುತ್ತದೋ ಅದಕ್ಕೆ 500 ರಿಂದ 600 ರೂಪಾಯಿ ಒಂದು ಕೆ.ಜಿ.ಗೆ, ಅವನು ಅಲ್ಲಿಂದ ಇಲ್ಲಿಗೆ ತಂದು ಇಷ್ಟು ರೇಟ್‌ಗೆ ಮಾರುತ್ತಾನೆ. ಇವನೇನು ಬೆಳೆಯನ್ನು ಬೆಳೆಯುವುದಿಲ್ಲ. ಎಲ್ಲವನ್ನೂ ರೈತನೇ ಬೆಳೆಯುವುದು. Inspection charge ಇದ್ದರೆ ಅದನ್ನೂ ಕೂಡ ರೈತನಿಗೆ ಕೊಡಬೇಕಾದ ದುಡ್ಡಿನಲ್ಲಿ ಮುರಿದುಕೊಳ್ಳುತ್ತಾನೆ. ರೈತನಿಗೆ ಮೊದಲೇ ದುಡ್ಡು ಏನಾದರೂ ಕೊಟ್ಟಿದ್ದರೆ ಅದಕ್ಕೆ ಹಾಕಿದ ಬಡ್ಡಿಯನ್ನು ಕೂಡ ಆ ಕಂಪನಿಯವನು ರೈತನಿಗೆ ಕೊಡಬೇಕಾದ ದುಡ್ಡಿನಲಿ ಮುರಿದುಕೊಳ್ಳುತ್ತಾನೆ. ಆದರೆ ಈ ಸಬ್ಸಿಡಿಯನ್ನು ತಾವು ಹೇಗೆ ಕೊಡುತ್ತೀರಿ.? ನೀವು ಘೋಷಣೆ ಮಾಡಿಬಿಟ್ಟರಿ 50% ಸಬ್ಸಿಡಿಯೆಂದು. ಇಲ್ಲಿ ನಾವು ಬಹಳ ದೊಡ್ಡ ದೊಡ್ಡ ವಿಶ್ವವಿದ್ಯಾನಿಲಯಗಳನ್ನು ಇಟ್ಟುಕೊಂಡಿದ್ದೇವೆ. ನಮ್ಮ ವಿಜ್ಞಾನಿಗಳು ತಯಾರು ಮಾಡಿದಂಥ L1 ಬೀಜ ಎಂದು ಇಟ್ಟುಬಿಡುತ್ತೀರಿ. ಅದಕ್ಕೆ 160 ರೂಪಾಯಿಯೆಂದು ಬೆಲೆ ನಿಗದಿ ಮಾಡುತ್ತೀರಿ. 160 ರೂಪಾಯಿ ಬೆಲೆ ನಿಗದಿ ಮಾಡಿ 50 % ಸಬ್ಸಿಡಿಯೆಂದು 80 ರೂಪಾಯಿ ಕೊಡುತ್ತೀರಿ. ಅದನ್ನು 500 ರೂಪಾಯಿಗೂ ಕೂಡ 80 ರೂಪಾಯಿ ಸಬ್ಸಿಡಿಯನ್ನೇ ಕೊಡುತ್ತೀರಿ. ಆ ರೈತರಿಗೆ ಸಿಕ್ಕಿದ್ದು ಎಷ್ಟು ಸ್ವಾಮಿ? ಎಷ್ಟು ಪರ್ಸೆಂಟ್ ಸಿಗುತ್ತದೆ? ದಯಮಾಡಿ ಯೋಚನೆ ಮಾಡಿ. ಕಂಪನಿಯವನು 500 ರೂಪಾಯಿಗೆ ಮಾರಿದರೆ ರೈತನಿಗೆ ನೀವು 50 % ಸಬ್ಸಿಡಿ ಎಂದರೆ 250 ರೂಪಾಯಿ ಕೊಡಬೇಕು. ಇಲ್ಲದಿದ್ದರೆ ಆ ಬೀಜವನ್ನು ರದ್ದು ಮಾಡಿ. ನಮ್ಮ ಕೃಷಿ ವಿಜ್ಞಾನಿಗಳು ಯಾವ ಬೀಜವನ್ನು ಹೇಳಿರುತ್ತಾರೋ ಆ ಬೀಜವನ್ನೇ ಭಿತ್ತಿ ಎಂದು ನಮ್ಮ ರೈತರಿಗೆ ಹೇಳಿ. ಅದನ್ನು ಬಿಟ್ಟು L 1 ಎಂದು ಹೇಳಿ 160 ರೂಪಾಯಿಯಂತೆ ಕೆ.ಜಿ.ಗೆ ಫಿಕ್ಸ್ ಮಾಡುತ್ತೀರಿ. ಅದಕ್ಕೆ 80 ರೂಪಾಯಿ ಸಬ್ಸಿಡಿ

ಎಂದು ಹೇಳುತ್ತೀರಿ. 80 ರೂಪಾಯಿ ಸಬ್ಸಿಡಿಯನ್ನು ಕೆ.ಜಿ.ಗೆ 500 ರೂಪಾಯಿಯಂತೆ ಬೀಜವನ್ನು ಮಾರುವವನಿಗೆ ಕೊಟ್ಟರೆ ಎಷ್ಟು ಪರ್ಸೆಂಟ್ ಸಬ್ಸಿಡಿಯನ್ನು ರೈತರಿಗೆ ನೀವು ಕೊಟ್ಟಂತಾಯಿತು ಸ್ವಾಮಿ? 50% ಕೊಟ್ಟಿರೆ? ಎಷ್ಟು ಪರ್ಸೆಂಟ್ ಲೆಕ್ಕ ಹಾಕಿ. ಕೊಡಿ, 500 ರೂಪಾಯಿಯಂತೆ ಕೊಡುವವನಿಗೂ 250 ರೂಪಾಯಿ ಸಬ್ಸಿಡಿ ಕೊಡಿ.

ಆಗ 50% ಸಬ್ಸಿಡಿ ಆಗುವುದು. ನೀವು ಎಲ್–1 ಏಕೆ ಫಿಕ್ಸ್ ಮಾಡುತ್ತೀರಿ? ನಮ್ಮ ವಿಜ್ಞಾನಿಗಳು ಬೆಳೆದಂತಹ ಸೂರ್ಯಕಾಂತಿ ಬೀಜವನ್ನು ನಮ್ಮ ರೈತರು ಹಾಕುವುದಕ್ಕೆ ತಯಾರಿಲ್ಲ. ಏಕೆಂದರೆ ನಿಮ್ಮಿಂದ ಪ್ರಚಾರವಿಲ್ಲ. ಅದರಿಂದ ಉತ್ಪತ್ತಿ ಜಾಸ್ತಿ ಬರುತ್ತದೆಂದು ಹೇಳುವಂತಹ ಧೈರ್ಯವಿಲ್ಲ. ಅದಕ್ಕೋಸ್ಕರ ದಯಮಾಡಿ ನಾನು ಹೇಳುತ್ತಿದ್ದೇನೆ, ನೀವು ಎಷ್ಟು ರೂಪಾಯಿಗಾದರೂ ಮಾರಿ, ಸಾವಿರ ರೂಪಾಯಿಗಾದರೂ ಮಾರಿ, ನಮಗೆ ಅದು ಗೊತ್ತಿಲ್ಲ, ಆದರೆ ನೀವು 50% ಸಬ್ಸಿಡಿ ಕೊಡಿಸಿ. ಇದರ ಬಗ್ಗೆ ನಾನು ಹತ್ತಾರು ಬಾರಿ ಈ ಸದನದಲ್ಲಿ ಮಾತನಾಡಿದರೂ ಕೂಡ ಸರ್ಕಾರದಲ್ಲಿ ನೀವ್ಯಾರೂ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ನೀವು 75% ಕೊಟ್ಟರಿ, ಎಲ್–1 ಬಿಡಿ. ನೀವು ನಿಮ್ಮ ವಿಶ್ವವಿದ್ಯಾಲಯದ ಅಧಿಕಾರಿಗಳು ತಯಾರು ಮಾಡಿದಂತಹ ಬೀಜಕ್ಕೆ 160 ರೂಪಾಯಿ ರೇಟ್ ಇಟ್ಟು 50% ಸಬ್ಸಿಡಿ ಕೊಡುತ್ತೇವೆಂದು ಹೇಳಿ 80 ರೂಪಾಯಿ ಫಿಕ್ಸ್ ಮಾಡುವುದನ್ನು ಬಿಡಿ. ಆದರೆ 500 ರೂಪಾಯಿ ರೇಟ್ ಇರುವ ಬೀಜ ಕೊಂಡು ಹಾಕುವಾಗ ನೀವು 80 ರೂಪಾಯಿ ಕೊಟ್ಟರೆ ಎಷ್ಟು ಪರ್ಸೆಂಟ್ ಸಬ್ಸಿಡಿ ಬರುತ್ತದೆ ಸ್ವಾಮಿ? ಇದು ರೈತನನ್ನು ಉದ್ಧಾರ ಮಾಡುವಂತಹ ಕೆಲಸವೇ? ಇದು ಕೃಷಿ ಬಜೆಟ್? ಇದು ಕೃಷಿ ನೀತಿಯೇ? ನಾವು ಟೀಕೆ ಮಾಡಬೇಕು ಎಂದು ಹೇಳುತ್ತಿಲ್ಲ. ನಾನು ರಾಣೆಬೆನ್ನೂರಿಗೆ ಹೋಗಿ, ವಾಸ್ತವಾಂಶವನ್ನೆಲ್ಲಾ ತಿಳಿದುಕೊಂಡು, ಅಲ್ಲಿಂದಲೇ ಬ್ರಾಂಡ್ ಇಲ್ಲದಿರುವ ಹತ್ತು ಚೀಲ ಸೂರ್ಯಕಾಂತಿ ಬೀಜವನ್ನು ಹಾಕಿಕೊಂಡು ಬಂದು ನಾವು ಬೆಳೆಸಿದ್ದೇವೆ. ಬೆಳೆ ತುಂಬಾ ಉತ್ಕೃಷ್ಟವಾಗಿ ಬೆಳೆದಿದೆ. ಅವರು ಮಾರಾಟ ಕೂಡ ಮಾಡುತ್ತಾರೆ. ಅವರಿಗೆ ಎಷ್ಟು ಬ್ಯಾಗ್ ಬೇಕು ಎಂದು ತೆಗೆದುಕೊಂಡು ಬಂದ ಮೇಲೆ without seal ಈಗಲೂ ಅಂಗಡಿಯಲ್ಲಿ

ಕೊಡುತ್ತಾರೆ. ನಾವು without seal ಕೊಡುತ್ತೇವೆ, ನೀನು ತೆಗೆದುಕೊಂಡು ಹೋಗಿ ಹಾಕು, ಬೆಳೆ ಬರದಿದ್ದರೆ ನಾವು ದುಡ್ಡು ಕೊಡುತ್ತೇವೆಂದು ಹೇಳುತ್ತಾರೆ. ಆ ಬ್ಯಾಗನ್ನು 200 ರೂಪಾಯಿಗೆ ಕೊಡುತ್ತಾರೆ. ಇದು multinational company ಯಿಂದ ನಡೆಯುತ್ತಿರುವಂತಹ ದಂಧೆ. ಇವರನ್ನು ಈ ದೇಶ ಮತ್ತು ರಾಜ್ಯವನ್ನು ಬಿಟ್ಟು ಓಡಿಸಿ. ಆಗ ಈ ರೈತರಿಗೆ ಬಿತ್ತನೆ ಬೀಜ ಬಹಳ ಚೆನ್ನಾಗಿ ಸಿಗುತ್ತವೆ. ಆಗ ಈ ದೇಶ ಮತ್ತು ರಾಜ್ಯದ ರೈತರು ಬದುಕುತ್ತಾರೆ. ಅದಕ್ಕೋಸ್ಕರವಾಗಿ ನೀವು ಬಿತ್ತನೆ ಬೀಜಕ್ಕೆ ಸಾವಿರ, ಐನೂರು ರೂಪಾಯಿ ಕೊಟ್ಟು ನೀವು ಉದ್ಧಾರವಾಗಿ ಎಂದು ಹೇಳಿದರೆ ರೈತರು ಉದ್ಧಾರವಾಗುವುದಿಲ್ಲ. ಇದರಲ್ಲಿ ಆಗುವಂತಹ ಲೋಪದೋಷಗಳನ್ನು ತಡೆಹಿಡಿದರೆ ನಿಜವಾಗಲೂ ರೈತರು ಉದ್ಧಾರವಾಗುತ್ತಾರೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ನೀವು ರೈತರಿಗೆ ಯಂತ್ರೋಪಕರಣಗಳನ್ನು ಸಬ್ಸಿಡಿ ದರದಲ್ಲಿ ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ. ಆದರೆ ನೀವು ಸಬ್ಸಿಡಿ ದರದಲ್ಲಿ ಕೊಡುವಂತಹ ಸಾಮಗ್ರಿಗಳು, ಯಂತ್ರೋಪಕರಣಗಳು ಇವೆ, ಅದರಲ್ಲಿ ಆಗುವಂತಹ ಅನ್ಯಾಯಗಳನ್ನು ನೀವು ಏನಾದರೂ ಕಂಡುಹಿಡಿದಿದ್ದೀರಾ? Tractor cultivator ಎಂದು ಕೊಡುತ್ತೀರಿ ಅದಕ್ಕೆ ಸಬ್ಸಿಡಿ ಸೇರಿ 30,000 ರೂಪಾಯಿ ಚಾರ್ಜ್ ಮಾಡುತ್ತಾರೆ. ಆದರೆ ಅರಸೀಕೆರೆಯಲ್ಲಿ ಅದು 18,000 ರೂಪಾಯಿಗೆ ಸಿಗುತ್ತದೆ. ಅದಕ್ಕೆ 30,000 ರೂಪಾಯಿ ಎಂದರೆ ಇನ್ನು 12,000 ರೂಪಾಯಿ ಕೊಡುವವರು ಯಾರು ಸ್ವಾಮಿ? Sprinkler 18,000 ರೂಪಾಯಿ ಇದೆ, ಆದರೆ 12,000 ರೂಪಾಯಿಗೆ ಅದೇ ಕಂಪನಿಯವನು ಕೊಡುತ್ತಾನೆ. ಇನ್ನು ಉಳಿದಂತಹ ದುಡ್ಡು ಹಾಕುವವರು ಯಾರು? ಒಂದೇ, ಎರಡೇ? ನೀವು ಹೇಳುವಂತಹ ಕ್ರಿಮಿನಾಶಕಗಳನ್ನು ಅವರಿಗೆ ಬೇಕಾದ ಕಂಪನಿಗೆ, ಅವರಿಗೆ 50% ಲಾಭ ಬರುವಂತಹ ಕಂಪನಿಗೆ ಮಾರುತ್ತಾರೆ. ನಾವು ಬೇಕಾದಷ್ಟು ಬಾರಿ ಹಿಡಿದಿದ್ದೇವೆ, ಅಂಗಡಿಗೆ ಬೀಗ ಹಾಕಿಸಿದ್ದೇವೆ. ಮತ್ತೆ ಬೆಳಿಗ್ಗೆ ಎದ್ದು ಅದೇ ರೀತಿ ಮಾಡುತ್ತಾರೆ. ಇದಕ್ಕೆಲ್ಲಾ ಕಾರಣವೇನು? ಕೃಷಿ ಅಧಿಕಾರಿಗಳು ಮತ್ತು ನೌಕರರು ಅಲ್ಲಿ ಇಲ್ಲದಿರುವುದು. ಒಬ್ಬ ಕೃಷಿ ಅಧಿಕಾರಿ ಹೋಬಳಿ ಕೇಂದ್ರಗಳಲ್ಲಿ ಎಷ್ಟು

ಅಂಗಡಿಗಳನ್ನು ಹೋಗಿ ನೋಡುವುದಕ್ಕೆ ಆಗುತ್ತದೆ? ಇವತ್ತು ರೈತ ಸಂಪರ್ಕ ಕೇಂದ್ರಗಳೆಂದು ಮಹತ್ವಾಕಾಂಕ್ಷೆಯ ಒಂದು ಯೋಜನೆಯನ್ನು ಜಾರಿಗೆ ತಂದರು. ಯಾವ ರೈತ ಸಂಪರ್ಕ ಕೇಂದ್ರಗಳ ಬಾಗಿಲು ತೆರೆದಿದ್ದಾರೆ ಸ್ವಾಮಿ? ಅಧಿಕಾರಿಗಳು ಇದ್ದರೆ ತಾನೇ ಅದರ ಬಾಗಿಲು ತೆರೆಯುವುದು? ರೈತರ ಪರವಾಗಿ ನೀವು ಅನೇಕ ಯೋಜನೆಗಳನ್ನು ಘೋಷಣೆ ಮಾಡಿದಿರಿ, ಆ ಯೋಜನೆಗಳ ಫಲ ಸಮರ್ಪಕವಾಗಿ ರೈತರಿಗೆ ತಲುಪಿದಾಗ ಅಲ್ಲವೇ ರೈತರು ಉದ್ಧಾರವಾಗುವುದು? ತಾವು ಇದರ ಬಗ್ಗೆ ಸಹ ಹೆಚ್ಚಿನ ಗಮನವನ್ನು ಹರಿಸಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅದರ ಜೊತೆಗೆ ಕೆರೆಗಳಿಗೆ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ನೀವು ಜಾರಿಗೆ ತಂದಿದ್ದೀರಿ. ಯಾವುದೇ ಡ್ಯಾಂಗಳ ಹತ್ತಿರದಲ್ಲಿ ನಮ್ಮ ಕ್ಷೇತ್ರಗಳು ಇಲ್ಲ. ದಯಮಾಡಿ ತಮಿಳುನಾಡಿನವರ ಇಕ್ಕಟ್ಟು ಇಲ್ಲದೆ, ಮಳೆ ಬಂದು ಫ್ಲಡ್ ಬಂದಾಗ ಆ ನೀರು ಸಮುದ್ರವನ್ನು ಸೇರುವಂತಹ ಎರಡು ತಿಂಗಳು ಅವಧಿಯಲ್ಲಿ ಆ ನೀರನ್ನು ನಮ್ಮ ಕ್ಷೇತ್ರದ ಕೆರೆಗಳಿಗೆ ಹರಿಸುವಂತಹ ವ್ಯವಸ್ಥೆ ಈ ರಾಜ್ಯದಲ್ಲಿ ಆಗಬೇಕಾಗುತ್ತದೆ. ಈ ರೀತಿಯ ವ್ಯವಸ್ಥೆ ಸುಮಾರು 60–70 ಕ್ಷೇತ್ರಗಳಿಗೆ ಆಗಬೇಕಾಗುತ್ತದೆ. ಇಲ್ಲವೆಂದರೆ ಕಾವೇರಿ ಕಣಿವೆಯವರು, ತಮಿಳುನಾಡಿನವರು ಗಲಾಟೆ ಮಾಡುತ್ತಾರೆ. ಆದುದರಿಂದ ಸಮುದ್ರವನ್ನು ಸೇರುವಂತಹ ನೀರನ್ನು ಉಪಯೋಗ ಮಾಡಿಕೊಂಡರೆ ಯಾರು ತಂಟೆ ಮಾಡುವುದಿಲ್ಲ. ಆ ನೀರನ್ನು ನಮ್ಮ ಕೆರೆಗಳಿಗೆ ತುಂಬಿಸಿದರೆ ಕುಡಿಯುವ ನೀರು ಸಿಕ್ಕ ಹಾಗೆ ಆಗುತ್ತದೆ, ಅಲ್ಲಿ ಅಂತರ್ಜಲ ಮಟ್ಟ ಹೆಚ್ಚುತ್ತದೆ. ನಾವು ಹೇಗೋ ಬದುಕಿಕೊಳ್ಳುತ್ತೇವೆ. ಇಂತಹ ಒಂದು ಕೆಲಸವನ್ನು ನೀವು ಮಾಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ನೀವು ರೈತರಿಗೆ ಒಂದು ಪರ್ಸೆಂಟ್ ಬಡ್ಡಿಯಂತೆ ಸಾಲವನ್ನು ಕೊಡುತ್ತೇವೆಂದು ಹೇಳಿದಿರಿ. ಬಹಳ ದೊಡ್ಡ ವಿಚಾರ. ಆದರೆ ಕಳೆದ ವರ್ಷ ಕೂಡ commercial bank ನಲ್ಲಿ ಕೂಡ 3% ಬಡ್ಡಿಯಂತೆ ಸಾಲವನ್ನು ಕೊಡುತ್ತೇವೆಂದು ಘೋಷಣೆ ಮಾಡಿದಿರಿ. ಆದರೆ ಸಾಲ ತೆಗೆದುಕೊಂಡವರು

ಯಾರು? ಯಾರು ಪಟ್ಟಣದ ಅಕ್ಕಪಕ್ಕದಲ್ಲಿ income tax ಕದಿಯುವುದ ಕೋಸ್ಕರ ಎರಡು-ಮೂರು ಎಕರೆ ಭೂಮಿ ಇಟ್ಟುಕೊಂಡಿರುತ್ತಾರೆ, ಅದರ ಜೊತೆಗೆ ಅಲ್ಲಿ ಹೊಟೇಲ್ ನಡೆಸುತ್ತಿರುತ್ತಾರೆ, ಒಂದು ಉದ್ಯಮ ಮಾಡುತ್ತಿರುತ್ತಾರೆ, ಅವರು ಯಾರದೋ ಹೆಸರಿನಲ್ಲಿ ಎರಡು-ಮೂರು ಎಕರೆ ಭೂಮಿ ತೆಗೆದುಕೊಂಡಿರುತ್ತಾರೆ. Commercial Bankನವರು ಇಂಡಿಯಾ ದೇಶದವರು ಅಲ್ಲ. ಇವರು ಇಂಡಿಯಾ ದೇಶದ ರೈತರ ದುಡ್ಡಿನಲ್ಲಿ ಬದುಕುತ್ತಿಲ್ಲ. ಇವರಿಗೆ ಇಂಡಿಯಾ ದೇಶದ ರೈತರಿಗೆ ಸಹಾಯ ಮಾಡಬೇಕೆನ್ನುವುದಿಲ್ಲ. ಇವರು ಏನು ಮಾಡುತ್ತಾರೆ ಎಂದರೆ ಕೃಷ್ಣಭಟ್‌ರ ಅಥವಾ ಬೇರೆಯವರ ಹೆಸರಿನಲ್ಲಿ ಎಫ್.ಡಿ ಇಟ್ಟಿರುತ್ತಾರೆ. ಅವರನ್ನು ಕರೆದುಕೊಂಡು ಬಂದು ತೆಗೆದುಕೊಳ್ಳೊಣ್ಣ 50 ಸಾವಿರ ರೂಪಾಯಿ, ಇದಕ್ಕೆ ನೀವು repayment ಮಾಡು ಎಂದು ಹೇಳಿ ಬಡ್ಡಿಗೆ ಸಾಲವನ್ನು ಕೊಡುತ್ತಾರೆ. ಅಂತಹವರು ಹತ್ತು ಜನ ಸೇರಿಕೊಳ್ಳುತ್ತಾರೆ. ಎಲ್ಲರೂ 50-50 ಸಾವಿರ ರೂಪಾಯಿ ತೆಗೆದುಕೊಂಡು 5 ಲಕ್ಷ ರೂಪಾಯಿ ಮಾಡಿಕೊಂಡು ಒಂದು ಫೈನಾನ್ಸ್ ಓಪನ್ ಮಾಡಿಕೊಳ್ಳುತ್ತಾರೆ. ಅದೇ ದುಡ್ಡು ತೆಗೆದುಕೊಂಡು ರೈತರಿಗೆ ಎರಡು ಪರ್ಸೆಂಟ್ ಬಡ್ಡಿಯಂತೆ ಸಾಲ ಕೊಡುತ್ತಾರೆ. ಇದು ವಾಸ್ತವಾಂಶ, ಇದನ್ನು ತನಿಖೆ ಮಾಡಿಸಿ ಸ್ವಾಮಿ. ನೀವು ಯಾರಿಗೆ ಕೊಟ್ಟಿದ್ದೀರಿ? ನಿಜವಾದ ರೈತ ಬಡ ಬೋರೇಗೌಡನಿಗೆ ನೀವು ಹಣ ಕೊಟ್ಟಿದ್ದೀರಾ? ಅವನಿಗೆ ಅದು ತಲುಪಿದೆಯಾ? ಯಾರಿಗೆ repayment ಮಾಡುವುದಕ್ಕೆ ಶಕ್ತಿ ಇರುತ್ತದೆ ಅವರಿಗೆ ಈ commercial bank ಗಳು. ನೀವು ಸುಮ್ಮನೆ ಅನ್ಯಾಯವಾಗಿ 7% ದುಡ್ಡನ್ನು ತುಂಬುತ್ತೀರಿ. ಅದು ರೈತರಿಗೆ ತಲುಪಿದೆಯಾ? ದಯಮಾಡಿ ಇದನ್ನೆಲ್ಲ ಯೋಚನೆ ಮಾಡಿ. ನಿಜವಾದ ರೈತನಿಗೆ ಈ ದುಡ್ಡು ತಲುಪಬೇಕು. ಯಾರಿಗೆ repayment ಇರುತ್ತದೆ. ಯಾರ ಮನೆಯಲ್ಲಿ ಸರ್ಕಾರಿ ಅಧಿಕಾರಿ ಇರುತ್ತಾನೆ, ಅವನು ಬಂದು surityಗೆ ಸೈನ್ ಹಾಕುತ್ತಾನೆ, ಅವನಿಗೆ ಇವತ್ತು ಸಾಲ ಕೊಡುತ್ತಿದ್ದಾರೆ, ನಿಜವಾದ ರೈತರಿಗೆ ಸಾಲ ಸಿಗುತ್ತಿಲ್ಲ. ನೀವು ಈಗ ಒಂದು ಪರ್ಸೆಂಟ್ ಮಾಡಿದ್ದೀರಿ. ಇನ್ನೂ ಈಗ ದಾಂಧಲೆ ಹೆಚ್ಚಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನಿಜವಾದ ರೈತನಿಗೆ ಕೊಡುವಂತಹ ಪ್ರಾಮಾಣಿಕ

ವ್ಯವಸ್ಥೆಯನ್ನು ಮಾಡಿದರೆ ನಿಮ್ಮ ಕೃಷಿ ಬಜೆಟ್‌ಗೆ ಅರ್ಥ ಬರುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಸ್ತ್ರೀಶಕ್ತಿ ಸಂಘಗಳ ಬಗ್ಗೆ ಹೇಳುವುದಾದರೆ, ಪಾಪ ಹೆಂಗಸರು ಮನೆಯಲ್ಲಿ ಅಡಿಗೆ ಮಾಡಿಕೊಂಡು ಇದ್ದರು. ಅವರನ್ನು ನಾವು ರಾಜಕೀಯದವರು ಅವರಿಗೆ ಸ್ವಲ್ಪ ಏನೇನೋ ಕೊಟ್ಟು ಬನ್ನಿ ಬನ್ನಿ ಎಂದು ಕರೆದುಕೊಂಡು ಬಂದೆವು. ಅವರೆಲ್ಲರೂ ಈಗ ವ್ಯಾನಿಟಿ ಬ್ಯಾಗ್ ಹಾಕಿಕೊಂಡು ಬೀದಿಗೆ ಬಂದರು. ಅವರ್‍ಯಾರು ಈಗ ಮನೆಯಲ್ಲಿ ಅಡಿಗೆ ಮಾಡುತ್ತಿಲ್ಲ. 10 ಗಂಟೆ ಬಸ್ಸು ಬಂತು ಎಂದರೆ ಎಲ್ಲರೂ ವ್ಯಾನಿಟಿ ಬ್ಯಾಗ್ ಹಾಕಿಕೊಂಡು ಟೌನ್‌ಗೆ ಬರುತ್ತಾರೆ. ಈಗ ಅವರ ಕೈಯಲ್ಲಿ ದುಡಿಸುತ್ತೀರೋ, ಇಲ್ಲ ಈ ದೇಶ ಹಾಳು ಮಾಡುತ್ತೀರೋ ಎಂದು ನೀವು ಯೋಚನೆ ಮಾಡಿ. ಇವತ್ತು ನೀವು ಅವರಿಗೆ ದುಡಿಯುವಂತಹ ಕೈಗೆ ಸಂಪನ್ಮೂಲವನ್ನು ಕೊಡಬೇಕು. ಸ್ತ್ರೀ ಶಕ್ತಿ ಸಂಘದ ಮೇಳ ಎಂದು ಮಾಡಿದರು. ನಾನು ಅಲ್ಲಿ ಹೋಗಿ ನೋಡಿದರೆ ಎಲ್ಲಾ ಭಟ್ಟರು ತಯಾರು ಮಾಡಿದಂತಹ food, ಪಫ್ಸ್, ಅಂಗಡಿಯವರು ಏನೇನು ಮಾರುತ್ತಾರೆ, ಅದನ್ನೆಲ್ಲ ತೆಗೆದುಕೊಂಡು ಬಂದು ಇಟ್ಟುಕೊಂಡು stallನಲ್ಲಿ ಮಾರುತ್ತಾರೆ. ಅದನ್ನು ನೀವು ತಯಾರು ಮಾಡಿದಿರೇನಮ್ಮ ಎಂದು ಕೇಳಿದರೆ, ಇಲ್ಲ ಸಾರ್ CDPO ರವರು ಇವತ್ತು ಒಂದು ದಿವಸಕ್ಕೆ ನೀವು ತೆಗೆದುಕೊಂಡು ಬಂದು ನಿಮ್ಮ ಹೆಸರು ಹಾಕಿಕೊಂಡು ಮಾರಾಟ ಮಾಡಿ ಎಂದು ಹೇಳಿದರು, ಅದಕ್ಕೆ ಮಾರುತ್ತಿದ್ದೇವೆಂದು ಹೇಳಿ ಮಾರುತ್ತಿದ್ದರು. ಇದು ಈ ದೇಶದ ಹಣೆಬರಹ. ಇದು ಆಗಬಾರದು. ವಾಸ್ತವವಾಗಿ ಅವರೇ ದುಡಿಯಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರವಾಗಲಿ ನೀವಾಗಲಿ ನಿರ್ಣಯ ತೆಗೆದುಕೊಂಡು ಗುಡಿ ಕೈಗಾರಿಕೆಗಳು ಎಂದು ಏನಿವೆ, ಉದಾಹರಣೆಗೆ ಮೇಣದ ಬತ್ತಿಯನ್ನು ತಯಾರು ಮಾಡುವುದಕ್ಕೆ ಸ್ತ್ರೀ ಶಕ್ತಿ ಸಂಘದವರು ತಯಾರಿದ್ದಾರೆ. ನೀವು ಏನು ಮಾಡುತ್ತೀರಿ ಎಂದರೆ ಮೇಣದ ಬತ್ತಿ ತಯಾರು ಮಾಡುವುದಕ್ಕೆ ಟಾಟಾ-ಬಿರ್ಲಾ ಕಂಪನಿಗೆ ಲೈಸೆನ್ಸ್ ಕೊಡುತ್ತೀರಿ. ಅದನ್ನು ನಿಲ್ಲಿಸಿ. ಬುಟ್ಟಿ ಎಣೆಯುವುದನ್ನು ಕೂಡ ಟಾಟಾ-ಬಿರ್ಲಾಗೆ ಕೊಡುತ್ತೀರಿ. ನಮ್ಮಲ್ಲಿ ಅಡಿಕೆ ಪಟ್ಟೆ

ಹೆಣೆಯುವುದು ಇತ್ತು. ಆ ಕೆಲಸ ಮಾಡಿಕೊಂಡು ಯಾರೋ ಸ್ತ್ರೀ ಶಕ್ತಿ ಸಂಘದವರು ಜೀವನ ಮಾಡುತ್ತಿದ್ದರು.

ಅವರು ಒಂದು ಗಂಟೆಗೆ 10,000 ತಯಾರು ಮಾಡುವ ಮಿಷನ್ ಅನ್ನು ತಂದು ಹಾಕಿದರು. ಈ ರೀತಿ ಆದಾಗ ಇವರು ಅವರ ಮೇಲೆ ಹೇಗೆ compete ಮಾಡುತ್ತಾರೆ? ತಾವು ಇದೆಲ್ಲವನ್ನು ನೋಡಿ. ಈ ಕೈಗಾರಿಕೆಗಳನ್ನು ಸ್ತ್ರೀ ಶಕ್ತಿ ಸಂಘದವರಿಗೆ reserve ಇಡಿ. ದಯಮಾಡಿ ಗ್ರಾಮೀಣ ಪ್ರದೇಶದ ಗುಡಿ ಕೈಗಾರಿಕೆಗಳನ್ನು ಗ್ರಾಮೀಣ ಪ್ರದೇಶದ ಜನತೆಗೋಸ್ಕರವಾಗಿ, ಸ್ತ್ರೀ ಶಕ್ತಿ ಸಂಘದವರಿಗೋಸ್ಕರವಾಗಿ ಮೀಸಲಾಗಿಡುವಂಥ ಕೆಲಸವನ್ನು ಮೇಣದ ಬತ್ತಿ, ಬೆಂಕಿಪೊಟ್ಟಣ, ಇತ್ಯಾದಿಗಳು ಗುಡಿ ಕೈಗಾರಿಕೆ ಎಂದು ಏನು ಕರೆಯುತ್ತೇವೆಯೋ, ಅವುಗಳನ್ನೆಲ್ಲಾ ಟಾಟಾ ಬಿರ್ಲಾ ದೊಡ್ಡ ದೊಡ್ಡ industry ಗಳಿಗೆ ಕೊಡುವುದನ್ನು ನಿಲ್ಲಿಸಿ. ಇದರ ಜೊತೆಗೆ ಸಿದ್ಧ ಉಡುಪುಗಳನ್ನು ತಯಾರು ಮಾಡುವಂಥದ್ದಕ್ಕೆ ಬೆಂಗಳೂರಿನಲ್ಲಿ ಲೈಸೆನ್ಸ್ ಕೊಟ್ಟಿದ್ದು ಸಾಕು. ಇಲ್ಲಿ ಬೆಂಗಳೂರಿಗೆ ಬಂದು, ಆ ಪಾಪದ ಕೊಡದಲ್ಲಿ ಬಿದ್ದು, ಇಲ್ಲಿ ಅವರಿಗೆ ಶೆಡ್ ಹಾಕಿ ಕೊಡುತ್ತಾರೆ. ಅದಕ್ಕೆ ಒಂದೂವರೆ ಸಾವಿರ ರೂ.ಗಳನ್ನು ಕಟ್ಟಬೇಕು, ಅವರಿಗೆ ಇರುವ ಊರಿನಲ್ಲೇ ಕೂಲಿ ಸಿಗದೇ ಸಂಬಳ ಮೂರೂವರೆ ಸಾವಿರ ರೂ.ಗಳನ್ನು ತೆಗೆದುಕೊಳ್ಳುವುದಕ್ಕೆ ಇಲ್ಲಿಗೆ ಬರುತ್ತಾರೆ. ಇಲ್ಲಿ ಗಾರ್ಮೆಂಟ್‌ಗಳಿಗೆ ಬರುತ್ತಾರೆ, ಅವರ ಜೊತೆಗೆ ಎರಡು ಮಕ್ಕಳು, ಅವರ ಜೊತೆಗೆ ಅವನು, ಅವರ ಅಪ್ಪ, ಇವರ ಜೊತೆಗೆ ರಾಗಿ, ಕಾಯಿ, ಎಲ್ಲವನ್ನೂ ಹೊತ್ತುಕೊಂಡು ಬರುತ್ತಾರೆ. ಇಲ್ಲಿ ರಾಗಿ, ಕಾಯಿ ಇಲ್ಲವೆಂದರೆ ಜೀವನಕ್ಕೆ ಸಾಕಾಗುವುದಿಲ್ಲ, ಇವರು ಕೊಡುವ ಸಂಬಳ ಸಾಕಾಗುವುದಿಲ್ಲ. ಈ ರೀತಿ ರೈತರ ಮಕ್ಕಳು ಜೀವನ ಮಾಡುವಂಥದ್ದನ್ನು ತಪ್ಪಿಸಬೇಕಾದರೆ ಅರಸೀಕೆರೆಯ ಭಾರೆ ಮೇಲೆ industry ಗಳನ್ನು ಮಾಡಿ. ಈಗ ನೀವು industry ಗಳನ್ನು ಮಾಡುವುದಕ್ಕೆ ಹೊರಟಿದ್ದೀರಲ್ಲಾ, ಇನ್ನು ಮುಂದೆ ಇಲ್ಲಿ ಒಂದು ಲೈಸನ್ಸ್ ಅನ್ನು ಕೊಡಬೇಡಿ. ಅವುಗಳನ್ನೆಲ್ಲಾ ತಾಲ್ಲೂಕು headquartersಗೆ ಹಾಕಿ. ಅಲ್ಲಿಯೂ ಮೂರುವರೆ ಸಾವಿರ ರೂ.ಗಳನ್ನೇ ಕೊಡಲಿ. ಒಂದು ಮನೆಯಲ್ಲಿ ಮೂರು ಜನರು ಕೆಲಸ ಮಾಡಿದರೆ, ಬೆಳಿಗ್ಗೆ ಎದ್ದು ಬಿಸಿ ಊಟ ತಿಂದು ಕೆಲಸಕ್ಕೆ

ಹೋಗುತ್ತಾರೆ, ಮತ್ತೆ ಸಾಯಂಕಾಲ ಬಂದು ಬಿಸಿ ಊಟವನ್ನು ತಿನ್ನುತ್ತಾರೆ. ನೀವು ಕೊಟ್ಟಿರುವ ಒಂದು ಜನತಾ ಮನೆ ಇರುತ್ತದೆ. ಅದರಲ್ಲಿ ಅವರು ಜೀವನ ಮಾಡುತ್ತಾರೆ. ಇವರಿಗೆ ತಿಂಗಳಿಗೆ 10 ಸಾವಿರ ರೂ.ಗಳಲ್ಲಿ 1 ಸಾವಿರ ರೂ.ಗಳು ಖರ್ಚಾಗುವುದಿಲ್ಲ. ಅವರಿಗೆ 9 ಸಾವಿರ ರೂ.ಗಳು ವಾರ್ಷಿಕ ಅದಾಯವಾಗಿ ತಿಂಗಳಿಗೆ ಉಳಿಯುತ್ತದೆ. ಅವರ ಮನೆಯು ಆರ್ಥಿಕವಾಗಿ ಮುಂದೆ ಬರುವುದಿಲ್ಲವೇ? ಇಲ್ಲಿ ಫಾರಿನ್‌ನವರು ಬಟ್ಟೆಗಳನ್ನು ಕೊಂಡುಕೊಳ್ಳುವಾಗ ಇದನ್ನು ಅರಸೀಕೆರೆ ಭಾರೆ ಮೇಲೆ ಹೊಲೆದರಾ, ಪೀಣ್ಯ IInd Stage ನಲ್ಲಿ ಹೊಲೆದರೇ ಎಂದು ನೋಡುವುದಕ್ಕೆ ಬರುತ್ತಾರೆಯೇ? ಅವರಿಗೆ ಆ facilities ಕೊಡುತ್ತಾರೆ. ಅವರಿಗೆ train ವ್ಯವಸ್ಥೆ ಚೆನ್ನಾಗಿದೆ, ಕರೆದುಕೊಂಡು ಹೋಗುತ್ತಾರೆ. ಅವರು ಯಾರಿಗೆ ಹೊಲೆಯುವುದಕ್ಕೆ ಕೊಡಬೇಕೊ ಅವರಿಗೆ ಕೊಡುತ್ತಾರೆ. ಯಾರು buyers ಇರುತ್ತಾರೆ, ಅವರ ಕೈಯಲ್ಲಿ ಮಾರಾಟ ಮಾಡಿಸುತ್ತಾರೆ. ನೀವು ಬೆಂಗಳೂರಿನಲ್ಲಿ ಮಾರಾಟ ಮಾಡುವುದನ್ನು ನಿಲ್ಲಿಸಿ, ಅರಸೀಕೆರೆ ಗ್ರಾಮೀಣ ಪ್ರದೇಶಕ್ಕೆ ಎಲ್ಲಿ ಮಾನವ ಸಂಪನ್ಮೂಲವಿದೆ, ಎಲ್ಲಿ ಕೂಲಿಕಾರರು ಸಿಗುತ್ತಾರೆ, ಅಲ್ಲಿ ಇಂಥ ಕೈಗಾರಿಕೆಗಳನ್ನು ಕೊಡುವ ವ್ಯವಸ್ಥೆ ನಿಜವಾಗಿಯೂ ಆಗಬೇಕೆನ್ನುವಂಥದ್ದು ನನ್ನ ಒತ್ತಾಯವಾಗಿದೆ. ಈ ರೀತಿಯಾಗದಿದ್ದರೆ ರೈತರು ಅಲ್ಲಿ ಎಲ್ಲವನ್ನು ಬಿಟ್ಟು, ಅವರ ಹೆಣ್ಣು ಮಕ್ಕಳು ಎಲ್ಲರೂ ಇಲ್ಲಿಗೆ ವಲಸೆ ಬರುತ್ತಾರೆ. ನಾವು ಪಂಚಾಯಿತಿ election ಗೆ ಓಟು ಹಾಕಲು ಬಂದಾಗ ನೋಡುತ್ತೇವೆ. ಅವರ ಜೀವನವನ್ನು ನೋಡಿದರೆ ಅಳು ಬರುತ್ತದೆ. ಆ ನೀರಲ್ಲಿ, ಕೊಳಚೆಯಲ್ಲಿ ಬಿದ್ದು ಅವರ ಜೀವನ ಅಧೋಪತನಕ್ಕೆ ಹೋಗಿರುತ್ತದೆ. ತಾವು ದಯಮಾಡಿ ಎಚ್ಚೆತ್ತುಕೊಂಡು ಈ ಕೆಲಸವನ್ನು ಮಾಡಬೇಕು. ಇದಕ್ಕೆ ಏನಾದರೂ ಒಂದು ಕಾಯಕಲ್ಪವನ್ನು ಕಲ್ಪಿಸಸಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇದರ ಜೊತೆಗೆ ಗ್ರಾಮೀಣ ಜನರಿಗೆ ಯಶಸ್ವಿ ಯೋಜನೆ ಮಾಡಿರುವಂಥದ್ದು ನಿಜವಾಗಿಯೂ ಬಹಳ ಪುಣ್ಯದ ಕೆಲಸವಾಗಿದೆ. ಈ ಯೋಜನೆಗೆ 40 ಕೋಟಿ ರೂ.ಗಳು ಸಾಕಾಗುವುದಿಲ್ಲ. ಇದನ್ನು ಹೆಚ್ಚು ಮಾಡಿ, ಆರ್ಥಿಕ ಸಂಕಷ್ಟದಲ್ಲಿರುವಂಥ ಎಷ್ಟೋ ಬಡ ಕುಟುಂಬಗಳು ಈ ವಿಮೆಯಲ್ಲಿವೆ. ಈ ಯಶಸ್ವಿ

ಯೋಜನೆಯಿಂದ ಸಹಾಯ ಪಡೆದು ಎಷ್ಟೋ ಜನರು ಬದುಕಿದ್ದಾರೆ. ತಮ್ಮ ಬಾಳನ್ನು ಅರ್ಥ ಮಾಡಿಕೊಂಡಿದ್ದಾರೆ. ದಯಮಾಡಿ ಈ ಯೋಜನೆಗೆ 40 ಕೋಟಿ ರೂ.ಗಳು ಸಾಕಾಗುವುದಿಲ್ಲ. ಇದನ್ನು ಹೆಚ್ಚಿಗೆ ಮಾಡಿಕೊಡಿಯೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಸುವರ್ಣ ಭೂಮಿ ಯೋಜನೆಯನ್ನು ರಾಜಕೀಯ ಗಿಮಿಕ್ಸ್ ಎಂದು ಕರೆಯಬೇಕೋ, ಇಲ್ಲವೆಂದರೆ ಮಾನ್ಯ ಸಿದ್ಧರಾಮಯ್ಯನವರು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಯವರು ಚುನಾವಣೆಗೆ ಹೋಗುತ್ತಾರೆಂಗು ಆ ರೀತಿ ಏನಾದರೂ ಇದೆಯೋ ಗೊತ್ತಿಲ್ಲ. ಈ ಯೋಜನೆಯನ್ನು ಕಾರ್ಯಗತ ಮಾಡಬೇಕಾದರೆ ನಿಯಮಾವಳಿಯನ್ನು ಏನು ರಚನೆ ಮಾಡಿದ್ದೀರಿ, ಅದು ತಪ್ಪಾಗಿದೆ. ದ್ರಾಕ್ಷಿ ಬೆಳೆ, ನಿಂಬೆ, ಬಾಳೆ, ಇದೆಲ್ಲವನ್ನು ಎರಡೂವರೆ ಲಕ್ಷ ರೈತರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ನೀವು ಎರಡೂವರೆ ಲಕ್ಷ ರೈತರಿಗೆ ಕೊಡುವಾಗ ಅಷ್ಟೂ ಬೆಳೆಯನ್ನು ಒಣ ಭೂಮಿ ಹೊಂದಿರುವಂಥ ರೈತರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಆ ಬೆಳೆಯನ್ನು ನೀರಾವರಿ ಇಲ್ಲದೇ ಬೆಳೆಯುವುದಕ್ಕೆ ಸಾಧ್ಯವೇ? ಒಣ ಭೂಮಿ ಬೇಸಾಯದಲ್ಲಿ ಬೆಳೆಯತಕ್ಕಂಥವರಿಗೆ 5,000, 10,000 ರೂ.ಗಳನ್ನು ಉತ್ತೇಜನ ನೀಡಲು ಕೊಡುತ್ತೇವೆಂದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನೀವು ಇಟ್ಟಿರುವಂಥ ಬೆಳೆಗಳಿಗೂ, ಒಣ ಭೂಮಿಗೂ ಏನು ಸಂಬಂಧ? ನೀವು ಆ ರೀತಿ ಹೇಳಿದರೆ ಒಬ್ಬರಿಗೂ ಕೊಡುವುದಕ್ಕೆ ಆಗುವುದಿಲ್ಲ. ನೀವು ಅರ್ಧ ಎಕರೆ, ಮುಕ್ಕಾಲು ಎಕರೆ ಇರುವವರಿಗೂ ಕೊಡುತ್ತೇವೆಂದು ಹೇಳಿದ್ದೀರಿ. ಆಯಿತು, ಅದಕ್ಕೆ ತಕ್ಕಂತೆ ಕೊಡುತ್ತೇವೆಂದು ಹೇಳಿದ್ದೀರಿ, ಏನೋ ಒಂದು ಮಾಡಿದ್ದೀರಿ. ರೈತರಿಗೆ ಏನೋ ಒಂದು ಕೊಡಬೇಕೆಂದು ನಿರ್ಧಾರ ಮಾಡಿದ್ದೀರಿ, ಅಯಿತು ಸಂತೋಷ. ಆದರೆ ಆ ನಿಯಮಾವಳಿಗಳನ್ನು ರಚನೆ ಮಾಡುವಂಥ ಕಾಲದಲ್ಲಿ ತಾವು ಪ್ರಾಮಾಣಿಕವಾಗಿ ಇನ್ನೊಮ್ಮೆ ಯೋಚನೆ ಮಾಡಿ. ಈ ಹಣವನ್ನು ಯಾರಿಗೆ ಕೊಟ್ಟರೆ ನಿಜವಾದ ಸಾಪಲ್ಯತೆಯಾಗುತ್ತದೆಂಬ ಅರ್ಥವನ್ನು ತಾವು ಗ್ರಹಿಸಿಕೊಳ್ಳುತ್ತೀರೆಂದು ನಾನು ಮನವಿ ಮಾಡುತ್ತಿದ್ದೇನೆ, ಅದು ನಿಮಗೆ ಬಿಟ್ಟದ್ದು. ಇನ್ನು ಕೃಷಿ ಜಾಗತಿಕ ಬಂಡವಾಳ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇಲ್ಲಿ ನಾನು ಎಲ್ಲವನ್ನು ಟೀಕೆ ಮಾಡಿಕೊಂಡು ಹೋದರೆ ಅದಕ್ಕೆ ಅರ್ಥವಿರುವುದಿಲ್ಲ.

ಇವತ್ತು ಅದರ ಅವಶ್ಯಕತೆ ಇದೆ, ಏಕೆಂದರೆ ನಮ್ಮ ದೇಶದಲ್ಲಿರುವಂಥ ಕೆಲವೊಂದು ಆಕರ್ಷಣೀಯವಾದ ಕೃಷಿ ಬೆಳೆಗಳನ್ನು, ಕೃಷಿ ಪದಾರ್ಥಗಳನ್ನು, ಕೃಷಿ ಕಚ್ಚಾ ಸಾಮಾಗ್ರಿಗಳನ್ನು, ಹೊರ ದೇಶದವರು ಆಕರ್ಷಣೀಯವಾಗಿ ನೋಡುತ್ತಾರೆ. ಅಂಥ ಸಂದರ್ಭದಲ್ಲಿ ಅವರು ಬಂದು ಬಂಡವಾಳ ಹೂಡುವಂಥದ್ದು, ಬಹಳ ಅವಶ್ಯಕತೆ ಇದೆ. ಆ ಬಂಡವಾಳ ಹೂಡುವಂಥ ಸಂದರ್ಭದಲ್ಲಿ ಅವರಿಗೆ ಯಾವುದಕ್ಕೆ ಲೈಸನ್ಸ್ ಅನ್ನು ಕೊಡಬೇಕು. ಅವರನ್ನು ಯಾವುದಕ್ಕೆ ಸೇರ್ಪಡೆ ಮಾಡಬೇಕೆನ್ನುವಂಥದ್ದರ ಬಗ್ಗೆಯೂ ಸ್ವಲ್ಪ ಯೋಚನೆ ಮಾಡಿ, ಯಾವುದಕ್ಕೆ ಬಂಡವಾಳವನ್ನು ಗ್ರಹಿಸಬೇಕೆನ್ನುವಂಥದ್ದನ್ನು ಯೋಚನೆ ಮಾಡಿ. ಅಂಥ ಸಂದರ್ಭದಲ್ಲಿ debate ಮಾಡಿ, ಕೆಲವೊಂದು ವಿಚಾರಗಳನ್ನು ವಿಮರ್ಶೆ ಮಾಡಿ, ತಾವು ದಯಮಾಡಿ ಅದನ್ನು ಮಾಡುವಂಥ ಸೂಕ್ತತೆ ಇದೆಯೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಇವತ್ತು ರೈತ ಏನು ಬೆಳೆಯುತ್ತಾನೆ. ಅವೆಲ್ಲಾ ಕೈಗಾರಿಕೆಗಳ ಕಚ್ಚಾ ಸಾಮಾಗ್ರಿಗಳಾಗಬೇಕು. ಅಂಥ ಮಾದರಿಯ, ಅಂಥ ವ್ಯವಸ್ಥಿತ ಬೆಳೆಗಳನ್ನು ಬೆಳೆಸತಕ್ಕಂಥ ನಿಟ್ಟಿನಲ್ಲಿ ಪ್ರಾಮಾಣಿಕವಾದಂಥ ಜನ ಜಾಗೃತಿಯನ್ನು ಮೂಡಿಸುವಂತೆ ಮಾಡಬೇಕು. ತಾವು ಸಮೀಕ್ಷೆ, ಆರ್ಥಿಕ ಸಮೀಕ್ಷೆ, ಕೃಷಿ ಸಮೀಕ್ಷೆ, ಎಂದು ಏನು ಮಾಡಿಸುತ್ತೀರಲ್ಲಾ, ಆ ನಿಟ್ಟಿನಲ್ಲಿ ಸಮೀಕ್ಷೆಯನ್ನು ಮಾಡಿಸಿ. ಆ ರೈತ ಏನು ಬೆಳೆಯನ್ನು ಬೆಳೆಯುತ್ತಾನೆ, ಅವೆಲ್ಲವೂ ಕೈಗಾರಿಕೆಗಳ ಕಚ್ಚಾ ವಸ್ತುಗಳಾಗಿ ಮಾರ್ಪಾಡು ಆದಾಗ ಮಾತ್ರ ಈ ದೇಶ ಉದ್ಧಾರವಾಗಲು ಸಾಧ್ಯವಾಗುತ್ತದೆ. ಆಗ ರೈತ ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಸಿಗುತ್ತದೆ. ಆ ಒಂದು ನಿಟ್ಟಿನಲ್ಲಿ ನೀವು ಯೋಚನೆ ಮಾಡಿ. ಅದಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಅದರ ಬಗ್ಗೆಯೂ ಕೂಡ ತಾವು ಹೆಚ್ಚಿನ ಕಾಳಜಿಯನ್ನು ವಹಿಸುತ್ತೀರೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ತೋಟಗಾರಿಕಾ ಬೆಳೆಗಳ ಬಗ್ಗೆ ನಾನು ಮೊದಲೇ ಶೀತಲ ಕೇಂದ್ರಗಳು ಬಹಳ ಮುಖ್ಯವೆಂದು ಹೇಳಿದ್ದೇನೆ. ಅದೇ ರೀತಿಯಲ್ಲಿ ಬೆಳೆ ನೀತಿಯು ಮುಖ್ಯವೆನ್ನುವಂಥದ್ದು, ಆ ಬೆಳೆಗಳನ್ನು ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕೆನ್ನುವಂಥದ್ದರ ಬಗ್ಗೆ ಬೇಡಿಕೆಗೆ ಅನುಸಾರವಾಗಿ ಬೆಳೆಯುವುದರ

ಬಗ್ಗೆ, ನಾನು ಏಕೆ ಹೇಳುತ್ತಿದ್ದೇನೆಂದರೆ ಮಾನ್ಯ ಮುಖ್ಯಮಂತ್ರಿಯವರು ಈಗ ಸದನಕ್ಕೆ ಬಂದರು. ಅದಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಬೆಳೆಗಳ ಬೇಡಿಕೆ ಏನು ಇದೆಯೆಂಬ ಬಗ್ಗೆ ಸಮೀಕ್ಷೆ ಮಾಡಿಸಿ. ಇಲ್ಲಿ ಟೊಮೋಟೊವನ್ನು ಬೆಳೆದು ಅದೆಲ್ಲವನ್ನು ಗುಂಡಿಗೆ ಬಿಸಾಡುವುದಲ್ಲ. ಬೆಳೆಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಬೆಳೆಯಬೇಕೋ, ಅದಕ್ಕೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಇದೆಯೇ? ಅಥವಾ ಇಲ್ಲಿ ಬೇಡಿಕೆ ಇದೆಯೇ? ಕರ್ನಾಟಕ ರಾಜ್ಯದಲ್ಲಿ ಎಷ್ಟು ಬೇಡಿಕೆ ಇದೆ? ಅವರು ಅಷ್ಟು ಬೆಳೆಯನ್ನು ಬೆಳೆದು, ಅದಕ್ಕೆ ತಾವು ಒಂದು ಬೆಂಬಲ ಬೆಲೆಯನ್ನು ಕೊಡಿ. ಅವರಿಗೆ ಏನಾದರೂ ಮಾರುಕಟ್ಟೆ ಬೆಲೆ ಸಿಗದಿದ್ದರೆ ನಾವು ಇಷ್ಟು ಬೆಲೆಯನ್ನು ಕೊಡುತ್ತೇವೆ, ನೀವು ಇಷ್ಟೆ ಎಕರೆಯಲ್ಲಿ ಬೆಳೆಯನ್ನು ಬೆಳೆಯಬೇಕೆಂಬ ನೀತಿಯನ್ನು ತನ್ನಿ. ಆಗ ಮಾತ್ರ ರೈತರು ಬೆಳೆದ ಬೆಳೆಗೆ ನೀವು ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ರೈತರು ದಿನ ನಿತ್ಯ ಮಾರುಕಟ್ಟೆಯ ಶೀತಲ ಕೇಂದ್ರಗಳಲ್ಲಿ ಬೆಳೆಯನ್ನು ಇಟ್ಟು ನಾಲ್ಕೈದು ದಿವಸಗಳ ಕಾಲ ಮಾರುಕಟ್ಟೆಯ ಬೆಲೆಗಳ ಏರುಪೇರುಗಳನ್ನು ನೋಡಬಹುದೇ ಹೊರತು, ಇದಕ್ಕೆ ಸಮಗ್ರವಾದಂಥ ಬೆಲೆಯನ್ನು ಏನಾದರೂ ಕೊಡಬೇಕೆಂದು ಇದ್ದರೆ ಬೆಳೆ ನೀತಿಯನ್ನು ಜಾರಿಗೆ ತರುವಂಥದ್ದಕ್ಕೆ ಸರ್ವೆ ಮಾಡಿ, ಬೇಡಿಕೆಗೆ ಅನುಸಾರವಾಗಿ ಈ ತೋಟಗಾರಿಕೆಯ ಬೆಳೆಗಳನ್ನು ಮಾತ್ರ ಬೆಳೆಸುವಂಥದ್ದು ಆಗಬೇಕು. ನಾವು ಕೃಷಿ ಬೆಳೆಗಳನ್ನು ಆ ರೀತಿ ಬೆಳೆಸುವುದಕ್ಕೆ ಆಗುವುದಿಲ್ಲ. ಆದರೆ ತೋಟಗಾರಿಕೆಯ ಬೆಳೆಗಳನ್ನು ಜನರ ಬೇಡಿಕೆಗೆ ಅನುಸಾರವಾಗಿ ಬೆಳೆದರೆ ಮಾತ್ರ ಅದಕ್ಕೆ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಒಂದು ನಿಟ್ಟಿನಲ್ಲಿ ತಾವು ಪ್ರಾಮಾಣಿಕವಾದಂಥ ಕೆಲಸವನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಇನ್ನು ಪಶು ಸಂಗೋಪನೆ ಬಗ್ಗೆ ಹೇಳುವುದಾದರೆ, ಇವತ್ತು ಹೈನುಗಾರಿಕೆ ಮತ್ತು ಪಶು ಸಂಗೋಪನೆಯು ರೈತರ ಬದುಕಿನ ಒಂದು ಆಶಾದೀಪವಾಗಿದೆ. ಅದು ನೀವು ಉತ್ತೇಜನವಾಗಿ ಕೊಟ್ಟಿರುವ ಎರಡು

ರೂಪಾಯಿ ಇರಬಹುದು. ಹೈನುಗಾರಿಕೆಗೆ ನಿಖರವಾದಂಥ ಮಾರುಕಟ್ಟೆ ಇದೆ. ಸ್ತ್ರೀಶಕ್ತಿ ಸಂಘಗಳನ್ನು ನೀವು ಅಲ್ಲಿ ಬಳಸಿಕೊಳ್ಳಬೇಕು. ಪ್ರತಿಯೊಂದು ಸ್ತ್ರೀಶಕ್ತಿ ಸಂಘಗಳು ಹೈನುಗಾರಿಕೆಯನ್ನು ಮಾಡಲು ನೀವು ಹಣವನ್ನು ತೊಡಗಿಸಿದರೆ, ಅವರಿಗೆ ಅದಕ್ಕೆ ಮಾರುಕಟ್ಟೆ ಇದೆ. ಪ್ರತಿ ಊರಿನಲ್ಲಿ ಡೈರಿ ಕೇಂದ್ರಗಳು ಬೆಳದು ನಿಂತಿವೆ. ಅವರು ಅಲ್ಲಿಗೆ ಹಾಲನ್ನು ತೆಗೆದುಕೊಂಡು ಹೋಗಿ ಹಾಕಿ ಅವರ ಜೀವನದ ನಿರ್ದಿಷ್ಟವಾದ ಆದಾಯ ನಷ್ಟಗಳನ್ನು ಅವರೇ ಕಂಡುಹಿಡಿಯುತ್ತಾರೆ. ಅದಕ್ಕೋಸ್ಕರ ಹೈನುಗಾರಿಕೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕು. ಕೃಷಿ ಮತ್ತು ಹೈನುಗಾರಿಕೆ ಇವೆರಡು ಒಂದಕ್ಕೊಂದು ಅಡ್ಜಸ್ಟ್‌ಮೆಂಟ್ ಇರುವಂಥ ಕ್ಷೇತ್ರಗಳು. ಇವೆರಡಕ್ಕೂ ನೀವು ಅತಿ ಹೆಚ್ಚಿನ ರೀತಿಯಲ್ಲಿ ಒತ್ತನ್ನು ಕೊಟ್ಟು ಪ್ರೋತ್ಸಾಹವನ್ನು ಕೊಟ್ಟರೆ ಅದರ ಮೂಲಕ ಸ್ತ್ರೀಶಕ್ತಿ ಸಂಘಗಳಿಗೆ ಸಂಪನ್ಮೂಲವನ್ನು ಕ್ರೂಢೀಕರಿಸಿ ಕೊಡಲು ಇದೂ ಒಂದು ಮಾರ್ಗವಾಗುತ್ತದೆ. ಆ ನಿಟ್ಟಿನಲ್ಲಿ ನೀವು ಹೈನುಗಾರಿಕೆಗೆ ಹೆಚ್ಚಿನ ಒತ್ತನ್ನು ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲು ಬಯಸುತ್ತೇನೆ. ಅದರ ಜೊತೆಗೆ, ಇನ್ನೊಂದು ಆದಾಯದ ಮೂಲವಾಗಿ ಆಫ್ರಿಕನ್ ಬೀಡ್ ಟಗರುಗಳನ್ನು ಸಾಕುವ ಬಗ್ಗೆ ಹೇಳಿದ್ದೀರಿ. ಅದು ಬಹಳ ಒಳ್ಳೆಯದು. ಆಫ್ರಿಕನ್ ಬೀಡ್‌ಗಳನ್ನು ಹೆಚ್ಚಿನ ಮಟ್ಟದಲ್ಲಿ ತರುವ ವ್ಯವಸ್ಥೆಯನ್ನು ಮಾಡಬೇಕು. ಹೈನುಗಾರಿಕೆಗೆ, ಪಶುಸಂಗೋಪನಾ ಇಲಾಖೆಗೆ ಹೆಚ್ಚಿನ ಒತ್ತನ್ನು ಕೊಟ್ಟು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ಮೂಲಕ ನೀಡುವ ಸಾಲ ಸೌಲಭ್ಯಗಳಲ್ಲಿ ಹೈನುಗಾರಿಕೆಗೆ ಮೊದಲನೇ ಸ್ಥಾನವನ್ನು ಕೊಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಮತ್ತೊಂದು ವಿಚಾರವೆಂದರೆ, ರೈತರ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕೆ ಬಡ್ಡಿರಹಿತ ಸಾಲ ಕೊಡುತ್ತೇವೆ ಎಂದು ನೀವು ಹೇಳಿದ್ದೀರಿ. ಆದರೆ ಅವರಿಗೆ ಬಡ್ಡಿರಹಿತವಾಗಿ ಸಾಲ ಕೊಡುವವರು ಬೇಕಲ್ಲವೇ? ಹೇಗೆ ಸಾಲ ಕೊಡಿಸುತ್ತೀರಿ? ಅದಕ್ಕೆ ನೀತಿ ಏನು, ನಿಯಮವೇನು? ಅದೇನು ನೀತಿ ನಿಯಮಗಳನ್ನು ರೂಪಿಸುತ್ತೀರಿ ಎಂದು ನಮಗೆ ಗೊತ್ತಿಲ್ಲ. ಒಟ್ಟಿನಲ್ಲಿ ರೈತರ ಮಕ್ಕಳಿಗೆ ಸಾಲ ಸಿಗಬೇಕು. ಬಡ್ಡಿರಹಿತ ಸಾಲ ಕೊಡುತ್ತೇವೆ ಎಂದು ನೀವು

ಸುಮ್ಮನೆ ಇಲ್ಲಿ ಹೇಳಿಬಿಟ್ಟು, ಅವರು ಬ್ಯಾಂಕುಗಳಿಗೆ ಹೋದಾಗ ಅಲ್ಲಿ ಬ್ಯಾಂಕುಗಳವರು, ನೀನು ಅವನನ್ನು ಕರೆದುಕೊಂಡು ಬಾ, ಇವನನ್ನು ಕರೆದುಕೊಂಡು ಬಾ, ನಿನ್ನ ಮನೆಯನ್ನು ಸೆಕ್ಯುರಿಟಿ ಕೊಡು, ಸರ್ಕಾರಿ ಅಧಿಕಾರಿಯ ಸೆಕ್ಯುರಿಟಿ ಕೊಡು ಎಂದು ಹೇಳಿದರೆ ಆಗುವುದಿಲ್ಲ. ಬಡ್ಡಿರಹಿತ ಸಾಲ ನೀಡುವ ನಿಮ್ಮ ಈ ನಿರ್ಧಾರವನ್ನು ಸ್ವಾಗತ ಮಾಡುತ್ತಿದ್ದೇವೆ. ಆದರೆ ರೈತರ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಆ ಸಾಲ ಸಿಗಬೇಕು. ಇವತ್ತು ರೈತರು ವಂಚಿತರಾಗಿರುವಂತೆ ಆಗಕೂಡದು. ಇದಕ್ಕೆ ನೀವು ಯಾವ ನೀತಿ, ನಿಯಮಾವಳಿಗಳನ್ನು ರೂಪಿಸುತ್ತೀರೋ ರೂಪಿಸಿ. ಸಾಲವನ್ನು ಕಮರ್ಷಿಯಲ್ ಬ್ಯಾಂಕುಗಳಲ್ಲಿ ಕೊಡಿಸುತ್ತೀರೋ, ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ ಕೊಡಿಸುತ್ತೀರೋ, ಎಲ್ಲಿ ಕೊಡಿಸುತ್ತೀರೋ ನನಗೆ ಗೊತ್ತಿಲ್ಲ. ಆದರೆ ಅದನ್ನು ಕೊಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾದಂಥ ಕೆಲಸ ಆಗಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಬಯಸುತ್ತೇನೆ.

ಮತ್ತೊಂದು ವಿಚಾರವೆಂದರೆ, ಸಹಕಾರಿ ರಂಗದಲ್ಲಿ ರೈತರಿಗೆ 1% ಬಡ್ಡಿದರದಲ್ಲಿ ಸಾಲ ಕೊಡುತ್ತೇವೆ ಎಂದು ಹೇಳಿದ್ದೀರಿ. ಎಷ್ಟು ಸಾವಿರ ಜನರಿಗೆ ಕೊಡಬೇಕು ಎಂದು ಈಗಾಗಲೇ ಫಿಕ್ಸ್ ಆಗಿಬಿಟ್ಟಿದೆ. ಸಾಲ ತೆಗೆದುಕೊಳ್ಳುವುದಕ್ಕೆ ಹೋಗುವವರು ಅರ್ಜಿಗಳಿಗೆ ಸೈನ್ ಹಾಕುತ್ತಾರೆ ಅಷ್ಟೇ. ಅಲ್ಲಿಯ ಸೆಕ್ರೆಟರಿಯವರೇ ಆ ದುಡ್ಡನ್ನು ತೆಗೆದುಕೊಂಡು, ನಾಲ್ಕು ದಿನಗಳಾದ ಮೇಲೆ ಮತ್ತೆ ಅದನ್ನು ತಂದುಬಿಟ್ಟು ತುಂಬುತ್ತಾರೆ. ಏಕೆಂದರೆ, ಅವರ ಸೊಸೈಟಿ ರನ್ ಆಗಬೇಕಲ್ಲವೇ? ಸಾಲ ತೆಗೆದುಕೊಂಡವರು ಡೀ-ಫಾಲ್ಟರ್ ಆಗುತ್ತಾರೆ. ಅದಕ್ಕೋಸ್ಕರ ಅವನೇ ವಾಪಸ್ಸು ತಂದು ತುಂಬುತ್ತಾನೆ. ಈಗಾಗಲೇ ಆ ಪದ್ಧತಿ ಬಂದುಬಿಟ್ಟಿದೆ. ಇದು ಸತ್ಯ. ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ ಹೊಸ ರೈತರಿಗೆ ಸಾಲ ಸಿಗುತ್ತಿಲ್ಲ. ಇದುವರೆಗೆ 22-23% ರೈತರಿಗೆ ಸಾಲ ಸಿಕ್ಕಿರಬಹುದು. ಹೊಸ ರೈತರಿಗೆ ಸಾಲ ಸಿಗಬೇಕು. 1% ಬಡ್ಡಿದರದಲ್ಲಿ ಸಾಲ ಕೊಡುತ್ತೇವೆ ಎನ್ನುವ ನಿಮ್ಮ ಪದಗಳು ಗ್ರಾಮೀಣ ಪ್ರದೇಶದ ಜನರ ತಲೆಗೆ ಹೋಗಬೇಕು ಎಂದರೆ 10ರಿಂದ 20% ಹೊಸ ರೈತರಿಗೆ ಸಾಲ ಸಿಗಬೇಕು. ಆಗ ನಿಮ್ಮ ಈ ಕೃಷಿ ಬಜೆಟ್‌ಗೆ ಒಂದು ಅರ್ಥ ಬರುತ್ತದೆ. ನಿಜವಾಗಲೂ ಜನ ನಿಮ್ಮನ್ನು ನೆನೆಯುತ್ತಾರೆ. ನಿಜವಾಗಲೂ

ರೈತರ ಬಾಳು ಹಸನಾಗುತ್ತದೆ. ಆ ಒಂದು ನಿಟ್ಟಿನಲ್ಲಿ ನೀವು ಕೆಲಸ ಮಾಡಬೇಕೇ ಹೊರತು ಈಗಿರುವವರಿಗೇ ರೊಟೇಷನ್ ಮಾಡಿ ಎಂದು ಹೇಳಿದರೆ 1% ಬಡ್ಡಿದರದಲ್ಲಿ ಸಾಲ ಕೊಡುವ ಯೋಜನೆಯಿಂದ ಕರ್ನಾಟಕ ರಾಜ್ಯದ ಯಾವ ರೈತರಿಗೂ ಒಳ್ಳೆಯದಾಗುವುದಿಲ್ಲ, ಅದರಿಂದ ಅವರಿಗೆ ಸಹಾಯವಾಗುವುದಿಲ್ಲ. ಅದಕ್ಕಾಗಿ ಆ ನಿಟ್ಟಿನಲ್ಲಿ ಕೆಲಸ ಮಾಡಬೇಕು. ನೀವು ಕಮರ್ಷಿಯಲ್ ಬ್ಯಾಂಕುಗಳಿಗೆ ಯಾವ ರೀತಿ ತಾಕೀತು ಮಾಡುತ್ತೀರೋ ಗೊತ್ತಿಲ್ಲ. ನಿಜವಾದಂಥ ರೈತರಿಗೆ ಸಾಲ ಸಿಗುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ಈ ವಿದ್ಯುಚ್ಛಕ್ತಿ ಬವಣೆ ಎನ್ನುವುದು ಅಂದಿನಿಂದಲೂ ನಡೆದುಕೊಂಡು ಬಂದಿದೆ. ಹೊಸದಾಗಿ ಹೆಚ್ಚು ವಿದ್ಯುತ್ತನ್ನು ಉತ್ಪತ್ತಿ ಮಾಡುವುದಕ್ಕೆ ಯಾರೂ ಹೇರಳವಾದ ಬಂಡವಾಳವನ್ನು ಈ ರಾಜ್ಯದಲ್ಲಿ ಹಾಕಲಿಲ್ಲ. ಗುಂಡೂರಾಯರ ಕಾಲದಿಂದ ಇಲ್ಲಿಯವರೆಗೂ, ಇದ್ದುದನ್ನೇ ಜನರಿಗೆ ಹಂಚಿ ಓಟು ತೆಗೆದುಕೊಳ್ಳುವ ಪ್ರಯತ್ನ ಮಾಡಿದರೇ ಹೊರತು ಹೆಚ್ಚುತ್ತಿರುವ ಜನಸಂಖ್ಯೆ ಗನುಗುಣವಾಗಿ, ದೇಶದ ಅಭಿವೃದ್ಧಿಗನುಗುಣವಾಗಿ, ಬೆಂಗಳೂರಿನಂಥ ಮಹಾನಗರಗಳು ಬೆಳೆಯುತ್ತಿರುವುದಕ್ಕೆ ಅನುಗುಣವಾಗಿ, ಬೇಡಿಕೆಗೆ ಅನುಗುಣವಾಗಿ ಈ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಿಲ್ಲ. ಈ ಜವಾಬ್ದಾರಿಯನ್ನು ಸರ್ಕಾರ ನಡೆಸಿದಂಥ ಎಲ್ಲರೂ ಹೊರಬೇಕಾಗುತ್ತದೆ. ಮೂರು ವರ್ಷಗಳಿಂದ ಆಡಳಿತ ನಡೆಸುತ್ತಿರುವ ನೀವೂ ಹೊರಬೇಕಾಗುತ್ತದೆ, ಹಿಂದೆ ಇದ್ದವರೂ ಹೊರಬೇಕಾಗುತ್ತದೆ. ಆದರೆ ನೀವು ಕ್ರಾಂತಿಕಾರಕವಾಗಿ ಇದಕ್ಕೆ ಬಂಡವಾಳವನ್ನು ಹಾಕಿ, ಬೇಡಿಕೆಗೆ ಅನುಸಾರವಾಗಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವಂತಾಗಬೇಕು. 20%–30% ಕೊರತೆ ಬೀಳಲಿ ಪರವಾಗಿಲ್ಲ, ಆ ಕೊರತೆ ಮುಖ್ಯವಲ್ಲ. ಆದರೆ ಬೇಡಿಕೆಗೆ ಅನುಗುಣವಾಗಿ ನೀವು ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಮಾಡದೇ ಹೋದರೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ 3 ಗಂಟೆಯೂ ಕೊಡುವುದಕ್ಕಾಗುವುದಿಲ್ಲ, 2 ಗಂಟೆಯೂ ಕೊಡುವುದಕ್ಕಾಗುವುದಿಲ್ಲ, ರೈತರ ಗೋಳು ಗೋಳಾಗಿಯೇ ಇರುತ್ತದೆ, ರೈತರ ಪಾಡು ಹಾಗೆಯೇ ಇರುತ್ತದೆ.

ರೈತರಿಗೆ ಒಂದು ಟಿ.ಸಿ. ಕೊಡಿಸುವುದಕ್ಕೆ ಎಂ.ಎಲ್.ಎ.ಗಳಾದ ನಾವು ಪ್ರತಿದಿವಸ 16 ಸಲ ಆಫೀಸಿಗೆ ಹೋಗಬೇಕಾಗುತ್ತದೆ. ಇವತ್ತು ಆ ಮಟ್ಟದಲ್ಲಿ ಇದೆ. ಟಿ.ಸಿ. ರಿಪೇರಿ ಮಾಡುವವನಿಗೆ ಎಂ.ಎಲ್.ಎ.ಗಳಾದ ನಾವು ಹೋಗಿ, ನಾಳೆ ಜಾತ್ರೆ ಇದೆ ಒಂದು ಟಿ.ಸಿ. ಕೊಡಯ್ಯಾ ಎಂದು ಕೈಮುಗಿಯಬೇಕಾದಂಥ ಪರಿಸ್ಥಿತಿ ಬಂದಿದೆ. ಅದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ, ಈ ದೇಶದಲ್ಲಿ ವಿದ್ಯುಚ್ಛಕ್ತಿ ಬವಣೆ ಹೆಚ್ಚಾಗಿದೆ. ಎಷ್ಟು ಹಾಕಿದರೂ ಕರ್ನಾಟಕ ರಾಜ್ಯದ ವಿದ್ಯುಚ್ಛಕ್ತಿ ಬವಣೆ ಪರಿಹಾರವಾಗುತ್ತದೋ, ಇಲ್ಲವೋ ನನಗೆ ಗೊತ್ತಿಲ್ಲ. ಆ ಮಟ್ಟಕ್ಕೆ ಈ ವ್ಯವಸ್ಥೆ ಹೋಗಿದೆ. ಅದನ್ನು ಯಾವ ರೀತಿ ಮಾಡುತ್ತೀರೋ ಅದು ನಿಮಗೆ ಬಿಟ್ಟಿದ್ದು. ಕೇಂದ್ರ ಸರ್ಕಾರವೂ ಇದರ ಜೊತೆಗೆ ಕೈಜೋಡಿಸಬೇಕು, ಕೇಂದ್ರ ಸರ್ಕಾರದ ಬಂಡವಾಳವೂ ಇದಕ್ಕೆ ವಿಶೇಷವಾಗಿ ಬೀಳಬೇಕು. ಈ ದೇಶದ ರೈತನ, ಕೈಗಾರಿಕೋದ್ಯಮಿಗಳ ಮತ್ತು ರಾಜ್ಯದ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಕ್ರಾಂತಿಕಾರಕವಾದ ಬೆಳವಣಿಗೆಯಾಗಿ ಮಾರ್ಪಾಡಾಗಬೇಕಾಗಿದೆ. ಆ ನಿಟ್ಟಿನಲ್ಲಿ ಎಲ್ಲರೂ ಪಕ್ಷಾತೀತವಾಗಿ ಒಗ್ಗೂಡಿ, ಈ ದೇಶದ ಭವಿಷ್ಯದ ದೃಷ್ಟಿಯಿಂದ ಮಾರಕವಾಗಿರುವ ಇದನ್ನು ನಾವೆಲ್ಲರೂ ಸೇರಿ ಸಮಗ್ರವಾಗಿ ಎದುರಿಸಬೇಕು ಎನ್ನುವ ಚೈತನ್ಯವನ್ನು ಇಟ್ಟುಕೊಂಡು ಹೋರಾಟವನ್ನು ಮಾಡಬೇಕೇ ಹೊರತು, ಬರೀ ಭಾಷಣ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಇದಕ್ಕೆ ಒಂದು ಹೊಸ ನೀತಿಯನ್ನೇ ರೂಪಿಸಿ, ಬೇರೆ ಯಾವ್ಯಾವುದಕ್ಕೋ ಹಾಕುವ ಎಲ್ಲ ಬಂಡವಾಳವನ್ನೂ ಇದರಲ್ಲಿ ತೊಡಗಿಸಿ, ಇದು ದೇಶದ ಅಭಿವೃದ್ಧಿಗೆ ಪೂರಕವಾಗಿರುವಂಥ ನಿರ್ಧಾರ ಎನ್ನುವುದನ್ನು ಬಹಳ ದೊಡ್ಡ ಮಟ್ಟದಲ್ಲಿ ಯೋಚನೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ, ನೀರಾವರಿಗೆ ನೀವು ಎಷ್ಟು ಹಣವನ್ನು ಇಟ್ಟಿದ್ದೀರಿ? ಅಂದಿನ ಕಾಲದಲ್ಲೇ ಕೃಷ್ಣ ಭಾಗ್ಯ ಜಲ ನಿಗಮ, ಕಾವೇರಿ ನೀರಾವರಿ ನಿಗಮ, ಕರ್ನಾಟಕ ನೀರಾವರಿ ನಿಗಮ ಇವೆಲ್ಲವುಗಳಿಗೂ ಸಾಲ, ಬಾಂಡುಗಳು ಇಷ್ಯೂ ಆಗಿಬಿಟ್ಟಿವೆ. ಇವೆಲ್ಲವನ್ನೂ ರೀಪೇಮೆಂಟ್ ಮಾಡಬೇಕು, ಇವೆಲ್ಲವನ್ನೂ ತೀರಿಸಬೇಕು. ಇವತ್ತಿನ ಆರ್ಥಿಕ ಉಬ್ಬರದ ಏರಿಕೆಗೆ

ಅನುಗುಣವಾಗಿ ನೀವು ಹಣವನ್ನು ಇಡಬೇಕು. ಇಲ್ಲದಿದ್ದರೆ ಯಾವ ಸಾಧನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಬಹಳ ಪ್ರಮಾಣದಲ್ಲಿ ನೀರಾವರಿಗೆ ಹಣ ಬೇಕಾಗುತ್ತದೆ. ಆ ನಿಟ್ಟಿನಲ್ಲಿ ನೀರಾವರಿಗೆ ಹೆಚ್ಚಿನ ಹಣವನ್ನು ತೊಡಗಿಸಲು ಪ್ರಾಮಾಣಿಕವಾದಂಥ ಪ್ರಯತ್ನವಾಗಬೇಕು. ಈ ರೀತಿ ನೀರಾವರಿಗೆ ಹೆಚ್ಚಿನ ಒತ್ತನ್ನು ಕೊಟ್ಟಾಗ, ಅದಕ್ಕೆ ವಿಶೇಷವಾದಂಥ ಪ್ರಮಾಣದ ಹಣವನ್ನು ತೊಡಗಿಸಿ, ಅದು ಖರ್ಚಾದರೆ ಮಾತ್ರ ನೀರಾವರಿಗೆ ಉತ್ತೇಜನವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಅದರಲ್ಲಿ ಸಫಲತೆಯನ್ನು ಕಾಣಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನೂ ಸಹ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೃಷಿಗೆ ಸಂಬಂಧಪಟ್ಟಂತೆ ಏನೊಂದು ಆಶಾಗೋಪುರವನ್ನಿಟ್ಟು ಕೊಂಡು ನೀವು ಈ ಕೃಷಿ ಬಜೆಟ್‌ಅನ್ನು ಮಂಡನೆ ಮಾಡಿದ್ದೀರಿ, ಇದು ನಿಜವಾಗಿಯೂ ಅರ್ಥಪೂರ್ಣವಾಗಬೇಕಾದರೆ, ಇದು ರಾಜಕೀಯ ದುರುದ್ದೇಶದಿಂದ ಕೂಡಿದುದು ಅಲ್ಲವೆಂದು ತೋರಿಸಲು ಈ ಬಜೆಟ್‌ಅನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇದನ್ನು ಓದಿದ ಮೇಲೆ ನಾವಂತೂ, ರಾಜಕೀಯ ದುರುದ್ದೇಶ, ರಾಜಕೀಯ ಉದ್ದೇಶ, ರಾಜಕೀಯ ದೃಷ್ಟಿಯಿಂದ ಈ ಒಂದು ಬಜೆಟ್ಟನ್ನು ಮಂಡನೆ ಮಾಡಿದ್ದೀರಿ ಎಂದು ತೀರ್ಮಾನ ಮಾಡಿದ್ದೇವೆ. ಈ ದೃಷ್ಟಿಯಿಂದ, ಈ ಒಂದು ಬಜೆಟ್‌ಅನ್ನೇನು ಮಂಡನೆ ಮಾಡಿದ್ದೀರಿ, ಇದರಲ್ಲಿ ರೈತರ ಬಗ್ಗೆ ವಿಶೇಷವಾದಂಥ ಯಾವ ಒಂದು ಕಾಳಜಿಯೂ ಇಲ್ಲ ಎನ್ನುವುದನ್ನು ನಾವು ಇದನ್ನು ಓದಿದ ಮೇಲೆ ತಿಳಿದುಕೊಂಡಿದ್ದೇವೆ. ಆದರೆ ನೀವು ಇಟ್ಟಿರುವುದರಲ್ಲೇ ಇದನ್ನು ಉತ್ತಮವಾದ ರೀತಿಯಲ್ಲಿ ಎಫೆಕ್ಟಿಗೆ ತಂದರೆ ಇದಕ್ಕೆ ಸ್ವಲ್ಪ ಅರ್ಥ ಬರುತ್ತದೆ ಎನ್ನುವ ಮಾತನ್ನು ಈ ಕೃಷಿ ಬಜೆಟ್ ವಿಚಾರದಲ್ಲಿ ಹೇಳುತ್ತೇನೆ.

ಇನ್ನು, ಜನರಲ್ ಬಜೆಟ್ ಬಗ್ಗೆ ಮಾತನಾಡುವುದಾದರೆ, ಲೋಕೋಪಯೋಗಿ ಇಲಾಖೆಗೆ ಇಟ್ಟಿರುವ ಹಣ ನಿಜವಾಗಿಯೂ ಯಾವುದಕ್ಕೂ ಸಾಲುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ MDR, ODR, State Highways ಎಷ್ಟು ಕಿ.ಮೀ. ಇವೆ? ಇವತ್ತು ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಿ.ಮೀ. ರಸ್ತೆಗಳು ಅಧೋಗತಿಗೆ ಇಳಿದಿವೆ ಎಂಬುದನ್ನು ದಯವಿಟ್ಟು ಸಮೀಕ್ಷೆ ಮಾಡಿ. ಇದು

ಎಲ್ಲಾ ಶಾಸಕರಿಗೂ ಗೊತ್ತಿದೆ. ಆ ಶಾಸಕರು, ಆಡಳಿತ ಪಕ್ಷದ ಶಾಸಕರೆಂದು ನಿಮ್ಮ ಎದುರು ಮಾತನಾಡುತ್ತಿಲ್ಲ. ನಾವು ವಿರೋಧ ಪಕ್ಷದ ಶಾಸಕರು, ನಾವು ಹೇಳುವುದು ನಡೆಯುವುದಿಲ್ಲವೆಂದು ನಿಮ್ಮ ಹತ್ತಿರ ಹೇಳುವುದಿಲ್ಲ. ಈ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ಗ್ರಾಮೀಣ ಪ್ರದೇಶದ ರಸ್ತೆಗಳನ್ನು ಒಂದು ಸಾರಿ ಸಮೀಕ್ಷೆ ಮಾಡಿಸಿ. ನೀವು ಯಾವ ರೂಪದಲ್ಲಿ ಸಾಲ ಮಾಡುತ್ತೀರೋ ಗೊತ್ತಿಲ್ಲ. ಹಳ್ಳಿಗಳಲ್ಲಿ ಶಾಸಕರ ಮರ್ಯಾದೆ ಉಳಿಯಬೇಕಾದರೆ, ಅವರು ನಮ್ಮ ಕೊರಳುಪಟ್ಟಿಯನ್ನು ಹಿಡಿದುಕೊಳ್ಳುವ ಮೊದಲು ದಯವಿಟ್ಟು ಆ ಹಳ್ಳಿಗಳಲ್ಲಿರುವ ರಸ್ತೆಗಳಗುಂಡಿಯನ್ನು ಮುಚ್ಚಿಸುವ ವ್ಯವಸ್ಥೆ ಮಾಡಬೇಕು. ನೀವು ಆಡಳಿತ ಪಕ್ಷದ ಸದಸ್ಯರ ಕ್ಷೇತ್ರಗಳಿಗೆ ಹಣ ಕೊಡುತ್ತೀರೋ, ಇಲ್ಲವೋ ಗೊತ್ತಿಲ್ಲ. ನಮ್ಮ ಭಾಗದ ರಸ್ತೆಗಳಂತೂ ಯಾವ ಹಂತಕ್ಕೆ ತಲುಪಿವೆ ಎಂದರೆ, ಜನ, ನಿಮ್ಮ ಕೈಯಲ್ಲಿ ರಸ್ತೆಯ ಒಂದು ಗುಂಡಿ ಮುಚ್ಚಿಸಲಿಕ್ಕಾಗಲಿಲ್ಲ, ನೀವು ಯಾವ ಸೀಮೆಯ ಎಂಎಲ್ಎ ಎಂದು ಕೇಳುತ್ತಾರೆ. ನೀವು Assembly ಗೆ ಏಕೆ ಆರಿಸಿ ಹೋದಿರಿ ಎನ್ನುತ್ತಾರೆ. ಈ ಪರಿಸ್ಥಿತಿ ಇದೆ. ದಯವಿಟ್ಟು, ತಾವು ಬೇಜಾರು ಮಾಡಿಕೊಳ್ಳಬೇಡಿ. ಸರ್ಕಾರದಲ್ಲಿ ಬೇಕಾದಷ್ಟು ಹಣವಿದೆ ಎಂದು ಹೇಳುತ್ತೀರಿ. ಆದರೆ, ಅಲ್ಲಿನ contractors ಪಡುವ ಬವಣೆ, ಅವರ ಕಷ್ಟ ನೋಡಿದರೆ ನಿಜವಾಗಿಯೂ ಅದನ್ನು ಹೇಳುವುದಕ್ಕಾಗುವುದಿಲ್ಲ. ಆ ಎಲ್ಲದರ ಬಗ್ಗೆ ವಿಶೇಷ ಕಾಳಜಿ ವಹಿಸಿ. ಈಗ ನೀವು 20-20 ಕಿ.ಮೀ. ರಸ್ತೆಗಳನ್ನು ಕೊಟ್ಟರೆ, PMGSY ಅಡಿಯಲ್ಲಿ ಮಾಡಿಸುತ್ತಾರೆ. ಗ್ರಾಮೀಣ inter link roads ಏನಿದ್ದವು, ಅಲ್ಲಿ ಒಳ್ಳೆಯ ಕೆಲಸವಾಗುತ್ತಿದೆ. ಈ ಸಾರಿಯೂ ಸಹ 20 ಕಿ.ಮೀ. ರಸ್ತೆ ಕೊಡುತ್ತಾರೆಂದು ಭಾವಿಸಿದ್ದೆವು. ಕಳೆದ ಸಾರಿಯ ಬಜೆಟ್‌ನಲ್ಲಿ ಇಟ್ಟಿದ್ದ ಹಣದಲ್ಲಿ ಒಂದು ಪೈಸೆಯೂ ರಿಲೀಸ್ ಆಗಿಲ್ಲ. ಕೆಲಸ ಕಾರ್ಯಗತಕ್ಕೆ ಬರಲಿಲ್ಲ. ನಮ್ಮ ಕಡೆ ಟೆಂಡರ್ ಎಲ್ಲಾ ಹಾಕಿದ್ದಾರೆ. Package tender ಕೂಡ ಒಂದು ತಪ್ಪು ನಿರ್ಧಾರವಾಗಿದೆ. ಆ package ಬದಲು individual ಆಗಿ 50 ಲಕ್ಷ, 70 ಲಕ್ಷ ರೂಪಾಯಿಗಳ ಟೆಂಡರ್ ಅನ್ನು ಮಾಡಿದ್ದರೆ ಅನುಕೂಲವಾಗುತ್ತಿತ್ತು. ಬಹುಶ: ಸ್ಥಳೀಯ contractors ಈ ಕೆಲಸವನ್ನು ಮಾಡಿಸುತ್ತಿದ್ದರು. ಆ package ವ್ಯವಸ್ಥೆ ಸರಿ ಇಲ್ಲ. ಅದನ್ನು ವ್ಯವಸ್ಥಿತವಾಗಿ ಮಾಡಬೇಕಾಗಿದೆ. ಇಲ್ಲದಿದ್ದರೆ, ಇವರು ಹಣ ಇಟ್ಟರೂ ಪ್ರಯೋಜನವಿಲ್ಲ. ಆ ಕೆಲಸ ಮಾಡಬೇಕು. Package ವ್ಯವಸ್ಥೆ ತಂದು ಎಲ್ಲಾ ಕೆಲಸ package ಆಗಿ

ಹೋಗಿದೆ. ಏಕೆ package ಮಾಡುತ್ತಾರೋ ನನಗೆ ಗೊತ್ತಿಲ್ಲ. ಸ್ಥಳೀಯವಾಗಿ ಒಳ್ಳೆಯ contractors ಇರುತ್ತಾನೆ, ಆದರೆ, ಅವನಿಗೆ eligibility ಇರುವುದಿಲ್ಲ. ಅವನಿಗೆ ಅದು ತನ್ನ ಊರು, ತನ್ನ ರಸ್ತೆ ಅದನ್ನು ಮಾಡಬೇಕೆನ್ನುವ ಕಾಳಜಿ ಇರುತ್ತದೆ. ಆದರೆ, ಇಲ್ಲಿ ಯಾರೋ ಬೆಂಗಳೂರಿನಲ್ಲಿ ಕುಳಿತು ಅಲ್ಲಿಯ ಟೆಂಡರ್‌ನಲ್ಲಿ ಭಾಗವಹಿಸುತ್ತಾರೆ. ಮತ್ತೆ ಅವರೇ percentage ಕೊಟ್ಟು ಸ್ಥಳೀಯ contractor ಕೈಯಲ್ಲಿ ಆ ಕೆಲಸವನ್ನು ಮಾಡಿಸುತ್ತಾರೆ. ಈ ವ್ಯವಸ್ಥೆ ತಪ್ಪಬೇಕು. ನಿಜವಾದ contractor ಗಳ ಬವಣೆ ತಪ್ಪಬೇಕು. ಅವರು ನಿರುದ್ಯೋಗಿಗಳಲ್ಲವೇ? ಆ package ನಿಲ್ಲಬೇಕು. ಮೊರಾರ್ಜಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ಕಾಮಗಾರಿಗಳು ಇವೆಲ್ಲ 150 ಕೋಟಿ ರೂಪಾಯಿಗಳ ಒಂದೊಂದು package ಆಗಿದೆ. ಈ ರೀತಿ package ಏಕೆ ಮಾಡುತ್ತೀರಿ? ಸ್ಥಳೀಯವಾಗಿ ಯಾವ contractors ಗೆ eligibility ಇದೆ, ಇವರಿಗೆ ಯಾರು ಆಪ್ತ ಇದ್ದಾರೆ, ಆ contractor ನ eligibility ಗೆ ಅನುಸಾರ tender ಕರೆಯುತ್ತಾರೆ, ಆ contractor ಗೆ eligibility ಗೆ ಅನುಸಾರವಾಗಿ ಇವರು conditions ಹಾಕುತ್ತಾರೆ. ಇದು ನಿಲ್ಲಬೇಕು. ಆ package ನಿಂದ ಅವ್ಯವಸ್ಥೆಗಳಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಕೆಟ್ಟ ಹೆಸರು ಬರುತ್ತಿದೆ. ಇವೆಲ್ಲವನ್ನೂ ನಿಲ್ಲಿಸಬೇಕು. ಇವೆಲ್ಲವನ್ನೂ ಅಧಿಕಾರಿಗಳು ಮಾಡುವುದರಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ಕೆಟ್ಟ ಹೆಸರು ಬರುತ್ತದೆ. ಇವೆಲ್ಲವನ್ನೂ ನಿಮ್ಮ ಗಮನಕ್ಕೇ ಬಾರದ ರೀತಿಯಲ್ಲಿ ಮಾಡುತ್ತಾರೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ರೈತ ಸಂಪರ್ಕ ಕೇಂದ್ರಗಳಿಗೆ ತಾವು ಕಟ್ಟಡಗಳನ್ನು ಮಂಜೂರು ಮಾಡಿದ್ದೀರಿ. ಅದೂ package. ಅದಕ್ಕೆ ಬೆಂಗಳೂರಿನಿಂದಲೇ contractor fix ಆಗಿದ್ದಾರೆ. ಇವು ರೈತ ಸಂಪರ್ಕ ಕೇಂದ್ರಗಳು, 25 ಲಕ್ಷ ರೂಪಾಯಿಗಳ work ಆಗಿದೆ. ಸ್ಥಳೀಯ contractor ಗಳು ಬೇಕಾದಷ್ಟಿದ್ದಾರೆ. ಹಾಗಾಗಿ ಅದನ್ನು ಕೂಡ ರದ್ದು ಮಾಡಬೇಕು.

ಶ್ರೀ ಸಿದ್ದುಸವದಿ: Package System ಶ್ರೀ ರೇವಣ್ಣನವರ ಕಾಲದಿಂದ ಇದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ರೇವಣ್ಣನವರ ಕಾಲದಲ್ಲಿ package ಇರಲಿಲ್ಲ. ಸುಮ್ಮನೆ ಏಕೆ ಹೇಳುತ್ತೀರಿ? ಪಕ್ಷಾತೀತವಾಗಿ ಬಿಡಿ. ಮುಖ್ಯಮಂತ್ರಿಯವರಿಗೆ ಒಳ್ಳೆಯ ಕೆಲಸ ಮಾಡುವುದಕ್ಕೆ ಹೇಳೋಣ. ನಾನು ದ್ವೇಷದಿಂದ ಹೇಳುವ ಹಾಗಿದ್ದರೆ ನಾನು ಇದನ್ನು ಹೇಳುತ್ತಿರಲಿಲ್ಲ.

ಶ್ರೀ ಸಿದ್ದು ಸವದಿ: Package ಸಂಸ್ಕೃತಿ ಅವರಿಂದಲೇ ಬಂದಿದ್ದು.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಅವರಿಗೆ ಒಳ್ಳೆಯದಾಗಲಿ ಎಂದು ಹೇಳುತ್ತಿದ್ದರೆ ನೀವೇಕೆ ಹೀಗೆ ಹೇಳುತ್ತೀರಿ? ನನಗೆ ಗೊತ್ತಿದ್ದ ಹಾಗೆ ರೇವಣ್ಣನವರ ಕಾಲದಲ್ಲಿ package system ಇರಲಿಲ್ಲ. ನೀವೇನಾದರೂ ಹೊಸದಾಗಿ ಕಂಡು ಹಿಡಿದಿದ್ದರೆ ನನಗೆ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಇರಲಿಲ್ಲ. ನಾನು ರಾಜ್ಯದ ಬಗ್ಗೆ ಹೇಳುವುದಿಲ್ಲ. ನನ್ನ ಜಿಲ್ಲೆಯ ಬಗ್ಗೆ ಹೇಳುತ್ತೇನೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್: ರೇವಣ್ಣನವರ ಕಾಲದಲ್ಲಿ ಮಾಡಿರಬಹುದು. ಈಗ ಸರಿಯಿಲ್ಲವೆಂದರೆ ಅದನ್ನು ನೀವು ಈಗ ತೆಗೆಯಿರಿ.

ಶ್ರೀ ಎಂ.ಟಿ. ಕೃಷ್ಣಪ್ಪ: ಆಡಳಿತ ಪಕ್ಷದವರ ಸಮ್ಮತಿ ಇದೆ. ಇದನ್ನು ತೆಗೆಯಿರಿ ಎಂದು ಸಿ.ಎಂ. ರವರಿಗೆ ಹೇಳಿ. ಸುಮ್ಮನೆ ಏಕೆ ಆಡಳಿತ ಪಕ್ಷದ ಸದಸ್ಯರು ಕಿತ್ತಾಡುತ್ತೀರಿ?

ಶ್ರೀ ಕೆ.ಎಂ. ಶಿವಲಿಂಗೇಗೌಡ: ಲೋಕೋಪಯೋಗಿ ಇಲಾಖೆ ಬಗ್ಗೆ ವಿಶೇಷ ಕಾಳಜಿವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು, ನಗರಗಳು ಬೆಳೆಯುತ್ತಿವೆ. ನಗರಗಳು ಬೆಳೆಯುತ್ತಿರುವುದಕ್ಕೆ ಅನುಗುಣವಾಗಿ ಹೊಸ ಹೊಸ extensions ಬೆಳೆಯುತ್ತಿವೆ. ಕಳೆದ ಸಲ 5 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದೀರಿ. ಈ ಸಲ exceptional grants ಕಡಿಮೆ ಮಾಡಿದ್ದೀರಿ. State Finance Fund ಎಂದು ಏನಿತ್ತು ಅದನ್ನು ಕಡಿಮೆ ಮಾಡಿದ್ದೀರಿ. ಅದನ್ನು ಕಡಿಮೆ ಮಾಡಬೇಡಿ. ಅದು ಮೊದಲಿನ ಹಾಗೆ ಮುಂದುವರಿಯಬೇಕು. ಅದಕ್ಕೆ ಈ ವರ್ಷವೂ 5–5 ಕೋಟಿ ರೂಪಾಯಿಗಳನ್ನು ಇಡಿ. ನೀವು ಬೇಕಾದರೆ ಡಿ.ಸಿ.ಯವರಿಂದಲೇ ಕೆಲಸ ಮಾಡಿಸಿ. ಎಂಎಲ್‌ಎಗಳ contact ತೆಗೆದುಕೊಳ್ಳಿ. ನಿಮ್ಮ ಎಂಎಲ್‌ಎಗಳ contact ನ್ನಾದರೂ ತೆಗೆದುಕೊಳ್ಳಿ. ಈ ರಸ್ತೆಯನ್ನು ಯಾರು ಸೇರಿಸಿದರು ಎಂದರೆ ಡಿ.ಸಿ. ರೋಡ್ಸ್ ಎಂದು ಹೇಳುತ್ತಾರೆ. ನಾವು ಆಯ್ಕೆ ಮಾಡಿದ್ದು ಎಂದು ಹೇಳುವುದೇ ಇಲ್ಲ. ದಯಮಾಡಿ ಶಾಸಕರನ್ನು ಕೇಳಿ ಮಾಡುವುದಕ್ಕೆ

ಹೇಳಿ. ನಾವೂ ಸಹ ಮುಖ್ಯಮಂತ್ರಿಗಳ fund ಎಂದು ಹೇಳಿದ್ದೇವೆ ಮತ್ತು board ಸಹ ಹಾಕಿದ್ದೇವೆ. ಆದರೆ, ನಾವು ಆಯ್ಕೆ ಮಾಡದೆ ಡಿ.ಸಿ. ಆಯ್ಕೆ ಮಾಡುತ್ತಾರೆಂದರೆ, ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಿಯೇ? ಡಿ.ಸಿ.ಗೆ ಹಳ್ಳಿಗಳಲ್ಲಿರುವ ಕೆರೆಗಳ ಬಗ್ಗೆ ಗೊತ್ತಿರುತ್ತದೆಯೇ? ಅವರು ಯಾವತ್ತಾದರೂ ಊರಿಗೆ ಬಂದಿದ್ದಾರೆಯೇ? ದಯವಿಟ್ಟು ಇದನ್ನು ತಪ್ಪಿಸಬೇಕು. ಇವೆಲ್ಲವನ್ನೂ ತಪ್ಪಿಸುವುದರಿಂದ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಇನ್ನು, UGD ಗಳ ಬಗ್ಗೆ ಹೇಳುವುದಾದರೆ, ಹಿಂದೆ ಇದ್ದ UGD ಗಳೆಲ್ಲ collapse ಆಗಿವೆ. ನಮ್ಮ ರಸ್ತೆ National Highway ಆಗಿದೆ. ಆ UGD ಯನ್ನು National Highway ಯ ಎರಡೂ ಕಡೆ drain ಒಳಗಡೆ ಬಿಟ್ಟಿದ್ದಾರೆ. ಒಬ್ಬರೂ ಸಹ ಆ National highway ನಲ್ಲಿ ಹೋಗುವುದಕ್ಕಾಗುತ್ತಿಲ್ಲ. ಎಲ್ಲಾ ಕಡೆ ಗಬ್ಬು ನಾತ ಬರುತ್ತಿದೆ. ಹಿಂದಿನ ಕಾಲದ UGD ಗಳನ್ನು ತೆಗೆದುಹಾಕಿ ಹೊಸ UGD ಗಳನ್ನು ಮಾಡಲಿಕ್ಕೆ ನಗರಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಇನ್ನು, ಶಿಕ್ಷಣ ಇಲಾಖೆ ಬಗ್ಗೆ ಹೇಳುವುದಾದರೆ, ಸರ್ವ ಶಿಕ್ಷಣ ಅಭಿಯಾನ ಒಳ್ಳೆಯ ಯೋಜನೆಯಾಗಿದೆ. ಶಿಕ್ಷಣ ಇಲಾಖೆಗೆ ಒಂದು ಅರ್ಥ ಬರುವ ರೀತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಪ್ರಮುಖ ಪಾತ್ರವನ್ನು ಸರ್ವ ಶಿಕ್ಷಣ ಅಭಿಯಾನ ಮಾಡುತ್ತಿದೆ. ಅದನ್ನು ಈಗ ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣಕ್ಕೆ ವರ್ಗಾಯಿಸಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಹಿಂದೆ ಸರ್ವ ಶಿಕ್ಷಣ ಅಭಿಯಾನದಲ್ಲಿ ಮಾಡಿದ ಎಲ್ಲಾ ಯೋಜನೆಗಳನ್ನು ಉಳಿಸಿಕೊಂಡು ಹೋಗಲಿಕ್ಕೆ, maintain ಮಾಡುವ ವ್ಯವಸ್ಥೆಗೆ ನೀವು ಹಣ ಒದಗಿಸಬೇಕಾಗುತ್ತದೆ. ಈ ಸರ್ವ ಶಿಕ್ಷಣ ಅಭಿಯಾನ ಯೋಜನೆ ತೆಗೆದ ತಕ್ಷಣ ಅವೆಲ್ಲ ಯೋಜನೆಗಳು ನಿಂತುಹೋಗಿ ನಿಜವಾಗಿ ಆ ಯೋಜನೆಗಳಿಗೆ ಅರ್ಥ ಬರದ ರೀತಿಯಲ್ಲಿ ಆಗುತ್ತದೆ. ಈಗ ಮತ್ತೆ ಆ ಯೋಜನೆ ಪ್ರೌಢ ಶಿಕ್ಷಣಕ್ಕೆ ಹೋಗಿದೆ. ಆ ಯೋಜನೆ ಪ್ರಾಥಮಿಕ ಶಿಕ್ಷಣದಲ್ಲಿಯೂ ಉಳಿದುಕೊಳ್ಳಬೇಕು.

ಇನ್ನು, ರೈತರ ಮಕ್ಕಳಿಗೆ ಉಚಿತವಾಗಿ, ಬಡ್ಡಿ ರಹಿತವಾಗಿ ಸಾಲವನ್ನು ಉನ್ನತ ಶಿಕ್ಷಣದಲ್ಲಿ ಕೊಡಿಸುತ್ತಿದ್ದೇನೆ ಎಂದು ಹೇಳಿದ್ದೀರಿ. ಅದು ಪಟ್ಟಣ ಪ್ರದೇಶದ ಕಾರ್ಮಿಕರ ಮಕ್ಕಳಿಗೂ ಅನ್ವಯಿಸಬೇಕು. ಪಟ್ಟಣದಲ್ಲಿರುವವರೆಲ್ಲರೂ ಶ್ರೀಮಂತರಲ್ಲ. ಅಲ್ಲಿಯೂ ಬಹಳ ಜನ ಬಡವರಿದ್ದಾರೆ. ಅಲ್ಲಿ ಕೂಲಿ ಮಾಡಿ ಜೀವನ ಸಾಗಿಸುವವರು ಜಾಸ್ತಿ ಇದ್ದಾರೆ. ಅವರ ಕಡೆಗೆ ಹೆಚ್ಚು ಗಮನಹರಿಸಬೇಕು. ಇನ್ನು slums ವಿಚಾರ. ನಾವು ಈಗಾಗಲೇ ಅವರಿಗೆ

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದೇವೆ, ಅವರು ಬಹಳ ನೆಮ್ಮದಿಯಿಂದ ಇದ್ದಾರೆ ಎನ್ನುತ್ತಾರೆ. ಆದರೆ, ಇವತ್ತಿನ ದಿವಸ ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟಿಲ್ಲ. ಅವರು ಸಾಲ ತೆಗೆದುಕೊಳ್ಳಬೇಕೆಂದರೆ ಅವರ ಹತ್ತಿರ ಹಕ್ಕುಪತ್ರ ಇಲ್ಲ. ಹಕ್ಕುಪತ್ರವನ್ನು ಪುಕ್ಕಟೆ ಕೊಡಬಹುದು. ಅದಕ್ಕೆ ಬಂಡವಾಳ ಬೇಕಾಗಿಲ್ಲ. ನಿಮಗೆ ಒಳ್ಳೆಯ ಹೆಸರು ಬರುತ್ತದೆ ದಯಮಾಡಿ ಕೊಡಿ. ಹಕ್ಕುಪತ್ರ ಕೊಡದಿರುವುದರಿಂದ ಬಹಳ ಜನ ಹಕ್ಕುಪತ್ರ ಬೇಕೆಂದು ಬರುತ್ತಿರುತ್ತಾರೆ. ಬೆಂಗಳೂರು ನಗರದ ವಿಷಯ ನನಗೆ ಗೊತ್ತಿಲ್ಲ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ, ಪುರಸಭೆಗಳಲ್ಲಿ ಇದನ್ನು ಕೊಡಲು ನಿಮಗೆ ಬಂಡವಾಳ ಬೇಕಾಗಿಲ್ಲ. ಅವರು ಎಷ್ಟು ಅಡಿಯಲ್ಲಿ ಕಟ್ಟಿಕೊಂಡಿದ್ದಾರೆ ಅಷ್ಟಕ್ಕೆ Slum Clearance Board ನಿಂದ ಹಕ್ಕುಪತ್ರ ಕೊಡಿಸುವುದು ಒಳ್ಳೆಯ ಕೆಲಸವಾಗುತ್ತದೆ.

ಇನ್ನು, ಆರೋಗ್ಯ ಇಲಾಖೆ ಬಗ್ಗೆ ಹೇಳುವುದಾದರೆ, ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳಿಲ್ಲ. ಈ ವಿಷಯ ಎಲ್ಲಾ ಎಂಎಲ್‌ಎಗಳಿಗೂ ಗೊತ್ತಿದೆ. ಡಾಕ್ಟರುಗಳ ಕೊರತೆಯಿಂದ ಎಂಎಲ್‌ಎಗಳು ಯಾವ ಸ್ಥಿತಿ ತಲುಪಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತು. ಅವರನ್ನು ನೇಮಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಯಬೇಕು. ಡಾಕ್ಟರುಗಳು ಖಾಸಗಿ ನರ್ಸಿಂಗ್ ಹೋಂಗೆ ಹೋಗಿ ಕೆಲಸ ಮಾಡುವುದನ್ನು ತಪ್ಪಿಸಬೇಕು. ಆದರಿಂದ ಆರೋಗ್ಯ ಇಲಾಖೆಯಲ್ಲಿ ಭ್ರಷ್ಟಾಚಾರ ಜಾಸ್ತಿಯಗುತ್ತಿದೆ. ಶಾಸಕರನ್ನು ರಕ್ಷಣಾ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ನಾವು ಅವರಿಗೆ 3 ಲಕ್ಷ ರೂಪಾಯಿಗಳ materials ಕೊಡುತ್ತೇವೆ, medicines ಕೊಡಿಸುತ್ತೇವೆ. ಚೀಟಿ ತೆಗೆದುಕೊಂಡು ಯಾವ ರೋಗಿ ಒಳಗೆ ಹೋದರೂ ಸಾಯಂಕಾಲ ನರ್ಸಿಂಗ್ ಹೋಂಗೆ ಬಾ ಎಂದು ಡಾಕ್ಟರುಗಳು ಹೇಳುತ್ತಾರೆ. ನಾವು ಸರ್ಕಾರಿ ಆಸ್ಪತ್ರೆಗಳಿಗೆ ಕೊಟ್ಟ ಪುಕ್ಕಟೆ ಇಂಜೆಕ್ಷನ್‌ಗಳನ್ನೇ ಖಾಸಗಿ ನರ್ಸಿಂಗ್ ಹೋಂನಲ್ಲಿ ರೋಗಿಗೆ ಕೊಟ್ಟು ಹಣ ತೆಗೆದುಕೊಳ್ಳುತ್ತಾರೆ. ಆದ್ದರಿಂದ, ನೀವು ವೈದ್ಯರಿಗೆ facilities ಕೊಟ್ಟಿಲ್ಲವಂತೆ ಅದನ್ನು ಕೊಟ್ಟು ಸಾಯಂಕಾಲದ ಹೊತ್ತು ಖಾಸಗಿ ನರ್ಸಿಂಗ್ ಹೋಂಗೆ ಹೋಗಿ ಕೆಲಸ ಮಾಡುವುದನ್ನು ತಪ್ಪಿಸಿ. ಯಾವುದೇ ಕೇಸ್ ಬಂದರೂ ಸಹ ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲಾ facilities ಇದ್ದರೂ operation ಮಾಡುವುದಿಲ್ಲ. ಹೆರಿಗೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಮಾಡುವುದಿಲ್ಲ. ಹೆರಿಗೆ ಡಾಕ್ಟರ್ ಸಾಯಂಕಾಲ ಖಾಸಗಿ ನರ್ಸಿಂಗ್‌ಹೋಂಗೆ ಬಾ ಎಂದು ಹೇಳಿ ಅಲ್ಲಿ 4–5

ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಹಾಗಾದರೆ, ಸರ್ಕಾರಿ ಆಸ್ಪತ್ರೆ ಏಕೆ ಇರಬೇಕು? ಇದನ್ನು ತಪ್ಪಿಸುವುದಕ್ಕಾಗುವುದಿಲ್ಲವೇ? ಇದರ ಬಗ್ಗೆ ಬಹಳ ಸಲ ಚರ್ಚೆಯಾಗಿದೆ? ಆದರೆ, ಏನಾಗಿದೆ? ನಿಮಗೆ ಏನು ಹೊರೆ ಬೀಳುತ್ತದೆ? ಏತಕ್ಕೋಸ್ಕರ ನೀವು ವೈದ್ಯರು ಖಾಸಗಿ ನರ್ಸಿಂಗ್‌ಹೋಂಗೆ ಹೋಗಿ ಕೆಲಸ ಮಾಡಲಿಕ್ಕೆ ಅವಕಾಶ ಕಲ್ಪಿಸಿದ್ದೀರಿ? ಇದನ್ನು ತಪ್ಪಿಸುವ ರೀತಿಯಲ್ಲಿ ಪ್ರಾಮಾಣಿಕ ಕೆಲಸ ಆಗಬೇಕು. ಗ್ರಾಮೀಣಾಭಿವೃದ್ಧಿಯಲ್ಲಿ ವಿಭಾಗದಲ್ಲಿದ್ದ sub division ಅನ್ನು divide ಮಾಡಿ ನೀರಾವರಿಗೆ ಒಂದು, civil ಕಾಮಗಾರಿಗಳಿಗೆ ಒಂದು ಎಂದು ಮಾಡಿದ್ದೀರಿ. ದಯಮಾಡಿ ಅದನ್ನು ಮಾಡಬೇಡಿ. ಅದನ್ನು ಮಾಡುವ ಬದಲು ಇನ್ನೊಂದು ವಿಶೇಷ sub division ಮಾಡಿ. ರಾಜೀವ್‌ಗಾಂಧಿ ಕುಡಿಯುವ ನೀರಿನ ಸಬ್‌ಮಿಷನ್‌ನಿಂದ ಇರುವ ಯೋಜನೆಗಳಿಗೋಸ್ಕರ ಜಿಲ್ಲೆಯಲ್ಲೊಂದು sub division, ತೆಗೆಯಿರಿ. ಅದರ ಮೂಲಕವೇ maintain ಮಾಡಿ. ಅದರ ಜೊತೆಗೆ, ರಾಜೀವ್‌ಗಾಂಧಿ submission ನಲ್ಲಿ 30–40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಯೋಜನೆ ಪೂರೈಸುತ್ತೀರಿ. ಮುಂದೆ ಆ ಗ್ರಾಮಪಂಚಾಯತಿಯಲ್ಲಿ ಲೈಟ್ ಬಿಲ್ ಕಟ್ಟುವುದಕ್ಕೆ ಹಣ ಇರುವುದಿಲ್ಲ. ಮೋಟಾರ್ ಸುಟ್ಟರೆ ರಿಪೇರಿ ಮಾಡಿಸುವವರು ಯಾರು? ನಿಜವಾಗಿಯೂ maintain ಮಾಡಿ ಆ ನೀರನ್ನು ಗ್ರಾಮೀಣ ಪ್ರದೇಶದ ರೈತರಿಗೆ ತಲುಪಿಸಿದ್ದೀರಾ? ತಲುಪಿಸುವುದಕ್ಕಾಗುತ್ತದೆಯೇ? ಅದಕ್ಕೆ ವಿಶೇಷ ಬಜೆಟ್ ಅನ್ನು ಇಡಬೇಕು. ಆ ಬಜೆಟ್ ಮೂಲಕ ಗ್ರಾಮಪಂಚಾಯತಿಗಳಿಗೆ ನಿರ್ವಹಣೆ ಕೊಡಬೇಡಿ. ಇದರ ನಿರ್ವಹಣೆಯನ್ನು ಸರ್ಕಾರವೇ ವಹಿಸಿಕೊಂಡು ಮಾಡದೇ ಹೋದರೆ ಈ ಯೋಜನೆಗೆ 30–40–50 ಕೋಟಿ ರೂಪಾಯಿ ಖರ್ಚು ಮಾಡಿ ಇರುವ ರಾಜೀವ್ ಗಾಂಧಿ ಸಬ್‌ಮಿಷನ್ ಯೋಜನಗಳಿವೆ, ಇವೆಲ್ಲ ಹಾಳಾಗಿ ಹೋಗುತ್ತವೆ. ರೈತರಿಗೆ ನೀರು ಸಿಗುವುದಿಲ್ಲ. ಗ್ರಾಮೀಣ ಪ್ರದೇಶದ ರೈತರಿಗೆ ನೀರು ಸಿಗಬೇಕಾದರೆ, ಈ ಯೋಜನೆಯ ನಿರ್ವಹಣೆಯನ್ನು ಸರ್ಕಾರವೇ ನಿರ್ವಹಣೆ ಮಾಡಬೇಕು.

ಇನ್ನು, ಪ್ರದೇಶಾಭಿವೃದ್ಧಿ ಮಂಡಳಿ ವಿಷಯದ ಬಗ್ಗೆ ಹೇಳುವುದಾದರೆ, 79 ಶಾಸಕರಿಗೆ 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಬೇರೆಯದಕ್ಕೆ ಬೇಕಾದಷ್ಟು ಹಣವನ್ನು ಕೊಟ್ಟಿದ್ದೀರಿ. ಆದರೆ, ಶಾಸಕರಿಗೆ ಹಣ ಕೊಡುವುದಿಲ್ಲ. ಶಾಸಕರನ್ನು ಅಯ್ಯೋ ಎನಿಸುತ್ತೀರಲ್ಲಾ? ನಾವೆಲ್ಲ ಎಂಎಲ್‌ಎಗಳೆಲ್ಲ ಗೆದ್ದು ಬಂದಿರುವುದರಿಂದ ತಾನೆ ತಾವು ಮುಖ್ಯಮಂತ್ರಿಯಾಗಿರುವುದು. ದಯವಿಟ್ಟು

ನಮ್ಮನ್ನೂ ಸ್ವಲ್ಪ ನೋಡಿಕೊಳ್ಳಿ. 224 ಜನ ಶಾಸಕರು ಗೆದ್ದು ಬರದಿದ್ದರೆ Assembly ಹೇಗೆ ಆಗುತ್ತದೆ? ಇಷ್ಟೊಂದು Board ಗಳು, ಮಂಡಳಿಗಳಿವೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಇದೆ. ಈ Board, ಮಂಡಳಿಗೆ ಒಬ್ಬೊಬ್ಬರನ್ನು ನೇಮಿಸಿ ಅವರಿಗೆ ಗೂಟದ ಕಾರನ್ನು ಕೊಟ್ಟಿದ್ದೀರಿ. 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ, 5 ಕೋಟಿ ರೂಪಾಯಿಗಳನ್ನು ಆಡಳಿತಾತ್ಮಕ ವೆಚ್ಚ ಎಂದು ಕೊಟಿದ್ದೀರಿ. ಇರುವ 150 ಬೋರ್ಡ್ ವಿಷಯ ತೆಗೆದುಕೊಂಡರೂ ಎಲ್ಲಾ ಬೋರ್ಡ್‌ನಲ್ಲೂ ಅದೇ ರೀತಿ ಇದೆ. ಅವರ ಕಾರಿಗೆ diesel ಹಾಕಿಸುವುದಕ್ಕೆ ಹಣ ಇದೆಯೋ, ಇಲ್ಲವೋ ಗೊತ್ತಿಲ್ಲ. ಇಂಥ Board ಗಳನ್ನು ಏಕೆ ಇಟ್ಟುಕೊಂಡಿದ್ದೀರಿ? ದಯಮಾಡಿ ಅವುಗಳನ್ನು ರದ್ದು ಮಾಡಿ. ರಾಜಕೀಯ ಉದ್ದೇಶಕ್ಕೋಸ್ಕರ ಈ ಬೋರ್ಡ್‌ಗಳನ್ನು ಇಟ್ಟುಕೊಂಡು ಈ ದೇಶದ ಆರ್ಥಿಕ ಪರಿಸ್ಥಿತಿಯನ್ನು ಏಕೆ ಹಾಳು ಮಾಡುತ್ತೀರಿ? ದಯಮಾಡಿ ಈ Board ಗಳನ್ನು ರದ್ದು ಮಾಡಬೇಕು.

ಇನ್ನು, ಹಿಂದುಳಿದ ವರ್ಗಗಳ ಯೋಜನೆಗಳ ಬಗ್ಗೆ ಹೇಳುತ್ತೇನೆ. ದೇವರಾಜ ಅರಸುರವರು ಯುಗಪುರುಷರು, ಅವರನ್ನು ನಾವು ನೆನೆಯಬೇಕು. ಈ ದೇಶ, ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣಕ್ಕೋಸ್ಕರ ಒಂದು ಆಯೋಗ ರಚಿಸಿ ನೈತಿಕ ನೆಲೆಗಟ್ಟನ್ನು ತಂದುಕೊಟ್ಟ ಮಹಾನ್‌ನಾಯಕರು. ಅವರ ಹೆಸರಿನಲ್ಲಿ ಒಂದು ನಿಗಮವನ್ನು ಮಾಡಿದ್ದೀರಿ. ಆ ನಿಗಮಕ್ಕೆ ನೀವು ಕೊಟ್ಟ ಹಣ ಯಾವುದೋ ಗಾದೆಯ ರೀತಿ ಆಗುತ್ತಿದೆ. ಆ ರೀತಿ ಹಣ ಇಟ್ಟಿದ್ದೀರಿ. ಸಮುದ್ರದಲ್ಲಿ ಹುಣಸೆ ಹಣ್ಣು ತೊಳೆದ ಹಾಗೆ ಆಗುತ್ತದೆ. ದೇವರಾಜು ಅರಸುರವರ ದಿನಾಚರಣೆ ಮಾಡಿ ಅದಕ್ಕೆ ನಮ್ಮನ್ನು ಕರೆಯುತ್ತೀರಿ. ಅಲ್ಲೊಂದು ಪುಸ್ತಕ ಕೊಡುತ್ತೀರಿ. ನಾವು ಭಾಷಣ ಮಾಡಿದ್ದೇ ಮಾಡಿದ್ದು. ಗೊಲ್ಲರು, ಯಾದವ ಜನಾಂಗಕ್ಕೆ 20 ಕೋಟಿ, ಇಂಥ ಜನಾಂಗ 30 ಕೋಟಿ ಎನ್ನುತ್ತಾರೆ. ಆದರೆ, ಆ ಹಣವೆಲ್ಲ ಎಲ್ಲಿಗೆ ಹೋಯಿತು? ಕೊನೆಗೆ ಯಾದವ ಜನಾಂಗಕ್ಕೆ release ಆಗಿದ್ದು 4 ಕೋಟಿ ರೂಪಾಯಿಗಳು ಮಾತ್ರ. ಯಾದವ ಹಟ್ಟಿಯ ವಿಷಯವನ್ನು ತೆಗೆದುಕೊಂಡು ದೇವರಾಜು ಅರಸು ನಿಗಮಕ್ಕೆ ಹೋಗಿ ಬರುವುದೇ ಆಯಿತು. ಆದರೂ ಆ ಹಣ ಬರಲಿಲ್ಲ. ದೇವರಾಜು ಅರಸು ನಿಗಮದ office ಗೆ ಸುಮ್ಮನೆ 22 ಕೋಟಿ ರೂಪಾಯಿಗಳನ್ನಿಟ್ಟಿದ್ದೀರಿ. ಹಿಂದುಳಿದ ವರ್ಗದವರ ಕಲ್ಯಾಣ ಮಾಡುತ್ತೇವೆನ್ನುತ್ತೀರಿ. ದಯವಿಟ್ಟು ಅದಕ್ಕೆ ಹೆಚ್ಚು ಒತ್ತು ಕೊಡಿ. ಒಂದು ಕ್ಷೇತ್ರಕ್ಕೆ 10 borewell ಕೊಡುತ್ತೀರಿ. MLA ಅನ್ನು

ಸೋಲಿಸಬೇಕೆಂದರೆ ಇಂಥ 4 ತೆಗೆದುಕೊಂಡರೆ ಸಾಕು. ಒಂದು ಕ್ಷೇತ್ರದಲ್ಲಿ borewell ಬೇಕೆಂದು 400–500 ಜನ applications ಹಾಕುತ್ತಾರೆ. ಅದಕ್ಕೆ ಎಷ್ಟು influence ಗೊತ್ತೇ? ನೀವು ಇಷ್ಟು ಕೊಡದೇ ಹೋದರೆ ನಾನು ಮುನಿಸಿಕೊಂಡು ಬೇರೆ ಪಾರ್ಟಿಗೆ ಹೋಗುತ್ತೇನೆಂದು ಹೇಳುತ್ತಾರೆ. ಆ 10 borewell ಗಳನ್ನು ಹಂಚುವ ಹೊತ್ತಿಗೆ ಸಾಕಾಗಿ ಹೋಗಿರುತ್ತದೆ. ಅದರ ಆಯ್ಕೆಗೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅದಕ್ಕೆ ಬೇರೆಯವರನ್ನು ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿದ್ದರೆ ನಾವು ತಪ್ಪಿಸಿಕೊಳ್ಳಬಹುದಾಗಿತ್ತು.

ಶ್ರೀ ಎನ್. ಸಂಪಂಗಿ: ಅದರಲ್ಲಿ ಬಿ.ಸಿ.ಎಂ.–ಬಿ ಗ್ರೂಪ್‌ಗೆ ಇಲ್ಲ. ಬಿಸಿಎಂ–ಎ ಗೆ ಮಾತ್ರ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಹಾಗಾಗಿ ಇನ್ನೂ 50 borewell ಗಳನ್ನು ೦ಡಿ. SC/ST ಇವರಿಗೆಲ್ಲ ಏನು ಉತ್ತೇಜನ ಕೊಡುತ್ತಿದ್ದೀರಿ ಅದೇ ರೀತಿ ಸ್ತಿ ಮಾಡಿ. ಆಗ ಎಂಎಲ್‌ಎಗಳಿಗೆ ಘನತೆ ಗೌರವ ಬರುತ್ತದೆ. ಇಷ್ಟು ಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಯವರಿಂದ ದಿನಾಂಕ: 11, 12 ುತ್ತು 13 ರ ಮಾರ್ಚ್ 2011ರಂದು ಬೆಳಗಾವಿಯಲ್ಲಿ ನಡೆಯಲಿರುವ 2ನೇ ಶ್ವ ಕನ್ನಡ ಸಮ್ಮೇಳನದ ಬಗ್ಗೆ statement ಮಾಡುತ್ತಾರೆ.

2) ಮುಖ್ಯಮಂತ್ರಿಗಳ ಹೇಳಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):

- 2011ರ ಮಾರ್ಚ್ 11, 12 ಮತ್ತು 13ರಂದು 2ನೇ ವಿಶ್ವ ಕನ್ನಡ ಸಮ್ಮೇಳನವನ್ನು ಅದ್ದೂರಿಯಾಗಿ ಬೆಳಗಾವಿಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ.
- ವಿಶ್ವಕನ್ನಡ ಸಮ್ಮೇಳನ ಆಚರಿಸುವ ಸಲುವಾಗಿ 15 ಸಮಿತಿಗಳನ್ನು ವಿವಿಧ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ರಚಿಸಲಾಗಿದೆ. ಹಾಗೂ ಸಮ್ಮೇಳನದ ಸಿದ್ಧತೆಯು ಭರದಿಂದ ಸಾಗಿದ್ದು, ರಾಜ್ಯ, ರಾಷ್ಟ್ರದ ಹಾಗೂ ವಿದೇಶದಲ್ಲಿರುವ ಕನ್ನಡಿಗರು ಪಾಲ್ಗೊಳ್ಳಲ್ಲಿದ್ದಾರೆ.
- ದಿನಾಂಕ 11–3–2011ರಂದು ಉದ್ಘಾಟನಾ ಸಮಾರಂಭವನ್ನು ರಾಣಿ ಚೆನ್ನಮ್ಮ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಉದ್ಘಾಟನೆಯನ್ನು ಶ್ರೀ ಎನ್.ಆರ್.